

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಡಿಸೆಂಬರ್ 31 ಭಾನುವಾರ 2023

ಸಂಪುಟ: 44 | ಸಂಚಿಕೆ: 254 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com





'ಮೈಸೂರು ಮಿತ್ರ'ನ 2024ನೇ ಸಾಲಿನ ವರ್ಣರಂಜಿತ ಕ್ಯಾಲೆಂಡರ್‌ನ್ನು ನಾಳೆಯ (ಜ.1) ಸಂಚಿಕೆಯಲ್ಲಿ ನೀಡಲಾಗುತ್ತಿದೆ. ನಿಮ್ಮ ಪ್ರತಿ ಕಾಯ್ದಿರಿಸಿ...

ಕೆಬಿಜೆಯವರ ಛೂಮಂತ್ರ... ಛೂಮಂತ್ರ...



ಸದ್ಗುರು ಶ್ರೀ ಮಧುಸೂದನ ಸಾಯಿ–1

ಭಗವಾನ್ ಶ್ರೀ ಸತ್ಯಸಾಯಿ ಬಾಬಾರ ಅಪರ ಆತ್ಮವೆ?

■ ಪುಟ–4

ರಾಜ್ಯದಲ್ಲಿ ಕೋವಿಡ್ ರೂಪಾಂತರಿ ವ್ಯಾಪಕ ಹಾವಳಿ ಹಿನ್ನೆಲೆ

ಜ.2ರಿಂದ ಲಸಿಕೆ ಅಭಿಯಾನ

● ಕೇಂದ್ರ ನಿರ್ದೇಶನದಂತೆ ರಾಜ್ಯದ ಕ್ರಮ ● ರಾಜ್ಯದಲ್ಲಿ 1.5 ಕೋಟಿ ಮಂದಿ ಇನ್ನೂ ಮುನ್ನೆಚ್ಚರಿಕಾ ಲಸಿಕೆ ಪಡೆದಿಲ್ಲ ● ಕೋರ್ಬಿ ವ್ಯಾಕ್ಸ್ ಲಸಿಕೆ ನೀಡಲು ನಿರ್ಧಾರ



ಬೆಂಗಳೂರು, ಡಿ.30(ಕೆಎಂಶಿ)– ರಾಜ್ಯದಲ್ಲಿ ಕೋವಿಡ್ ರೂಪಾಂತರಿ ಜೆಎನ್.1 ಸೋಂಕು ಹೆಚ್ಚಳವಾಗುತ್ತಿರುವ ಹಿನ್ನೆಲೆಯಲ್ಲಿ ಜನವರಿ 2ರಿಂದ ಲಸಿಕೆ ಅಭಿಯಾನ ಆರಂಭಗೊಳ್ಳಲಿದೆ.

ದಿನದಿಂದ ದಿನಕ್ಕೆ ಸೋಂಕಿನ ಪ್ರಮಾಣ ಹೆಚ್ಚಿ, ಆಸ್ಪತ್ರೆಗೆ ದಾಖಲಾಗುತ್ತಿರುವವರ ಸಂಖ್ಯೆಯಲ್ಲೂ ಗಣನೀಯ ಏರಿಕೆ ಕಂಡುಬಂದ ಹಿನ್ನೆಲೆಯಲ್ಲಿ ಲಸಿಕೆ ಅಭಿಯಾನಕ್ಕೆ ಮತ್ತೆ ಚಾಲನೆ ನೀಡಲಾಗುತ್ತಿದೆ.

ಕೋರ್ಬಿ ವ್ಯಾಕ್ಸ್ ಲಸಿಕೆಯನ್ನು ಕೇಂದ್ರ ಸರ್ಕಾರದ ಮಾರ್ಗದರ್ಶನದಲ್ಲಿ ನೀಡಲು ಸರ್ಕಾರ ಮುಂದಾಗಿದೆ. ಕರ್ನಾಟಕದಲ್ಲಿ ಶೇಕಡ 27ರಷ್ಟು ಮಂದಿ ಮಾತ್ರ ಕೋವಿಡ್ ಲಸಿಕೆಯ ಎಲ್ಲಾ ಮೂರು ಡೋಸ್‌ಗಳನ್ನು ಪಡೆದಿದ್ದಾರೆ. ರಾಜ್ಯದಲ್ಲಿ ಇನ್ನೂ 1.5 ಕೋಟಿಗೂ



ಅಧಿಕ ಜನರು ಮುನ್ನೆಚ್ಚರಿಕಾ ಲಸಿಕೆ ಪಡೆಯುವುದು ಬಾಕಿ ಇದೆ, ಇಂತಹವರು ಸೋಂಕು ತಡೆ ದೃಷ್ಟಿಯಿಂದ ಲಸಿಕೆ ಪಡೆಯುವುದು ಅನಿವಾರ್ಯ ಎಂದು ಸರ್ಕಾರ ತಿಳಿಸಿದೆ.

ಮೊದಲ ಹಂತದಲ್ಲಿ 30,000 ಕೋರ್ಬಿ ವ್ಯಾಕ್ಸ್ ಲಸಿಕೆ ಖರೀದಿಸಿದ್ದು, ಈ ಡೋಸ್ ಅನ್ನು ಗಂಭೀರ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವವರಿಗೆ ನೀಡಲಾಗುವುದು.

2019ರಲ್ಲಿ ವಿಶ್ವಾದ್ಯಂತ ಸೋಂಕು ಕಾಣಿಸಿಕೊಂಡು ತಲ್ಲಣ ಉಂಟು ಮಾಡಿತ್ತು ಸೋಂಕಿಗೆ ಲಕ್ಷಾಂತರ ಜೀವಗಳು ಬಲಿಯಾಗಿದ್ದವು. ಅನೇಕ ರಾಷ್ಟ್ರಗಳು ಸೋಂಕು ತಡೆಗೆ ಸಂಶೋಧನೆಗಳನ್ನು ನಡೆಸಿ, ಲಸಿಕೆಗಳನ್ನು ಕಂಡು ಹಿಡಿದವು.

ಇಂಗ್ಲೆಂಡ್ ಸಹಯೋಗದೊಂದಿಗೆ ಭಾರತ ಕೋವಿಶೀಲ್ಡ್ ಲಸಿಕೆ ಯಶಸ್ವಿಯಾಗಿ ತಯಾರಿಸಿ ಸೋಂಕು ಹತ್ತಿಕ್ಕುವಲ್ಲಿ ಮುನ್ನುಡಿ ಬರೆಯಿತು. ಕೋವಿಶೀಲ್ಡ್ ಜೊತೆಗೆ ಕೋವ್ಯಾಕ್ಸಿನ್ ಲಸಿಕೆಯೂ ಯಶಸ್ವಿಯಾಗಿ ರಾಷ್ಟ್ರದಲ್ಲಿ ಮಹಾಮಾರಿಯನ್ನು ಹತ್ತಿಕ್ಕಲು ಸಾಧ್ಯವಾಯಿತು.

ಕೋವಿಡ್–19 ನಂತರ ಇದರ ಅನೇಕ ರೂಪಾಂತರಿಗಳು ಹುಟ್ಟಿಕೊಂಡವು, ಎರಡನೇ ರೂಪಾಂತರಿ ನಂತರದ ತಳಿಗಳು ಹೆಚ್ಚು ಪ್ರಾಣಾಂತಿಕವಾಗಲಿಲ್ಲ. ಆದರೆ, ಲಸಿಕೆ ಪಡೆಯದವರು ಮತ್ತು ತೀವ್ರತರ ಖಾಯಿಲೆಗಳಿಂದ ಬಳಲುತ್ತಿರುವವರಿಗೆ ರೂಪಾಂತರಿ ತಳಿಗಳು ಪ್ರಾಣಾಂತಿಕವಾಗಿ ಸಾವು–ನೋವುಗಳು ಸಂಭವಿಸಿದವು. ಇತ್ತೀಚಿನ ತಳಿ ಜೆಎನ್.1 ತೀವ್ರ ಅಪಾಯಕಾರಿ ಅಲ್ಲ ಎಂದು ವೈದ್ಯಕೀಯ ತಜ್ಞರು ಹೇಳುತ್ತಿರುವವರಾದರೂ, ಸೋಂಕು ದಿನೇ ದಿನೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರ ಕೋರ್ಬಿ ವ್ಯಾಕ್ಸ್ ನೀಡಲು ಮುಂದಾಗಿದೆ.

ಆಸ್ಪತ್ರೆಗಳಲ್ಲಿ ವಿಶೇಷ ವಾರ್ಡ್‌ಗಳನ್ನು ಮೀಸಲಿರಿಸಿದ್ದು, ಕರ್ನಾಟಕದಲ್ಲಿ ಈಗಾಗಲೇ ಐದು ಮಂದಿ ಕೋವಿಡ್ ಹೊಸ ರೂಪಾಂತರಿಗೆ ಬಲಿಯಾಗಿದ್ದಾರೆ, ಸೋಂಕಿತರ ಸಂಖ್ಯೆ ಸಾವಿರ ದಾಟಿದೆ.




— ಮೂವರು ಇಂಜಿನಿಯರಿಂಗ್ —

ವಿದ್ಯಾರ್ಥಿಗಳು ಜಲಸಮಾಧಿ

ಪೊನ್ನಂಪೇಟೆ ಬಳಿಯ ಬರಪೊಳೆ ನದಿಯಲ್ಲಿ ದುರಂತ





ಮಡಿಕೇರಿ,ಡಿ.30– ನದಿಯಲ್ಲಿ ಮುಳುಗಿ ಮೂವರು ಇಂಜಿನಿಯರಿಂಗ್ ವಿದ್ಯಾರ್ಥಿಗಳು ದುರಂತ ಸಾವಿಗೀಡಾದ ದಾರುಣ ಘಟನೆ ಪೊನ್ನಂಪೇಟೆ ತಾಲೂಕಿನ ಬೇಗೂರು ಗ್ರಾಮದ ಬರಪೊಳೆ(ಕೊಂಕಣ ಹೊಳೆ) ನದಿಯಲ್ಲಿ ನಡೆದಿದೆ. ಪೊನ್ನಂಪೇಟೆ ಸಿಐಟಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಶ್ರೀಮಂಗಲ ನೆಮ್ಮಲೆ ಗ್ರಾಮ ನಿವಾಸಿ ಕುಂಞಂಗಡ ರಶಿಕ್ ಕುಶಾಲಪ್ಪ(20), ಜೋಡುಬೀಟಿ ಗ್ರಾಮದ ಮಂಗೇಟಿರ ಪಿ.ಆಕಾಶ್ ಬಿದ್ದಪ್ಪ(20), ಶ್ರೀಮಂಗಲ ಗ್ರಾಮದ ಉಳುವಂಗಡ ಸುದೇಶ್ ಅಯ್ಯಪ್ಪ (20) ಜಲಸಮಾಧಿಯಾದ ವಿದ್ಯಾರ್ಥಿಗಳು. ಮೃತರೆಲ್ಲ ಇಂಜಿನಿಯರಿಂಗ್ ದ್ವಿತೀಯ ವರ್ಷದ ವಿದ್ಯಾರ್ಥಿಗಳಾಗಿದ್ದಾರೆ.

ಪೊನ್ನಂಪೇಟೆ ಸಿಐಟಿ ಕಾಲೇಜಿನ ಒಟ್ಟು ನಾಲ್ವರು ವಿದ್ಯಾರ್ಥಿಗಳು ಕಾಲೇಜಿನಿಂದ 5 ಕಿ.ಮೀ ದೂರದಲ್ಲಿರುವ ಬರಪೊಳೆಗೆ ತೆರಳಿದ್ದು, ಈ ಪೈಕಿ ಮೂವರು ನೀರಿನಲ್ಲಿ ಈಜಲು ಮುಂದಾಗಿದ್ದಾರೆ. ಓರ್ವ ಮಾತ್ರ ಕಾಲು ನೋವಿನ ಕಾರಣ ನೀರಿಗೆ ಇಳಿಯದೆ ದಡದಲ್ಲಿ ಉಳಿದಿದ್ದಾನೆ. ಈ ವೇಳೆ ನೀರಿನ ಸೆಳೆತದಿಂದ 3 ಮಂದಿ ಮುಳುಗಿ ಮೃತಪಟ್ಟಿದ್ದಾರೆ. ಮಾಹಿತಿ ತಿಳಿದು ಘಟನಾ ಸ್ಥಳಕ್ಕೆ ಪೊನ್ನಂಪೇಟೆ ಪೊಲೀಸರು ತೆರಳಿ, ತೀತಿಮಾಡ ಪವಿ, ಕಡೇಮಾಡ ಅನಿಲ್ ಕಾಳಪ್ಪ,

● 9ನೇ ಪುಟಕ್ಕೆ

ಸಂಕ್ರಾಂತಿ ವೇಳೆಗೆ ನಿಗಮ ಮಂಡಳಿಗೆ ನೇಮಕಾತಿ

ಶಾಸಕರು, ಕಾರ್ಯಕರ್ತರಿಗೆ ಸಮಾನಾವಕಾಶ: ಡಿಕೆಶಿ



ಬೆಂಗಳೂರು, ಡಿ. 30(ಕೆಎಂಶಿ)– ಸಂಕ್ರಾಂತಿ ವೇಳೆಗೆ ನಿಗಮ–ಮಂಡಳಿಗಳಿಗೆ ಅಧ್ಯಕ್ಷರ ನೇಮಕ ಆಗುವ ನಿರೀಕ್ಷೆ ಇದ್ದು, ಶಾಸಕರು ಹಾಗೂ ಕಾರ್ಯಕರ್ತರಿಗೂ ಸಮಾನ ಸಂಖ್ಯೆಯಲ್ಲಿ ಅಧ್ಯಕ್ಷಗಿರಿ ನೀಡಲಾಗುವುದು ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

● 9ನೇ ಪುಟಕ್ಕೆ





ವರುಣ ಗ್ರಾಮದಲ್ಲಿ 11ನೇ ಶತಮಾನದ ಜೈನ ತೀರ್ಥಂಕರರ ಮೂರ್ತಿಗಳು ಪತ್ತೆ

ಚರಂಡಿ ಕಾಮಗಾರಿಗಾಗಿ ಗುಂಡಿ ತೆಗೆಯುವಾಗ 3 ಅಡಿ ಆಳದಲ್ಲೇ ದೊರೆತ ವಿಗ್ರಹಗಳು ಮ್ಯೂಸಿಯಂಗೆ ಸ್ಥಳಾಂತರ



ವರುಣ ಗ್ರಾಮದಲ್ಲಿ ಪತ್ತೆಯಾದ ಪುರಾತನ ವಿಗ್ರಹಗಳನ್ನು ಮ್ಯೂಸಿಯಂಗೆ ಸ್ಥಳಾಂತರಿಸುವ ಕಾರ್ಯದಲ್ಲಿ ನಿರತರಾಗಿದ್ದ ಪುರಾತನ ಇತಿಹಾಸ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ. ಎನ್.ಎಸ್. ರಂಗರಾಜು, ಪರಂಪರೆ ಇಲಾಖೆ ಉಪನಿರ್ದೇಶಕಿ ಸಿ.ಎನ್. ಮಂಜುಳಾ, ಧರ್ಮಸ್ಥಳ ಟ್ರಸ್ಟ್‌ನ ಡಾ. ಶಶಿಧರ, ಪ್ರಸನ್ನಕುಮಾರ್ ಹಾಗೂ ವಿನೋದ ಜೈನ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಡಿ.30(ಆರ್‌ಕೆ)– ಮೈಸೂರು ತಾಲೂಕು ವರುಣ ಗ್ರಾಮದಲ್ಲಿ 11ನೇ ಶತಮಾನದ ಮೂರು ಜೈನ ತೀರ್ಥಂಕರರ ವಿಗ್ರಹಗಳು ಪತ್ತೆಯಾಗಿವೆ.

ಜೈನ ತೀರ್ಥಂಕರ, ಕೂಶ್ಮಾಂದಿನಿ ಮೂರ್ತಿ ಹಾಗೂ ತಲೆ ಭಾಗದ ಶಿಲಾಕೃತಿಗಳು ಕಳೆದ 6 ದಿನಗಳ ಹಿಂದೆ ಪತ್ತೆಯಾಗಿವೆ. ಗ್ರಾಮದಲ್ಲಿ ಚರಂಡಿ ಕಾಮಗಾರಿಗಾಗಿ ಜೆಸಿಬಿಯಿಂದ ಗುಂಡಿ ತೆಗೆಯುತ್ತಿದ್ದಾಗ ಮೂರಡಿ ಆಳದಲ್ಲಿ ಕಲ್ಲಿನ ವಿಗ್ರಹಗಳು ಸಿಕ್ಕಿವೆ ಎಂದು ಪುರಾತನ ಇತಿಹಾಸ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ. ಎನ್.ಎಸ್.ರಂಗರಾಜು ತಿಳಿಸಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿ ಪರಿಶೀಲಿಸಿದಾಗ ನೆಲದಲ್ಲಿ ಪತ್ತೆಯಾದ ಜೈನ ತೀರ್ಥಂಕರ, ಕೂಶ್ಮಾಂದಿನಿ ವಿಗ್ರಹಗಳು ಹಾಗೂ ಜೈನ ತೀರ್ಥಂಕರರ ವಿಗ್ರಹದ ತಲೆ ಭಾಗ ಎಂಬುದು ತಿಳಿಯಿತು. ಮುರಿದಿದ್ದ ಈ ಕಲ್ಲಿನ ವಿಗ್ರಹಗಳನ್ನು ಸ್ವಚ್ಛಗೊಳಿಸಿದ ಬಳಿಕ ಮೈಸೂರಿನ ಐಜಿಆರ್‌ಎಂಎಸ್ ಸಂಗ್ರಹಾಲಯಕ್ಕೆ ಸ್ಥಳಾಂತರಿಸಿ ಸುರಕ್ಷಿತವಾಗಿ ಇರಿಸಲಾಗಿದೆ ಎಂದರು.

ವರುಣ, ತಲಕಾಡು, ಹೆಮ್ಮಿಗೆ, ಮೂಗೂರು, ತಿ.ನರಸೀಪುರ, ವರಕೋಡು ಗ್ರಾಮಗಳ ಸುತ್ತಮುತ್ತ ಪ್ರದೇಶಗಳು ಗಂಗರು ಮತ್ತು ಹೊಯ್ಸಳರ ಆಳ್ವಿಕೆಯಲ್ಲಿ ಜೈನ ಮುನಿಗಳ ಕೇಂದ್ರಗಳಾಗಿದ್ದವು ಎಂಬ ಕುರುಹುಗಳಿರುವುದು ವಿಗ್ರಹಗಳು ಕಾಣಿಸಿಕೊಂಡಿರುವುದಕ್ಕೆ ನಿದರ್ಶನಗಳಿವೆ ಎಂದು ಪ್ರೊ. ರಂಗರಾಜು ತಿಳಿಸಿದ್ದಾರೆ.

ಈ ರೀತಿಯ ಪುರಾತನ ಶಾಸನ, ವಿಗ್ರಹಗಳು ಇನ್ನೂ ಭೂಮಿಯಲ್ಲಿ ಹುದುಗಿರುವ ಸಾಧ್ಯತೆ ಇದ್ದು, ಸರ್ಕಾರ ಪುರಾತತ್ವ, ಸಂಗ್ರಹಾಲಯಗಳು ಹಾಗೂ ಪರಂಪರೆ ಇಲಾಖೆ ಮೂಲಕ ಶೋಧ ನಡೆಸಿ ಹೊರತೆಗೆದು ಸಂರಕ್ಷಿಸುವ ಕೆಲಸವಾಗಬೇಕು ಎಂದು ನುಡಿದರು. ಪರಂಪರೆ ಇಲಾಖೆ ಉಪನಿರ್ದೇಶಕಿ ಮಂಜುಳಾ, ಧರ್ಮಸ್ಥಳ ಟ್ರಸ್ಟ್‌ನ ಡಾ.ಶಶಿಧರ, ಪ್ರಸನ್ನ ಕುಮಾರ್, ಮೈಸೂರಿನ ವಿನೋದ ಜೈನ್ ವರುಣ ಗ್ರಾಮದಲ್ಲಿ ಸಿಕ್ಕಿದ ವಿಗ್ರಹಗಳನ್ನು ಸ್ಥಳಾಂತರಿಸುವ ಕಾರ್ಯದಲ್ಲಿ ಪಾಲ್ಗೊಂಡಿದ್ದರು.

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ತರಬೇತಿ

ಮೈಸೂರು, ಡಿ.30(ಬಿಎಲ್‌ಯು)–ಕರ್ನಾಟಕ ಸರ್ಕಾರ ನಡೆಸುತ್ತಿರುವ ಪಿಡಿಓ, ಎಫ್‌ಡಿಎ ಮತ್ತು ಎಸ್‌ಡಿಎ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಮೈಸೂರಿನ ಜ್ಞಾನಬುತ್ತಿ ಸಂಸ್ಥೆ 45 ದಿನಗಳ ಉಚಿತ ತರಬೇತಿ ಆಯೋಜಿಸಿದೆ. ಜ.2ರೊಳಗೆ ಸಂಜೆ 5.30ರಿಂದ 7.30 ಗಂಟೆವರೆಗೆ ಮೈಸೂರಿನ ಲಕ್ಷ್ಮೀಪುರಂ ಸರ್ಕಾರಿ ಪ್ರೌಢಶಾಲೆಯಲ್ಲಿರುವ ಜ್ಞಾನಬುತ್ತಿ ಸಂಸ್ಥೆಯಲ್ಲಿ ಅಭ್ಯರ್ಥಿಗಳು ತಮ್ಮ ಹೆಸರು ನೋಂದಾಯಿಸಿಕೊಳ್ಳಬಹುದು ಎಂದು ಸಂಸ್ಥೆಯ ಕಾರ್ಯದರ್ಶಿ ಹೆಚ್.ಬಾಲಕೃಷ್ಣ ತಿಳಿಸಿದ್ದಾರೆ. ಹೆಚ್ಚಿನ ವಿವರಗಳಿಗೆ ಸಂಯೋಜಕರಾದ ಸಿ.ಕೆ.ಕಿರಣ್ ಕೌಶಿಕ್ ಮೊ.ಸಂಖ್ಯೆ 9972830857, ಅಥವಾ ಕೆ.ವೈ.ನಾಗೇಂದ್ರ ಮೊ.ಸಂಖ್ಯೆ 8296788251 ಅವರನ್ನು ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.



ಮೈಸೂರಿನ ಬೃಂದಾವನ ಬಡಾವಣೆ ಗಣಪತಿ ದೇವಸ್ಥಾನದ ಆವರಣದಲ್ಲಿ ವೀರ ಮಡಿವಾಳ ಮಾಚಿದೇವರ ಸಂಘದ ನೂತನ ಕ್ಯಾಲೆಂಡರ್ ಅನ್ನು ನಗರಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು ಮತ್ತು ದೇವರಾಜ್ ಬಿಡುಗಡೆಗೊಳಿಸಿದರು. ಈ ವೇಳೆ ಮಡಿವಾಳ ಸಮಾಜದ ಹೆಚ್ಚು ಅಂಕ ಪಡೆದ ಹರ್ಷಿತ ಅವರನ್ನು ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಅಧ್ಯಕ್ಷ ಮಹೇಶ್, ಗೌರವ ಅಧ್ಯಕ್ಷ ಪುಟ್ಟಸ್ವಾಮಿ, ಪ್ರಧಾನ ಕಾರ್ಯದರ್ಶಿ ಸುನಿಲ್, ಕಾರ್ಯದರ್ಶಿ ರಂಗಸ್ವಾಮಿ, ಸಿದ್ದರಾಜು, ತಮ್ಮಣ್ಣ, ವರದರಾಜ್, ಅಶೋಕ್ ಉಪಸ್ಥಿತರಿದ್ದರು.

ಮದ್ಯದಂಗಡಿ ತೆರವಿಗೆ ಆಗ್ರಹಿಸಿ ರೈತ ಸಂಘ ಪ್ರತಿಭಟನೆ



ಮೈಸೂರು, ಡಿ.30(ಜಿಎ)–ನಂಜನಗೂಡು ತಾಲೂಕಿನ ಕಸುವಿನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸಿದ್ದಯ್ಯನಹುಂಡಿ ಗೇಟ್ ಬಳಿ ತೆರೆದಿರುವ ಮದ್ಯದಂಗಡಿ ತೆರವುಗೊಳಿಸಬೇಕೆಂದು ಒತ್ತಾಯಿಸಿ ರಾಜ್ಯ ರೈತ ಸಂಘದಿಂದ ಮೈಸೂರಿನ ಕುವೆಂಪು ನಗರದಲ್ಲಿರುವ ಅಬಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ಸಿದ್ದಯ್ಯನಹುಂಡಿ ಗೇಟ್ ಬಳಿ ಬೇರೆ ಕಡೆಯಿಂದ ಸ್ಥಳಾಂತರ ಮಾಡಿದ ಮದ್ಯದಂಗಡಿ ತೆರೆಯಲಾಗಿದೆ. ಇದನ್ನು ವಿರೋಧಿಸಿ ಕಸುವಿನಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯರು ಗ್ರಾಮಸ್ಥರು ನಿಯಮಾವಳಿ ಮಾಡಿ ತೆರವುಗೊಳಿಸಲು ತೀರ್ಮಾನಿಸಲಾಗಿದೆ. ಹೀಗಾಗಿ ಈ ಕೂಡಲೇ ಮದ್ಯದಂಗಡಿ ತೆರವುಗೊಳಿಸಬೇಕೆಂದು ಆಗ್ರಹಿಸಿದರು.

ಶಾಲಾ, ಕಾಲೇಜಿಗೆ ಹೋಗುವ ವಿದ್ಯಾರ್ಥಿಗಳು ಸಾರ್ವಜನಿಕರು, ಮಹಿಳೆಯರು ಮದ್ಯದಂಗಡಿ ಮಾರ್ಗವಾಗಿಯೇ ಹೋಗುವುದರಿಂದ ತೊಂದರೆ ಉಂಟಾಗುತ್ತದೆ. ಜಿಲ್ಲಾ ರೈತ ಸಂಘದ ನೇತೃತ್ವದಲ್ಲಿ 16 ದಿನಗಳಿಂದ ಶಾಂತಿಯುತವಾಗಿ ಚಳವಳಿ ನಡೆಸಿಕೊಂಡು ಬರುತ್ತಿದ್ದು, ಡಿ.28ರಂದು ಪ್ರತಿಭಟನೆ ನಡೆಸುತ್ತಿದ್ದಾಗ ಅಂಗಡಿ ಮಾಲೀಕರು ಪೊಲೀಸರನ್ನು ಕರೆ ತಂದು ಮಹಿಳೆಯರ ಕೈ ಹಿಡಿದು ಎಳೆದಾಡಿ, ಹಲ್ಲೆಗೆ ಯತ್ನಿಸಿದ್ದಾರೆ. ಸುತ್ತಮುತ್ತಲಿನ ಗ್ರಾಮದ ಮಹಿಳಾ ಸಂಘದವರು ಅಬಕಾರಿ ಇಲಾಖೆಗೆ ಪತ್ರವನ್ನೂ ಬರೆದಿದ್ದಾರೆ. ಹೀಗಾಗಿ ಯಾವುದೇ ಕಾರಣಕ್ಕೂ ಮದ್ಯದಂಗಡಿ ನಡೆಸಲು ಅವಕಾಶ ಕೊಡಬಾರದು. ಅಹಿತಕರ ಘಟನೆಗೆ ಕಾರಣರಾದವರನ್ನು ಕಾನೂನು ರೀತಿ ಶಿಕ್ಷಿಸಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊಸಕೋಟೆ ಬಸವರಾಜು, ಮುಖಂಡರಾದ ಪಿ.ಮರಂಕಯ್ಯ, ಶಿರಮಳ್ಳಿ ಸಿದ್ದಪ್ಪ, ಹೆಜ್ಜಿಗೆ ಪ್ರಕಾಶ್, ಆನಂದೂರು ಪ್ರಭಾಕರ್, ನಾಗನಹಳ್ಳಿ ವಿಜಯೇಂದ್ರ, ಮಂಡಕಳ್ಳಿ ಮಹೇಶ್, ಬೊಕ್ಕಳ್ಳಿ ನಂಜುಂಡಸ್ವಾಮಿ, ಕಸುವಿನಳ್ಳಿ ಗ್ರಾ.ಪಂ ಅಧ್ಯಕ್ಷ ಚಿಕ್ಕನಾಯಕ, ಸದಸ್ಯರಾದ ಪರಶಿವಮೂರ್ತಿ, ನಾಗೇಶ್, ಶಿವನಂಜಪ್ಪ ಭಾಗವಹಿಸಿದ್ದರು.

ಮೂಲ ಕಲೆ, ಸಂಸ್ಕೃತಿ ಬಿಂಬಿಸಿದ ಗಿರಿಜನ ಉತ್ಸವ

ಮೂಲ ಸಂಸ್ಕೃತಿ ಉಳಿಸುವಲ್ಲಿ ಗಿರಿಜನರ ಪಾತ್ರ ಅತ್ಯಂತ ಮಹತ್ತದ್ದು: ಕಾರ್ಯಕ್ರಮ ಉದ್ಘಾಟಿಸಿ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಅಭಿಮತ





ಮೈಸೂರು,ಡಿ.30– ಹಿಂದಿನಿಂದಲೂ ತಮ್ಮ ಕಲೆ, ಆಚರಣೆಯನ್ನು ಉಳಿಸಿಕೊಂಡು ಬಂದಿರುವ ಗಿರಿಜನರು ಮೂಲ ಸಂಸ್ಕೃತಿಯನ್ನು ಇಂದಿಗೂ ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದಾರೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ ತಿಳಿಸಿದರು.

ನಗರದ ಕಲಾಮಂದಿರ ಆವರಣದಲ್ಲಿನ ಕಿರುರಂಗಮಂದಿರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಗಿರಿಜನ ಉಪಯೋಜನೆಯಡಿ ಹಮ್ಮಿಕೊಂಡಿದ್ದ, ಗಿರಿಜನ ಉತ್ಸವ–2023 ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಸಾಂಸ್ಕೃತಿಕ ಕಲೆಗಳನ್ನು, ಮೂಲ ಸಂಸ್ಕೃತಿಯನ್ನು ನಾವು ಕಾಪಾಡಿಕೊಂಡು ಹೋಗಬೇಕು. ಕರ್ನಾಟಕದ ವಿವಿಧ ಭಾಗಗಳಲ್ಲಿ ವಿವಿಧ ರೀತಿಯ ಸಂಸ್ಕೃತಿ ಆಚರಣೆಗಳು ಇದ್ದವು. ಅಂದಿನ ಕಲೆಗಳು ನಶಿಸಿ ಹೋಗಿದೆ. ಅದರಲ್ಲಿ ಅಪರೂಪವಾಗಿ ಕಂಡುಬರುವ ಕಲೆಗಳಲ್ಲಿ ಗಿರಿಜನರ ಕಲೆಗಳು ಅತ್ಯಂತ ಹಳೆಯ ಕಲೆಗಳಾಗಿವೆ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿವಿಧ ರೀತಿಯ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬಂದಿದೆ. ಇಲಾಖೆಯ ವತಿಯಿಂದ ಸಂಸ್ಕೃತಿಯನ್ನು ಸಾರುವ ವಿವಿಧ ಕಾರ್ಯಕ್ರಮಗಳನ್ನು ವರ್ಷವಿಡೀ ಆಯೋಜಿಸಿ ಜನರಿಗೆ ಸಂಸ್ಕೃತಿ, ಸಾಹಿತ್ಯ, ಪರಂಪರೆಯ ಬಗ್ಗೆ ಅರಿವು ಮೂಡಿಸಲಾಗುವುದು ಎಂದರು.

ಕಳೆದ 60 ವರ್ಷಗಳಿಂದ ಈ ನಾಡಿನ ಕಲೆ, ಸಾಹಿತ್ಯ, ಸಂಸ್ಕೃತಿ, ಕನ್ನಡ ನಾಡು ನುಡಿಯನ್ನು ಸದಾ ಜಾಗೃತವಾಗಿಸುವ ಹಾಗೂ ಎಲ್ಲಾ ಕಲೆಗಳನ್ನು ಸಂರಕ್ಷಿಸುವ, ಪ್ರೋತ್ಸಾಹಿಸಿ ಬೆಳೆಸುವ ದಿಕ್ಕಿನಲ್ಲಿ ಅನೇಕ ಕಾರ್ಯಕ್ರಮಗಳನ್ನು ರೂಪಿಸುತ್ತಾ ಬಂದಿದೆ. ಮೈಸೂರು ದಸರಾ, ಹಂಪಿ ಉತ್ಸವ, ಚಾಲುಕ್ಯ ಉತ್ಸವ, ಲಕ್ಕುಂಡಿ ಉತ್ಸವ, ನವರಸಪುರ ಉತ್ಸವ, ಆನೆಗುಂದಿ ಉತ್ಸವ, ಬನವಾಸಿ ಉತ್ಸವ ಹಾಗೂ ವಿವಿಧ ಜಲೋತ್ಸವ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.

ಸಣ್ಣ ಸಣ್ಣ ಸಮುದಾಯಗಳ ಮೂಲ ಕಲೆಯನ್ನು ಗುರುತಿಸಿ, ನಾಶವಾಗದಂತೆ ಅವುಗಳನ್ನು ಸಮಾಜದ ಮುಖ್ಯವಾಹಿನಿಗೆ ತರುವ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಮೂಡಿಬಂದಿರುವ ಉತ್ಸವಗಳೇ ಜನಪರ, ಬುಡಕಟ್ಟು ಉತ್ಸವ ಹಾಗೂ ಗಿರಿಜನ ಉತ್ಸವಗಳಾಗಿವೆ. ಗಿರಿಜನರು ತಮ್ಮ ಮೂಲವಾಸದಿಂದಲೂ ಆಚರಿಸಿಕೊಂಡು ಬಂದಿರುವ ವಿವಿಧ ಕಲಾಶೈಲಿಗಳನ್ನು ತಲೆಮಾರಿನವರೆಗೂ ಮುಂದುವರೆಸಿಕೊಂಡು ಬಂದಿದ್ದಾರೆ, ಆ ರೀತಿಯ ಕಲೆಗಳನ್ನು ಗುರುತಿಸಿ ಅವುಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ನೀಡಿ ಮುಖ್ಯ ವಾಹಿನಿಗೆ ತರುವ ಕಾರ್ಯಕ್ರಮಗಳನ್ನು ಸರ್ಕಾರ ಮತ್ತು ಇಲಾಖೆಯಿಂದ ನಡೆಸಲಾಗುತ್ತಿದೆ.

ಕಾರ್ಯಕ್ರಮ ಆರಂಭಕ್ಕೂ ಮುನ್ನ ಜಾನಪದ ಕಲಾ ತಂಡಗಳಿಗೆ ಶಾಸಕ ಹರೀಶ್‌ಗೌಡ ಚಾಲನೆ ನೀಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಂ.ಡಿ.ಸುದರ್ಶನ್ ಮಾತನಾಡಿ, ಪ್ರಮುಖವಾಗಿ ಈ ಕಾರ್ಯಕ್ರಮವು ಗಿರಿಜನರ ಕಲೆಗಳ ಪ್ರದರ್ಶನಕ್ಕೆ ನಡೆಸಲಾದ ಕಾರ್ಯಕ್ರಮವಾಗಿದ್ದು, ಸಂಪೂರ್ಣ ಕಲಾವಿದರು ಪರಿಶಿಷ್ಟ ಪಂಡಗಕ್ಕೆ ಸೇರಿದ ಕಲಾವಿದರು, ಹಾಗೂ ಈ ಕಾರ್ಯಕ್ರಮದಡಿ ಗಿರಿಜನರ ಕಲೆಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ನೀಡಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ದೊಡ್ಡ ಮಾರನಹಳ್ಳಿಯ ಡಿ.ಕೆ ಲೋಕೇಶ್ ಮತ್ತು ತಂಡದಿಂದ ಸುಗಮ ಸಂಗೀತ, ಎಚ್.ಡಿ. ಕೋಟೆಯ ಜವರ ನಾಯಕ ತಂಡದಿಂದ ಜಾನಪದ ಗೀತೆ, ರಾಜೇಶ್ವರಿ ಮತ್ತು ತಂಡದಿಂದ ಭಕ್ತಿ ಸಂಗೀತ, ನಂಜನಗೂಡು ಕಳಲೆ ಗ್ರಾಮದ ದೇವಣ್ಣ.ಪಿ ಮತ್ತು ತಂಡದಿಂದ ತತ್ವಪದ, ರಮ್ಯ ಮತ್ತು ತಂಡದವರಿಂದ ಡೊಳ್ಳು ಕುಣಿತ, ಎಚ್.ಡಿ.ಕೋಟೆಯ ಚಲ್ಲನ್ ಮತ್ತು ತಂಡದಿಂದ ಬೆಟ್ಟ ಕುರುಬ ಸಾಂಪ್ರದಾಯಿಕ ನೃತ್ಯ, ನಾಣಚ್ಚಿಗದ್ದೆ ಹಾಡಿಯ ರಮೇಶ್ ಮತ್ತು ತಂಡದಿಂದ ಅಡಲೇಮರ ನೃತ್ಯ, ತಲಕಾಡಿನ ರಾಜಶೇಖರ್ ಮತ್ತು ತಂಡದಿಂದ ಚಿಲಿಪಿಲಿ ಗೊಂಬೆ ನೃತ್ಯ, ನಂಜನಗೂಡು ಕಳಲೆ ಗ್ರಾಮದ ಪ್ರತಾಪ್ ಆರ್. ಮತ್ತು ತಂಡದಿಂದ ಕೊಂಬು ಕಹಳೆ, ಹೆಚ್.ಡಿ. ಕೋಟೆಯ ಪೆಂಜಳ್ಳಿ ಕಾಲೋನಿಯ ರಮೇಶ್ ಮತ್ತು ತಂಡದಿಂದ ಕರಡಿ ಕುಣಿತ, ಯಲ್ಲಾಪುರದ ಲಿಲ್ಲಿ ಮತ್ತು ತಂಡದಿಂದ ಡಮಾಮಿ ನೃತ್ಯವನ್ನು ಆಯೋಜಿಸಲಾಗಿತ್ತು.




ಮೈಸೂರಿನ 44ನೇ ವಾರ್ಡ್‌ನ ಕ್ಯಾಲೆಂಡರ್ ಅನ್ನು ಶಾಸಕ ಜಿ.ಟಿ.ದೇವೇಗೌಡ ಬಿಡುಗಡೆಗೊಳಿಸಿದರು. ಪಾಲಿಕೆ ಮಾಜಿ ಸದಸ್ಯೆ ಸವಿತಾ ಸುರೇಶ್, ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಸುರೇಶ್, ಟಿಎಪಿಸಿಎಂಎಸ್ ಸದಸ್ಯ ಚಂದ್ರಶೇಖರ್, ಸಿದ್ದರಾಜು, ಪುಟ್ಟಸ್ವಾಮಿಗೌಡ ಲಿಂಗೇಗೌಡ, ಆನಂದ್, ಕೃಷ್ಣ, ಮಂಜು, ಸೊಸೈಟಿ ಕುಮಾರ್, ನಾರಾಯಣ್, ಪ್ರಸಾದ್, ಪ್ರಕಾಶ್, ರಮೇಶ್, ಸುನೀಲ್ ಇದ್ದರು.



ಮೈಸೂರಿನ ವಿಶ್ವೇಶ್ವರನಗರದಲ್ಲಿರುವ ಶ್ರೀ ಭುವನೇಶ್ವರಿ ಸೌಹಾರ್ದ ಪತ್ತಿನ ಸಹಕಾರ ಸಂಘದ ನೂತನ ವರ್ಷದ ಕ್ಯಾಲೆಂಡರ್ ಅನ್ನು ಬಿಡುಗಡೆ ಮಾಡಲಾಯಿತು. ಈ ವೇಳೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಸಂಘದ ಪ್ರಾಂತೀಯ ವ್ಯವಸ್ಥಾಪಕ ಶಿವಕುಮಾರ್ ಬಿರಾದಾರ್, ಅಧ್ಯಕ್ಷ ಆರ್.ನಾರಾಯಣ, ಉಪಾಧ್ಯಕ್ಷ ಹೆಚ್.ವಿ.ರವಿಶಂಕರ್, ನಿರ್ದೇಶಕರಾದ ಸಿ.ಎಸ್.ಬಾಲರಾಜು, ಶಾಂತಿ ವಿ.ಹೆಗ್ಡೆ, ಎಂ.ವಿಜಯಲಕ್ಷ್ಮಿ, ಬಿ.ಎಂ.ಶಿವಶಂಕರಪ್ಪ ಮತ್ತಿತರರು ಉಪಸ್ಥಿತರಿದ್ದರು.

ಪಡುವಾರಹಳ್ಳಿ ಸ್ನೇಹ ಬಳಗದಿಂದ ಕುವೆಂಪು ಜನ್ಮ ದಿನಾಚರಣೆ



ಮೈಸೂರು,ಡಿ.30–ಪಡುವಾರಹಳ್ಳಿ ಸ್ನೇಹ ಬಳಗದ ವತಿಯಿಂದ ರಾಷ್ಟ್ರಕವಿ ಕುವೆಂಪು ಅವರ 119ನೇ ಜಯಂತಿಯನ್ನು ಪಡುವಾರಹಳ್ಳಿಯ ಶ್ರೀ ಮಹರ್ಷಿ ವಾಲ್ಮೀಕಿ ರಸ್ತೆಯಲ್ಲಿ ಆಚರಿಸಲಾಯಿತು.

ಈ ವೇಳೆ ಮುಡಾ ಮಾಜಿ ಅಧ್ಯಕ್ಷ ಸಿ.ಬಸವೇಗೌಡ ಮಾತನಾಡಿ, ಕುವೆಂಪು ಅವರು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಗ್ರಾಮದಲ್ಲಿ ಜನಿಸಿ ಮೈಸೂರಿನಲ್ಲಿ ಶಿಕ್ಷಕ ವೃತ್ತಿಯನ್ನು ಅಲಂಕರಿಸಿ ಕನ್ನಡ ಭಾಷೆಯನ್ನು ದೇಶದಲ್ಲಿಯೇ ಮೇರು ಮಟ್ಟಕ್ಕೆ ಕೊಂಡೊಯ್ದು ನಮ್ಮ ಮೈಸೂರು ವಿಶ್ವವಿದ್ಯಾನಿಲಯ ವಿಶ್ವ ಮಟ್ಟದಲ್ಲಿ ಪ್ರಖ್ಯಾತಗೊಳ್ಳಲು ಬಹುವಾಗಿ ಶ್ರಮಿಸಿದ ಒಬ್ಬ ಮಹಾನ್ ತಪಸ್ವಿ ಎಂದು ಬಣ್ಣಿಸಿದರು.

ಹಿರಿಯ ಚೇತನ ಕುವೆಂಪುರವರ ಜಯಂತಿಯನ್ನು ಆಚರಿಸುತ್ತಿರುವ ನಾವುಗಳು ಅವರು ನಮ್ಮ ನಾಡ ಭಾಷೆಯಾದ ಕನ್ನಡಕ್ಕೆ ಸಲ್ಲಿಸಿರುವ ಅನನ್ಯವಾದ ಮತ್ತು ಘನವಾದ ಸೇವೆಗಳನ್ನು ಸ್ಮರಿಸುವುದು ಪ್ರತಿಯೊಬ್ಬ ಕನ್ನಡಿಗನ ಆದ್ಯ ಕರ್ತವ್ಯವಾಗಬೇಕು ಎಂದು ಕರೆ ನೀಡಿದರು.

ಮೈಸೂರಿಗೆ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಮಾನಸಗಂಗೋತ್ರಿಯ ಆವರಣವನ್ನು ಕೊಡುಗೆಯಾಗಿ ನೀಡಿದವರಲ್ಲಿ ಕುವೆಂಪುರವರು ಅಗ್ರಗಣ್ಯರು ಎಂದು ಹೇಳಿದ ಅವರು, ಕುವೆಂಪುರವರು ಅವರ ವಿ.ವಿ.ಮೊಹಲ್ಲಾದ ನಿವಾಸದಿಂದ ಮಾನಸಗಂಗೋತ್ರಿಯ ಆವರಣಕ್ಕೆ ನಡಿಗೆಯ ಮೂಲಕವೇ ಬರುತ್ತಿದ್ದಂತಹ ಸಂದರ್ಭಗಳನ್ನು ನಾನು ನನ್ನ ವಿದ್ಯಾರ್ಥಿ ದೆಸೆಯ ದಿನಗಳಿಂದಲೂ ಸಹ ಕಣ್ಣು ತುಂಬಿಕೊಂಡಿದ್ದು ಅವರ ಆ ಒಂದು ವ್ಯಕ್ತಿತ್ವವು ಒಬ್ಬ ಮಹಾನ್ ಋಷಿ ಮುನಿಗಳ ಸ್ವರೂಪದಿಂದ ಕೂಡಿತ್ತು ಎಂದು ಸ್ಮರಿಸಿದರು.

ಈ ಸಂದರ್ಭದಲ್ಲಿ ಮೈಸೂರು ಕೋಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ದಿ ಸಿಟಿ ಕೋಆಪರೇಟಿವ್ ಬ್ಯಾಂಕ್ ನಿರ್ದೇಶಕ ವಿ.ಮಧು ವೆಂಕಟಾಚಲ, ಬಿಜೆಪಿ ಮುಖಂಡ ಬಸವರಾಜು, ಜನಹಿತ ವಿವಿಧೋದ್ದೇಶ ಸಹಕಾರ ಸಂಘ ಉಪಾಧ್ಯಕ್ಷ ಸಿ.ಸಂತೋಷ್, ನಿರ್ದೇಶಕರಾದ ಕೃಷ್ಣಕುಮಾರ್, ರಾಘವ್ ಎಂ.ಗೌಡ, ಬಿ.ಕುಮಾರ್ ಕೇಬಲ್ ಕಿಟ್ಟಿ, ಸುರೇಂದ್ರಕುಮಾರ್, ಪಾಲ್ಕನ್ ಪ್ರಸನ್ನ, ಪ್ರಕಾಶ್, ನರಸಿಂಹ ಉಪಸ್ಥಿತರಿದ್ದರು.

ನಾಳೆ ಈ ವಿವಿಯಿಂದ ಸ್ನೇಹ ಮಿಲನ

ಮೈಸೂರು,ಡಿ.30–ನಗರದ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ವತಿಯಿಂದ ನೂತನ ವರ್ಷದ ಪ್ರಯುಕ್ತ ಜ.1ರಂದು ಸೋಮವಾರ ಸಂಜೆ 6.30ಕ್ಕೆ ಯಾದವಗಿರಿ 3ನೇ ಮುಖ್ಯ ರಸ್ತೆ (ಆಕಾಶವಾಣಿ ಹಿಂಭಾಗ)ಯಲ್ಲಿ ಮೈಸೂರಿನ ಮುದ್ರಣ ಮಾಧ್ಯಮ, ದೃಶ್ಯ ಮಾಧ್ಯಮದ ಎಲ್ಲ ಸಿಬ್ಬಂದಿ ಹಾಗೂ ಮೈಸೂರು ಮಹಾನಗರಪಾಲಿಕೆ 65 ವಾರ್ಡ್‌ಗಳ ನಿಕಟಪೂರ್ವ ಸದಸ್ಯರುಗಳಿಗೆ 'ಸ್ನೇಹ ಮಿಲನ'ವನ್ನು ಆಯೋಜಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊಬೈಲ್ ಸಂಖ್ಯೆ 9448368019 ಅಥವಾ 7975785643 ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

31.12.2023 ಭಾನುವಾರ, ಮಳೆ ನಕ್ಷತ್ರ: ಪೂಷಾ 29.12.2023 ರಿಂದ 15.01.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಕೃಷ್ಣ ಪಕ್ಷ, ತಿಥಿ: ಚೌತಿ, ನಕ್ಷತ್ರ: ಮಖ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಅಜ್ಜನ ಮನೆ ಕಲಾ ಪ್ರಪಂಚ :** ಮಾರ್ಗಶಿರ ಮನರಂಜನೆ, ಸ್ಥಳ: ನಾದಬ್ರಹ್ಮ ಸಂಗೀತ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 8ರಿಂದ.

■ **ಮೈಸೂರು ಅರಮನೆ ಮಂಡಳಿ:** ಅರಮನೆ ಫಲಪುಷ್ಪ ಪ್ರದರ್ಶನ, ಬೆಳಗ್ಗೆ 10ರಿಂದ ರಾತ್ರಿ 9 ರವರೆಗೆ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆಯವರೆಗೆ.

■ **ಆರ್ಟ್ ಆಫ್ ಲಿವಿಂಗ್:** ನಾಡಿ ಪರೀಕ್ಷೆ ಕಾರ್ಯಕ್ರಮ, ಸ್ಥಳ: ಆರ್ಟ್ ಆಫ್ ಲಿವಿಂಗ್, ಬೆಳಗ್ಗೆ 10 ರಿಂದ.

■ **ಕನ್ನಡ ಸಾಹಿತ್ಯ ಕಲಾಕೂಟ, ಕನ್ನಡ ಸಾಹಿತ್ಯ ಪರಿಷತ್ತು, ನಗರ ಘಟಕ:** ಸುವರ್ಣ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಚಿತ್ರ ಕಲಾವಿದ ಯು.ಜಿ.ಮೋಹನ್‌ಕುಮಾರ್ ಆರಾಧ್ಯ ಅವರು ರಚಿಸಿರುವ ನಾಡು–ನುಡಿ ಸಾಧಕರ ಚಿತ್ರಕಲಾ ಪ್ರದರ್ಶನ ಹಾಗೂ ಕನ್ನಡಪರ ಹೋರಾಟಗಾರರಿಗೆ ಅಭಿನಂದನಾ ಸಮಾರಂಭ, ಅಧ್ಯಕ್ಷತೆ: ಇಳೈ ಆಳ್ವಾರ್ ಸ್ವಾಮೀಜಿ, ಚಿತ್ರಕಲಾ ಪ್ರದರ್ಶನಕ್ಕೆ ಚಾಲನೆ: ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್, ಅಭಿನಂದಿಸುವವರು: ವಿಧಾನಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ಆಶಯ ನುಡಿ: ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ.ಚಂದ್ರಶೇಖರ್, ಉಪಸ್ಥಿತರು : ಕಸಾಪ ಮೈಸೂರು ನಗರ ಘಟಕದ ಅಧ್ಯಕ್ಷ ಕೆ.ಎಸ್. ಶಿವರಾಮು, ಬಿಜೆಪಿ ಓಬಿಸಿ ರಾಜ್ಯಾಧ್ಯಕ್ಷ ಆರ್. ರಘು ಕೌಟಿಲ್ಯ, ಡಾ. ಕೆ. ರಘುರಾಂ ವಾಜಪೇಯಿ, ಡಾ. ಬಿ.ಆರ್. ನಟರಾಜ ಜೋಯಿಸ್, ಎಂ.ಆರ್. ಚೌದರಿ, ಶಿವಕುಮಾರ್, ಎಸ್.ಇ. ಗಿರೀಶ್, ಸ್ಥಳ: ಸುಚಿತ್ರ ಕಲಾ ಗ್ಯಾಲರಿ, ಕಲಾಮಂದಿರ, ಬೆಳಗ್ಗೆ 10.30ಕ್ಕೆ.

■ **ಕನ್ನಡ ಚಳವಳಿ ಕೇಂದ್ರ ಸಮಿತಿ :** ರಾಷ್ಟ್ರಕವಿ ಕುವೆಂಪು ಜನ್ಮ ದಿನಾಚರಣೆ, ಪುಷ್ಪಾರ್ಚನೆ : ಡಾ. ಹೆಚ್.ವಿ.ಸುಶ್ರುತ್‌ಗೌಡ, ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಜಯಪ್ರಕಾಶ್, ಮುಖ್ಯ ಅತಿಥಿಗಳು : ಸಮಾಜ ಸೇವಕ ರಾಮಚಂದ್ರ, ಸಾಹಿತಿ ಬನ್ನೂರು ಕೆ. ರಾಜು, ಸನ್ಮಾನಿತರು : ಸಾಹಿತಿ ಪ್ರೊ. ಸಿ. ನಾಗಣ್ಣ, ಆರ್. ರಘು, ಲಕ್ಷ್ಮೀ ನಾರಾಯಣ ಯಾದವ್, ಸ್ಥಳ: ಜಿಲ್ಲಾ ಪತ್ರಕರ್ತರ ಸಂಘ, ಬೆಳಗ್ಗೆ 10.30ಕ್ಕೆ

■ **ಕರ್ನಾಟಕ ರಾಜ್ಯ ಸರ್ಕಾರಿ ಎಸ್‌ಸಿ/ಎಸ್‌ಟಿ ನೌಕರರ ಸಂಘ:** ಮಹರ್ಷಿ ವಾಲ್ಮೀಕಿ ಜಯಂತಿ ಹಾಗೂ ಕ್ಯಾಲೆಂಡರ್ ಬಿಡುಗಡೆ ಸಮಾರಂಭ, ಸಾನ್ನಿಧ್ಯ: ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ, ಪುಷ್ಪಾರ್ಚನೆ: ಸಂಘದ ರಾಜ್ಯಾಧ್ಯಕ್ಷ ಡಾ.ಡಿ.ಚಂದ್ರಶೇಖರಯ್ಯ, ಕ್ಯಾಲೆಂಡರ್ ಬಿಡುಗಡೆ: ಡಿ.ಹರೀಶ್‌ಬಾಬು, ಅಧ್ಯಕ್ಷತೆ: ಡಾ.ಎಂ.ಡಿ.ಶಿವರಾಮಕೃಷ್ಣ, ಮುಖ್ಯ ಅತಿಥಿಗಳು: ವಿ.ಪುರುಷೋತ್ತಮ್, ಅಹಿಂದ ಜವರಪ್ಪ, ದ್ಯಾವಪ್ಪನಾಯಕ, ಸ್ಥಳ: ಲೋಕೋಪಯೋಗಿ ಇಲಾಖೆ ಅತಿಥಿ ಗೃಹ, ನಜರ್‌ಬಾದ್, ಬೆಳಗ್ಗೆ 10.30ಕ್ಕೆ.

■ **ಸಂಚಲನ ಮೈಸೂರು :** ಮಕ್ಕಳ ರಂಗ ತರಬೇತಿ ಶಿಬಿರದ ಸಮಾರೋಪ ಸಮಾರಂಭ, ಉಪಸ್ಥಿತರು : ರಂಗಕರ್ಮಿ ರಾಜಶೇಖರ ಕದಂಬ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಕೆ. ಸವಿತಾ, ಡಾ. ಎನ್. ನವೀನ್, ಪ್ರಾಸ್ತಾವಿಕ ನುಡಿ : ದೀಪಕ್ ಮೈಸೂರು, ಮಕ್ಕಳಿಂದ ಲಂಬಕರ್ಣನ ಉಷ್ಣೀಶ ಮತ್ತು ಕೆಂಪು ಹೂ ನಾಟಕ ಪ್ರದರ್ಶನ, ಸ್ಥಳ: ಕಿರು ರಂಗ ಮಂದಿರ, ಬೆಳಗ್ಗೆ 11ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ–ಸೈಬರ್ ಮಿತ್ರ–ಸೈಬರ್ ಸುರಕ್ಷೆ : ವಾರದ ಮಾತು, ಪ್ರಸ್ತುತಿ–ಸತೀಶ್ ವಿ. ಪ್ರಾಯೋಜಕರು cybermitra.in ಮೈಸೂರು, 6.40 ಪದಸಂಸ್ಕೃತಿ, ಪ್ರಸ್ತುತಿ–ಟಿ.ಎಸ್.ಗೋಪಾಲ್, 6.50 ರೈತರಿಗೆ ಸಲಹೆ, 9.40 ನಮ್ಮ ಆರೋಗ್ಯ "ವೈದ್ಯಕೀಯ ತಪಾಸಣೆ ಮತ್ತು ಚಿಕಿತ್ಸೆಗೆ ಸಂಬಂಧಿಸಿದ ದಾಖಲೆಗಳ ನಿರ್ವಹಣೆಯ ಪ್ರಾಮುಖ್ಯತೆ ಕುರಿತು ಅವರೊಂದಿಗೆ ಮಾತುಕತೆ ಡಾ. ಹರೀಂದ್ರ ಅವರೊಂದಿಗೆ ಮಾತುಕತೆ, 10.00 ಕೇಳಿ ಗಿಳಿಗಳೇ–ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ, 10.30 ಮಕ್ಕಳ ಮಂಟಪ –ಶ್ರೀರಂಗಪಟ್ಟಣ ತಾಲೂಕು ಪಾಲಹಳ್ಳಿಯ ಶ್ರೀ ಶಾರದಾದೇವಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.00 ಮನ್ ಕಿ ಬಾತ್–ದೇಶದ ಜನತೆಯೊಂದಿಗೆ ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ಮನದ ಮಾತು, ನಂತರ ಮನ್ ಕಿ ಬಾತ್–ದೇಶದ ಜನತೆಯೊಂದಿಗೆ ಪ್ರಧಾನಿ ನರೇಂದ್ರ ಮೋದಿಯವರ ಮನದ ಮಾತಿನ ಕನ್ನಡ ಅನುವಾದ **ಮಧ್ಯಾಹ್ನ:** 12.30 ದೇವರನಾಮ–ಕೆ.ಎಸ್.ಚಂದ್ರಿಕಾ, ಎಸ್.ಶಂಕರ್, 12.45 ಜನಪದ ಸಂಗೀತ–ಚಿಕ್ಕತಾಯಮ್ಮ ಮತ್ತು ಸಂಗಡಿಗರು–ಮಾದೇಶ್ವರನ ಹಾಡು, 1.20 ಭಾವಗೀತೆ–ಶೈಲಜಾ ಚಂದ್ರಶೇಖರ್, 4.00 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ–ಕಿಂದಮ ಶಾಪ, ಪ್ರಸ್ತುತಿ–ರಾಘವ ಶೆಟ್ಟಿಗಾರ್ ಹಾಗೂ ಬಳಗದವರು, ಆತ್ರಾಡಿ, ಉಡುಪಿ, 6.50 ಕೃಷಿರಂಗ–ಪಶುರಂಗ–ನಾಟಕ, ಪೈಲ್ವಾನ್ ಪಾಪಣ್ಣ, ರಚನೆ–ಡಾ.ಬಿ.ಕೆ.ರಮೇಶ್ ನಿರ್ಮಾಣ–ಪ್ರಭುಸ್ವಾಮಿ ಮಳಿಮಠ, 8.00 ಮನ್ ಕಿ ಬಾತ್–ದೇಶದ ಜನತೆಯೊಂದಿಗೆ ಪ್ರಧಾನಿ ನರೇಂದ್ರ ಮೋದಿಯವರ ಮನದ ಮಾತಿನ ಕನ್ನಡ ಅನುವಾದದ ಮರುಪ್ರಸಾರ, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ–ಫತೇ ಅಲಿ ಖಾನ್– ಶಹನಾಯ್ ವಾದನ

■ **ಜೆ.ಕೆ. ಟೈರ್ಸ್ ಬದಲಿ ಕಾರ್ಮಿಕರ ಸಂಘ :** ಕ್ಯಾಲೆಂಡರ್ ಬಿಡುಗಡೆ ಮತ್ತು ಕಾರ್ಮಿಕರ ಸಮಾವೇಶ, ಉದ್ಘಾಟನೆ: ಮಾಜಿ ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್, ಕ್ಯಾಲೆಂಡರ್ ಬಿಡುಗಡೆ : ಕಾರ್ಮಿಕ ಇಲಾಖೆ ಜಂಟಿ ಆಯುಕ್ತ ಎಸ್.ಬಿ. ರವಿಕುಮಾರ್, ಅಧ್ಯಕ್ಷತೆ : ಉಪ ಕಾರ್ಮಿಕ ಆಯುಕ್ತ ಗುರುಪ್ರಸಾದ್, ಮುಖ್ಯ ಅತಿಥಿಗಳು : ಸಹಾಯಕ ಕರ್ಮಿಕ ಆಯುಕ್ತ ನಾಜಿಯಾ ಸುಲ್ತಾನ, ಜಿಲ್ಲಾ ಕಾರ್ಮಿಕ ಅಧಿಕಾರಿ ರಾಜೇಶ್ ಜಾದವ್, ಮಂಜುಳಾದೇವಿ, ಚೇತನ್‌ಕುಮಾರ್, ಸ್ಥಳ: ಶತಮಾನೋತ್ಸವ ಭವನ, ಶಾರದಾವಿಲಾಸ ಕಾಲೇಜು, ಕೃಷ್ಣಮೂರ್ತಿಪುರಂ, ಬೆಳಗ್ಗೆ 11ಕ್ಕೆ.

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನಾ ಮತ್ತು ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಬಾರ, ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ರಾಘವೇಂದ್ರನಗರ, ಬೆಳಗ್ಗೆಯಿಂದ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಸರ್ವ ಜಯಾನಂದ ಅವರಿಂದ ಶ್ರೀ ಶ್ರೀರಾಮಕೃಷ್ಣ ಚರಿತೆ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ನಟನ ರಂಗಶಾಲೆ:** ರಂಗಭೂಮಿ ಡಿಪ್ಲೊಮಾ ವಿದ್ಯಾರ್ಥಿಗಳಿಂದ ಮಹಾಮಾಯಿ ನಾಟಕ ಪ್ರದರ್ಶನ, ನಿರ್ದೇಶನ : ಮೇಘ ಸಮೀರ, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

■ **ಭರತಾಂಜಲಿ ನೃತ್ಯ ಶಾಲೆ :** ಡಾ. ಶೀಲಾ ಶ್ರೀಧರ್ ಮತ್ತು ಶ್ರೀಮತಿ ಶಾಶ್ವತಿ ರಘುನಂದನ್ ಅವರ ಶಿಷ್ಯರಿಂದ ಭರತನಾಟ್ಯ ನೃತ್ಯ ಸಮರ್ಪಣೆ, ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ಮಾಜಿ ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್, ಮಾಜಿ ಶಾಸಕ ಎಸ್. ಬಾಲರಾಜ್, ವಿದ್ವಾನ್ ಎಸ್. ಕೇಶವಕುಮಾರ್ ಪಿಳ್ಳೈ, ಸ್ಥಳ: ರಮಾಗೋವಿಂದ ರಂಗ ಮಂದಿರ, ರಾಮಕೃಷ್ಣನಗರ, ಸಂಜೆ 6ಕ್ಕೆ.

■ **ಹೆಬ್ಬಾರ್ ಶ್ರೀ ವೈಷ್ಣವ ಸಭಾ, ಬೆಂಗಳೂರು ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ :** ತಿರುಪ್ಪಾವೈ ಪ್ರವಚನ, ವಿದ್ವಾನ್ ಎಂ.ಕೆ. ಶೆಲ್ವನಾರಾಯಣ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಕೃಷ್ಣಮೂರ್ತಿಪುರಂ ಶ್ರೀರಾಮ ಮಂದಿರ, ಸಂಜೆ 6.15ರಿಂದ 7.30 ರವರೆಗೆ.

■ **ರಂಗಾಯಣ :** ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ಕಾಕನಕೋಟೆ ನಾಟಕ ಪ್ರದರ್ಶನ, ನಿರ್ದೇಶನ : ಎಸ್. ರಾಮನಾಥ, ರಚನೆ : ಮಾಸ್ತಿ ವೆಂಕಟೇಶ ಅಯ್ಯಂಗಾರ್, ಸ್ಥಳ: ವನರಂಗ ಬಯಲು ರಂಗಮಂದಿರ, ರಂಗಾಯಣ, ಸಂಜೆ 6.30ಕ್ಕೆ.

ಮೈಸೂರು ಮಿತ್ರ

ಮೋದಿಯತ್ತ ಪುಷ್ಪವೃಷ್ಟಿ ಮಾಡಿದ ರಾಮಜನ್ಮಭೂಮಿ ವಿವಾದದ ಪ್ರಮುಖ ಅರ್ಜಿದಾರ ಇಕ್ಬಾಲ್ ಅನ್ಸಾರಿ





ಅಯೋಧ್ಯಾ: ಪ್ರಧಾನಿ ನರೇಂದ್ರ ಮೋದಿ ಅವರು ಉತ್ತರ ಪ್ರದೇಶದ ಅಯೋಧ್ಯಾದಲ್ಲಿ ಶನಿವಾರ ರೋಡ್ ಶೋದಲ್ಲಿ ಭಾಗವಹಿಸಿದ ಸಂದರ್ಭದಲ್ಲಿ, ರಾಮ ಜನ್ಮಭೂಮಿ ವಿವಾದ ಪ್ರಕರಣದ ಪ್ರಮುಖ ಅರ್ಜಿದಾರರಲ್ಲಿ ಒಬ್ಬರಾಗಿದ್ದ ಇಕ್ಬಾಲ್ ಅನ್ಸಾರಿ ಅವರು ಪುಷ್ಪವೃಷ್ಟಿ ಮಾಡಿದ ಅಚ್ಚರಿಯ ಘಟನೆ ನಡೆದಿದೆ. ಇಕ್ಬಾಲ್ ಅನ್ಸಾರಿ ಅವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ಮತ್ತು ಪ್ರಧಾನಿ ಮೋದಿ ಅವರ ಕಡೆ ಹೂಗಳ ಮಳೆ ಸುರಿಸಿದ್ದು ಸಾಮಾಜಿಕ ಮಾಧ್ಯಮದಲ್ಲಿ ಚರ್ಚೆ ಹುಟ್ಟು ಹಾಕಿದೆ.

ಮುಂದಿನ ತಿಂಗಳು ಭವ್ಯ ರಾಮ ಮಂದಿರ ಉದ್ಘಾಟನೆ ಕಾಣಲಿರುವ ಅಯೋಧ್ಯೆಯಲ್ಲಿ ವಿವಿಧ ಕಾಮಗಾರಿಗಳ ಉದ್ಘಾಟನೆ ಮತ್ತು ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸುವ ಸಲುವಾಗಿ ಆಗಮಿಸಿದ ಪ್ರಧಾನಿ ಮೋದಿ ಅವರಿಗೆ ಅದ್ದೂರಿ ಸ್ವಾಗತ ದೊರಕಿತು. ವಿಮಾನ ನಿಲ್ದಾಣದಿಂದ ರೈಲ್ವೆ ನಿಲ್ದಾಣದವರೆಗೆ ರೋಡ್ ಶೋ ಮೂಲಕ ತೆರಳಿದ ಮೋದಿ ಅವರಿಗೆ ಜನರು ಪುಷ್ಪ ವೃಷ್ಟಿ ಮಾಡಿ, ಘೋಷಣೆಗಳನ್ನು ಕೂಗಿ ಹರ್ಷ ವ್ಯಕ್ತಪಡಿಸಿದರು. ಈ ವೇಳೆ ಇಕ್ಬಾಲ್ ಅನ್ಸಾರಿ ಕೂಡ ಹಾಜರಿದ್ದದ್ದು ಕಂಡುಬಂತು.

ಅಯೋಧ್ಯೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅಭಿವೃದ್ಧಿ ಪರ್ವ

ರೈಲು, ವಿಮಾನ ನಿಲ್ದಾಣ ಉದ್ಘಾಟನೆಯೊಂದಿಗೆ 15,700 ಕೋಟಿ ವೆಚ್ಚದ ಯೋಜನೆ ಲೋಕಾರ್ಪಣೆ; ಶಂಕುಸ್ಥಾಪನೆ





ಉತ್ತರ ಪ್ರದೇಶದ ಅಯೋಧ್ಯೆಯಲ್ಲಿ ಅಯೋಧ್ಯಾ ಧಾಮ ರೈಲು ನಿಲ್ದಾಣ ಉದ್ಘಾಟಿಸಿದ ಪ್ರಧಾನಿ ಮೋದಿ ಹಾಗೂ 'ಮಹರ್ಷಿ ವಾಲ್ಮೀಕಿ' ವಿಮಾನ ನಿಲ್ದಾಣ ಉದ್ಘಾಟನೆಯಲ್ಲಿ ಪಾಲ್ಗೊಂಡಿದ್ದ ಗಣ್ಯರನ್ನು ಕಾಣಬಹುದು.

ಅಯೋಧ್ಯೆ, ಡಿ.30–ಪ್ರಧಾನಿ ನರೇಂದ್ರ ಮೋದಿಯವರು ಶನಿವಾರ ಅಯೋಧ್ಯೆಯಲ್ಲಿ ಪುನರ್ ಅಭಿವೃದ್ಧಿಗೊಂಡ 'ಅಯೋಧ್ಯಾ ಧಾಮ್' ರೈಲು ನಿಲ್ದಾಣ ಮತ್ತು 'ಮಹರ್ಷಿ ವಾಲ್ಮೀಕಿ' ವಿಮಾನ ನಿಲ್ದಾಣ ಉದ್ಘಾಟನೆ ಸೇರಿದಂತೆ 15,700 ಕೋಟಿ ರೂ.ಗಳಿಗೂ ಅಧಿಕ ಮೊತ್ತದ ಯೋಜನೆಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆ ನೆರವೇರಿಸಿದರು.

ಅಯೋಧ್ಯಾ ಧಾಮ್ ರೈಲು ನಿಲ್ದಾಣದ ಮೊದಲ ಹಂತವನ್ನು 240 ಕೋಟಿ ರೂ. ವೆಚ್ಚದಲ್ಲಿ ಪೂರ್ಣಗೊಳಿಸಲಾಗಿದೆ. 3 ಅಂತಸ್ತಿನ ರೈಲು ನಿಲ್ದಾಣದ ಕಟ್ಟಡವು ಲಿಫ್ಟ್‌ಗಳು, ಎಸ್ಕಲೇಟರ್‌ಗಳು, ಫುಡ್ ಪ್ಲಾಜಾಗಳು, ಪೂಜೆ ಸಾಮಾನುಗಳ ಅಂಗಡಿಗಳು, ಕ್ಲಾಕ್ ರೂಂಗಳು, ಮಕ್ಕಳ ಆರೈಕೆ ಕೊಠಡಿಗಳು, ವೈಟಿಂಗ್ ರೂಂಗಳಂತಹ ವೈಶಿಷ್ಟ್ಯಗಳನ್ನು ಹೊಂದಿದೆ.

ಇದೇ ವೇಳೆ ಮೋದಿ ಅವರು ಎರಡು ಅಮೃತ್ ಭಾರತ್ ರೈಲು ಹಾಗೂ ಆರು ವಂದೇ ಭಾರತ್ ರೈಲುಗಳಿಗೆ ಚಾಲನೆ ನೀಡಿದರು. ಅಮೃತ್ ಭಾರತ್ ರೈಲುಗಳಾದ ದರ್ಭಾಂಗ್–ಅಯೋಧ್ಯೆ–ಆನಂದ ವಿಹಾರ್ ಟರ್ಮಿನಲ್ ಮತ್ತು ಮಾಲ್ಡಾ ಟೌನ್–ಸರ್ ಎಂ.ವಿಶ್ವೇಶ್ವರಯ್ಯ ಟರ್ಮಿನಲ್ (ಬೆಂಗಳೂರು) ನಡುವೆ ಸಂಚರಿಸಲಿವೆ. 6 ವಂದೇ ಭಾರತ್ ರೈಲುಗಳು ಶ್ರೀಮಾತಾ ವೈಷ್ಣೋದೇವಿ ಖತ್ರಾ–ನವದೆಹಲಿ, ಅಮೃತಸರ–ನವದೆಹಲಿ, ಕೊಯಮತ್ತೂರು–ಬೆಂಗಳೂರು ಕಂಟೋನ್ಮೆಂಟ್, ಮಂಗಳೂರು–ಮಡ್ಗಾಂವ್, ಜಲ್ನಾ–ಮುಂಬೈ, ಅಯೋಧ್ಯೆ–ಆನಂದ ವಿಹಾರ್ ಟರ್ಮಿನಲ್ ನಡುವೆ ಸಂಚರಿಸಲಿವೆ.

ಇಂದು ಅಯೋಧ್ಯೆಯಲ್ಲಿ ಪ್ರಧಾನಿ ಮೋದಿ ಅವರಿಂದ ಉದ್ಘಾಟನೆಗೊಂಡ ಮಹರ್ಷಿ ವಾಲ್ಮೀಕಿ ವಿಮಾನ ನಿಲ್ದಾಣವನ್ನು ಕೇವಲ 20 ತಿಂಗಳಲ್ಲಿ ಸಂಪೂರ್ಣವಾಗಿ ನಿರ್ಮಿಸಲಾಗಿದೆ. ಈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು 1450 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗಿದ್ದು, ಈ ನಿಲ್ದಾಣ ವಾರ್ಷಿಕ 10 ಲಕ್ಷ ಮಂದಿ ಪ್ರಯಾಣಿಕರನ್ನು ನಿಭಾಯಿಸುವ ಸಾಮರ್ಥ್ಯ ಹೊಂದಿದೆ ಎಂದು ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾ ಅಧ್ಯಕ್ಷ ಸಂಜೀವ್‌ಕುಮಾರ್ ತಿಳಿಸಿದ್ದಾರೆ.

ಶನಿವಾರ ಅಯೋಧ್ಯೆಯಲ್ಲಿ ರೈಲು ನಿಲ್ದಾಣ ಮತ್ತು ವಿಮಾನ ನಿಲ್ದಾಣ ಉದ್ಘಾಟಿಸಿದ ಪ್ರಧಾನ ಮಂತ್ರಿ ನರೇಂದ್ರ ಮೋದಿ 15 ಕಿ.ಮೀ. ಉದ್ದದ ರೋಡ್ ಶೋ ನಡೆಸಿದರು. ಮಾರ್ಗದುದ್ದಕ್ಕೂ ನೆರೆದಿದ್ದ ರಾಮ ಭಕ್ತರು 'ಜೈ ಶ್ರೀರಾಮ್' ಘೋಷಣೆ ಮೊಳಗಿಸಿದರು. ಅಯೋಧ್ಯೆಯ ಗಲ್ಲಿ–ಗಲ್ಲಿಗಳೂ ಕೇಸರಿಮಯವಾಗಿತ್ತು. ಎತ್ತ ನೋಡಿದರೂ ರಾಮ ಜಪ ಕೇಳಿ ಬರುತ್ತಿತ್ತು.

ಜ.22ರಂದು ಅಯೋಧ್ಯೆಗೆ ಬರಬೇಡಿ; ಮನೆ ಮನೆಯಲ್ಲಿ ದೀಪ ಬೆಳಗಿ

ಅಯೋಧ್ಯಾ ಧಾಮ ರೈಲು ನಿಲ್ದಾಣ ಉದ್ಘಾಟಿಸಿ ಮಾತನಾಡಿದ ಪ್ರಧಾನಿ ಮೋದಿ, ಜನವರಿ 22ರಂದು ಇಲ್ಲಿ ನಡೆಯಲಿರುವ ಐತಿಹಾಸಿಕ ರಾಮ್ ಲಲ್ಲಾ ಪ್ರಾಣ ಪ್ರತಿಷ್ಠಾಪನಾ ಸಮಾರಂಭಕ್ಕಾಗಿ ಇಡೀ ಜಗತ್ತು ಕಾಯುತ್ತಿದೆ ಎಂದರು.

ಆದರೆ ಭದ್ರತಾ ದೃಷ್ಟಿಯಿಂದ ನೀವು ಜನವರಿ 22ರಂದು ಅಯೋಧ್ಯೆಗೆ ತಲುಪುವುದು ಕಷ್ಟಕರವಾಗುತ್ತದೆ. ಹೀಗಾಗಿ ದೇಶದ ಜನತೆಗೆ ಅದರಲ್ಲೂ ಉತ್ತರಪ್ರದೇಶದ ಜನತೆಗೆ ಜ.22ರಂದು ಅಯೋಧ್ಯೆಗೆ ಬರಬೇಡಿ ಎಂದು ಕೈಮುಗಿದು ಕೇಳಿಕೊಳ್ಳುತ್ತೇನೆ. ಜ.23ರ ನಂತರ ಯಾವಾಗ ಬೇಕಾದರೂ ಇಲ್ಲಿಗೆ ಭೇಟಿ ನೀಡಿ ಶ್ರೀರಾಮನ ದರ್ಶನ ಪಡೆಯಿರಿ. ರಾಮ ಮಂದಿರ ನಿರ್ಮಾಣಕ್ಕೆ 550 ವರ್ಷ ಕಾಯ್ದಿದ್ದೇವೆ. ಆದ್ದರಿಂದ ಶ್ರೀರಾಮನ ಭಕ್ತರಾದ ನೀವು ಶ್ರೀರಾಮನಿಗೆ ತೊಂದರೆಯಾಗುವಂತಹ ಯಾವುದೇ ಕೆಲಸವನ್ನೂ ಮಾಡಬಾರದು. ಆ ದಿನ ಅಯೋಧ್ಯೆಗೆ ಬರಲಾರದವರು ಬೇಸರಪಡುವ ಅಗತ್ಯವಿಲ್ಲ. ಎಲ್ಲಾ ನಾಗರಿಕರು ನಿಮ್ಮ–ನಿಮ್ಮ ಮನೆಗಳಲ್ಲಿ ದೀಪ ಬೆಳಗಿಸಿ, ಶ್ರೀರಾಮನನ್ನು ಪ್ರಾರ್ಥಿಸುವ ಮೂಲಕ ದೀಪಾವಳಿ ಆಚರಿಸಿ. ಇದರಿಂದಾಗಿ ಇಡೀ ದೇಶವೇ ಈ ವೈಭವಕ್ಕೆ ಸಾಕ್ಷಿಯಾಗಬೇಕು ಎಂದು ಮೋದಿ ಮನವಿ ಮಾಡಿದರು.

ನಮ್ಮ ದೇಶವನ್ನು ವಿಕಾಸ್ (ಅಭಿವೃದ್ಧಿ) ಮತ್ತು ವಿರಾಸತ್ (ಪರಂಪರೆ) ಶಕ್ತಿಯು ದೇಶವನ್ನು ಮುನ್ನಡೆಸುತ್ತದೆ. ಈ ಮೂಲ ಸೌಕರ್ಯ ಸಂಬಂಧಿತ ಕಾಮಗಾರಿಗಳು ಮತ್ತೊಮ್ಮೆ ದೇಶದ ಭೂಪಟದಲ್ಲಿ ಆಧುನಿಕ ಅಯೋಧ್ಯೆಯನ್ನು ಹೆಮ್ಮೆಯಿಂದ ಸ್ಥಾಪಿಸಲಿದೆ. ಇದು ನಮ್ಮ ಪರಂಪರೆಗೆ ಸ್ಫೂರ್ತಿ ನೀಡುತ್ತದೆ. ಇಂದಿನ ಭಾರತವು ಹಳೆಯದು ಮತ್ತು ಹೊಸದು ಎರಡನ್ನೂ ಮೈಗೂಡಿಸಿಕೊಂಡು ಮುನ್ನಡೆಯುತ್ತದೆ ಎಂದರು. ಜನವರಿ 14 ಮತ್ತು 22ರಿಂದ ದೇಶಾದ್ಯಂತ ಯಾತ್ರಾ ಸ್ಥಳಗಳು, ದೇವಾಲಯಗಳಲ್ಲಿ ಸ್ವಚ್ಛತಾ ಅಭಿಯಾನ ನಡೆಸುವಂತೆ ಪ್ರಧಾನಿ ನರೇಂದ್ರ ಮೋದಿ ಮನವಿ ಮಾಡಿದರು.

ನನಗೂ ಟೀ ಕೊಡಿ...

ಪ್ರಧಾನಿ ಮೋದಿಯವರು ಅಯೋಧ್ಯೆ ಧಾಮ ರೈಲು ನಿಲ್ದಾಣ ಮತ್ತು ಶ್ರೀ ವಾಲ್ಮೀಕಿ ಮಹರ್ಷಿ ವಿಮಾನ ನಿಲ್ದಾಣ ಉದ್ಘಾಟನೆಗೂ ಮುನ್ನ ಫ್ಲಾಗ್‌ಶಿಪ್ ಯೋಜನೆಯ ಫಲಾನುಭವಿ ದಲಿತ ಮಹಿಳೆಯ ಮನೆಗೆ ಭೇಟಿ ನೀಡಿದರು. ಮನೆಯಲ್ಲಿದ್ದವರನ್ನೆಲ್ಲಾ ಮಾತನಾಡಿಸಿದ ಪ್ರಧಾನಿ, ಮಹಿಳೆಯನ್ನುದ್ದೇಶಿಸಿ, 'ಏನು ಮಾಡಿದ್ದೀರಿ' ಎಂದು ಕೇಳಿದಾಗ, ಆಕೆ 'ಟೀ ಮಾಡಿದ್ದೀನಿ' ಎಂದು ಉತ್ತರಿಸಿದರು. ತಕ್ಷಣವೇ ಪ್ರಧಾನಿಯವರು 'ಸರಿ, ನನಗೂ ಟೀ ಕೊಡಿ' ಎಂದು ಕೇಳಿ ಮಹಿಳೆಯಿಂದ ಟೀ ಪಡೆದು ಕುಡಿದ ನಂತರ 'ಸ್ವಲ್ಪ ಸಕ್ಕರೆ ಜಾಸ್ತಿಯಾಯಿತು' ಎಂದು ನಗುತ್ತಲೇ ಮಹಿಳೆಗೆ ಹೇಳಿದರು.

ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆ

ಒಟ್ಟು 8,267 ಮಂದಿ ಅಂತಿಮ ಮತದಾರರ ಪಟ್ಟಿಯಲ್ಲಿ ನೋಂದಣಿ

ಅಪರ ಜಿಲ್ಲಾಧಿಕಾರಿ ಆರ್.ಲೋಕನಾಥ್ ಮಾಹಿತಿ



ಮೈಸೂರು,ಡಿ.30(ಪಿಎಂ)–ದಕ್ಷಿಣ ಶಿಕ್ಷಕರ ಕ್ಷೇತ್ರದ ಮತದಾರರ ಅಂತಿಮ ಪಟ್ಟಿಯಲ್ಲಿ ಒಟ್ಟು 8,267 ಮಂದಿ ನೋಂದಣಿಯಾಗಿದ್ದಾರೆ ಎಂದು ಅಪರ ಜಿಲ್ಲಾಧಿಕಾರಿ ಆರ್.ಲೋಕನಾಥ್ ತಿಳಿಸಿದರು.

ಮೈಸೂರು ಜಿಲ್ಲಾಧಿಕಾರಿ ಕಚೇರಿಯಲ್ಲಿಂದು ದಕ್ಷಿಣ ಶಿಕ್ಷಕರ ಕ್ಷೇತ್ರದ ಅಂತಿಮ ಮತದಾರರ ಪಟ್ಟಿ ಪ್ರಕಟಣೆ ಸಂಬಂಧ ರಾಜಕೀಯ ಪಕ್ಷಗಳ ಮುಖಂಡರ ಜೊತೆ ಹಮ್ಮಿಕೊಂಡಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕರಡು ಮತದಾರರ ಪಟ್ಟಿಯಲ್ಲಿ ಒಟ್ಟು 5,244 ಮತದಾರರು ಸೇರ್ಪಡೆಗೊಂಡಿದ್ದರು. ಹಕ್ಕು ಮತ್ತು ಆಕ್ಷೇಪಣೆ ಅವಧಿಯಲ್ಲಿ 3,023 ಮತದಾರರು ಸೇರ್ಪಡೆಗೊಂಡಿದ್ದು, ಇದೀಗ ಒಟ್ಟು 8,267 ಮತದಾರರು ಅಂತಿಮ ಪಟ್ಟಿಯಲ್ಲಿ ನೋಂದಣಿಯಾಗಿದ್ದಾರೆ ಎಂದರು.

ನಿರಂತರ ಪರಿಷ್ಕರಣೆ ಅವಧಿಯಲ್ಲಿ ಸೇರ್ಪಡೆಗೆ ಕಲ್ಪಿಸಿರುವ ಅವಕಾಶವನ್ನು ಸದುಪಯೋಗ ಮಾಡಿಕೊಂಡು ಎಲ್ಲಾ ಅರ್ಹರು ಮತದಾರರ ಪಟ್ಟಿಗೆ ನೋಂದಣಿ ಮಾಡುವ ಕುರಿತು ರಾಜಕೀಯ ಪಕ್ಷಗಳ ವತಿಯಿಂದ ಜಾಗೃತಿ ಮೂಡಿಸಿ, ಸಹಕರಿಸಲು ರಾಜಕೀಯ ಪಕ್ಷಗಳ ಮುಖಂಡರಿಗೆ ಮನವಿ ಮಾಡಿದರು.

ಮುಖ್ಯ ಚುನಾವಣಾಧಿಕಾರಿಗಳ ನಿರ್ದೇಶನದನ್ವಯ ಯಾವುದೇ ಹಂತದಲ್ಲಿಯೂ ಒಬ್ಬರೇ ಹೆಚ್ಚಿನ ಸಂಖ್ಯೆ ಅರ್ಜಿಗಳನ್ನು ಸಲ್ಲಿಸಿದಲ್ಲಿ ಸ್ವೀಕರಿಸುವುದಿಲ್ಲ ಎಂದು ಮಾಹಿತಿ ನೀಡಿದ ಅವರು, ಇದೇ ವೇಳೆ ಮತದಾರರ ಅಂತಿಮ ಪಟ್ಟಿಯನ್ನು ರಾಜಕೀಯ ಪಕ್ಷಗಳ ಮುಖಂಡರಿಗೆ ನೀಡಿದರು.

ಮತದಾರರ ಸಹಾಯವಾಣಿ: ಮತದಾರರ ಸಹಾಯವಾಣಿ '1950' ಪ್ರಾರಂಭಿಸಲಾಗಿದ್ದು, ಪರಿಷ್ಕರಣೆ ಮತ್ತು ಮತದಾರರ ಪಟ್ಟಿಯಲ್ಲಿ ಹೆಸರು ನೋಂದಣಿ, ತೆಗೆದುಹಾಕುವುದು, ತಿದ್ದುಪಡಿ ಸೇರಿದಂತೆ ಇತರೆ ಯಾವುದೇ ಚುನಾವಣಾ ಸಂಬಂಧಿ ಮಾಹಿತಿ ಪಡೆಯಲು ಸಾರ್ವಜನಿಕರು ಈ ಸಹಾಯವಾಣಿ ಸಂಪರ್ಕಿಸಬಹುದು ಎಂದರು.

ಕಾಂಗ್ರೆಸ್ ಮುಖಂಡ ಕೆ.ಸಿ.ಶೌಕತ್ ಪಾಷ, ಜೆಡಿಎಸ್ ಮುಖಂಡ ಫಾಲ್ಕನ್ ಬೋರೇಗೌಡ, ಬಿಜೆಪಿ ಮುಖಂಡರಾದ ವಸಂತ್‌ಕುಮಾರ್, ಪಾಪಣ್ಣ, ಆಮ್ ಆದ್ಮಿ ಪಾರ್ಟಿ ಮುಖಂಡರಾದ ಐಶ್ವರ್ಯ, ಬಿಎಸ್‌ಪಿ ಮುಖಂಡ ಬಿ.ಮಹದೇವಸ್ವಾಮಿ, ಚುನಾವಣಾ ಶಿರಸ್ತೇದಾರ್ ಸುರೇಶ್, ಚುನಾವಣಾ ಶಾಖೆ ಸಿಬ್ಬಂದಿ ರಾಕೇಶ್ ಮತ್ತಿತರರು ಹಾಜರಿದ್ದರು.

ಕನ್ನಡ ಪುಸ್ತಕ ಪ್ರಾಧಿಕಾರದ ಪ್ರಕಟಣೆಗಳಿಗೆ ಶೇ.50 ರಿಯಾಯಿತಿ

ಮೈಸೂರು,ಡಿ.30– ಗಣರಾಜ್ಯೋತ್ಸವ ದಿನಾಚರಣೆ ಅಂಗವಾಗಿ 2024ರ ಜನವರಿ ತಿಂಗಳ ಪೂರ್ತಿ ಕನ್ನಡ ಪುಸ್ತಕ ಪ್ರಾಧಿಕಾರದ ಎಲ್ಲಾ ಪುಸ್ತಕಗಳನ್ನು 50% ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಗುತ್ತಿದೆ. ಬೆಂಗಳೂರಿನ ಕನ್ನಡ ಭವನದ ಸಿರಿಗನ್ನಡ ಪುಸ್ತಕ ಮಳಿಗೆ, ಎಲ್ಲಾ ಜಿಲ್ಲೆಗಳ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದಿಂದ ತೆರೆಯಲಾದ ಎಲ್ಲಾ ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆಗಳಲ್ಲಿ ರಿಯಾಯಿತಿ ಸೌಲಭ್ಯವಿದೆ. ಕನ್ನಡ ಪುಸ್ತಕ ಪದಾಧಿಕಾರದ ಆನ್‌ಲೈನ್ www.kannadapusthakapradhikara.comದಲ್ಲಿ ಕೂಡ ಶೇಕಡ 50 ರಿಯಾಯಿತಿಯಲ್ಲಿ ಪುಸ್ತಕಗಳು ಲಭ್ಯವಿದೆ.

ಕನ್ನಡ ಪುಸ್ತಕ ಪ್ರಾಧಿಕಾರವು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಎಲ್ಲಾ ಪ್ರಕಾರದ ಸಾಹಿತ್ಯ ಕೃತಿಗಳನ್ನು ಇದುವರೆಗೂ ಪ್ರಕಟಿಸುತ್ತಾ ಬಂದಿದ್ದು, ಇವುಗಳಲ್ಲಿ ವ್ಯಕ್ತಿ ಚಿತ್ರಗಳು, ನಾಟಕಗಳು, ಅಲೆಮಾರಿ ಸಮುದಾಯ, ವೈದ್ಯಕೀಯ, ಪ್ರಾಚೀನ ಕನ್ನಡ ಸಾಹಿತ್ಯ, ಜಾನಪದ, ಪರಿಸರ, ಕೃಷಿ ಹೀಗೆ ಹಲವು ಪ್ರಕಾರಗಳಲ್ಲಿ ಸಾಹಿತ್ಯ ಕೃತಿಗಳನ್ನು ಇದುವರೆಗೂ ಸುಮಾರು 704 ಶೀರ್ಷಿಕೆಗಳನ್ನು ಮುದ್ರಿಸಿ ಪ್ರಕಟಿಸಿದೆ. ಅತ್ಯಂತ ಮೌಲಿಕವಾದ ಪ್ರಾಜ್ಞರಿಂದ ರಚಿತವಾದ ಈ ಕೃತಿಗಳನ್ನು ಜನಸಾಮಾನ್ಯರಿಗೆ ಸುಲಭವಾಗಿ ತಲುಪಿಸಬೇಕೆಂದು ಕನ್ನಡ ಪುಸ್ತಕ ಪ್ರಾಧಿಕಾರವು ಈ ರಿಯಾಯಿತಿ ಮಾರಾಟ ವನ್ನು ಆಯೋಜಿಸಿದೆ ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿ ಕೆ.ಬಿ. ಕಿರಣ್‌ಸಿಂಗ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರಲ್ಲಿ ಕೊಮಾರ್ಬಿಡಿಟಿ ಹೊಂದಿದ್ದ ಕೋವಿಡ್ ಸೋಂಕಿತ ವೃದ್ಧ ಸಾವು

ಮೈಸೂರು,ಡಿ.30(ಪಿಎಂ)– ಕೊಮಾರ್ಬಿಡಿಟಿ ಸಮಸ್ಯೆ (ಹಲವು ಅನಾರೋಗ್ಯ) ಹೊಂದಿದ್ದ ಕೋವಿಡ್ ಸೋಂಕಿತ ವೃದ್ಧರೊಬ್ಬರು ಶನಿವಾರ ಮೈಸೂರಿನಲ್ಲಿ ಸಾವನ್ನಪ್ಪಿದ್ದಾರೆ. ಇವರ ಸಾವಿಗೆ ಕೋವಿಡ್ ನೇರ ಕಾರಣವಲ್ಲ ಎಂದು ತಿಳಿಸಿರುವ ಆರೋಗ್ಯ ಇಲಾಖೆ ಮೂಲಗಳು, ಜಿಲ್ಲೆಯಲ್ಲಿ ಆತಂಕಕ್ಕೀಡಾಗುವ ಯಾವುದೇ ಸ್ಥಿತಿಯಿಲ್ಲ ಎಂದು ತಿಳಿಸಿದೆ.

ಮೃತರು ಮೈಸೂರು ನಗರದ 74 ವರ್ಷ ವಯೋಮಾನದ ಪುರುಷರಾಗಿದ್ದು, ಬಿಪಿ, ಹೃದಯ ಸಂಬಂಧಿ ಕಾಯಿಲೆ, ಶ್ವಾಸಕೋಶ ಸಂಬಂಧಿತ ಕಾಯಿಲೆಗಳಿಂದ ಬಳಲುತ್ತಿದ್ದರು. ಇವರನ್ನು ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಿ, ಪರೀಕ್ಷೆಗೆ ಒಳಪಡಿಸಿದಾಗ, ಕೋವಿಡ್ ಸೋಂಕು ಪತ್ತೆಯಾಗಿತ್ತು. ಮೈಸೂರು ಜಿಲ್ಲೆಯಲ್ಲಿ ಸಕ್ರಿಯ ಕೋವಿಡ್ ಪ್ರಕರಣಗಳ ಸಂಖ್ಯೆ 60ಕ್ಕೆ ಏರಿಕೆಯಾಗಿದೆ. ಮೊನ್ನೆಯಷ್ಟೇ ಜಿಲ್ಲೆಯಲ್ಲಿ ಒಬ್ಬರು ಕೋವಿಡ್‌ನಿಂದ ಮೃತಪಟ್ಟಿದ್ದರು. ಇದೀಗ ಕೋವಿಡ್ ಸೋಂಕು ಹೊಂದಿದ್ದ ವೃದ್ಧರೊಬ್ಬರು ಮೃತಪಟ್ಟಿದ್ದರೂ ಅವರ ಸಾವಿಗೆ ಕೋವಿಡ್ ನೇರ ಕಾರಣವಲ್ಲ ಎಂದು ಆರೋಗ್ಯ ಇಲಾಖೆ ಮೂಲಗಳು ಸ್ಪಷ್ಟಪಡಿಸಿವೆ.

ಮೈಸೂರಲ್ಲಿ ಏಕಲವ್ಯ ಮಾದರಿ ವಸತಿ ಶಾಲೆಗಳ ರಾಷ್ಟ್ರೀಯ ಕ್ರೀಡಾಕೂಟ

ಈ ಸಂಬಂಧ ಕ್ರೀಡಾ–ಯುವ ಸಬಲೀಕರಣ ಪ್ರಧಾನ ಕಾರ್ಯದರ್ಶಿ ಡಾ.ಮಂಜುನಾಥ್ ಪ್ರಸಾದ್



ಮೈಸೂರು.ಡಿ.30–ಏಕಲವ್ಯ ಮಾದರಿ ವಸತಿ ಶಾಲೆಗಳ ರಾಷ್ಟ್ರೀಯ ಕ್ರೀಡಾಕೂಟವನ್ನು ಮೈಸೂರಿನಲ್ಲಿ ಜನವರಿ 8ರಿಂದ 12 ರವರೆಗೆ ಆಯೋಜಿಸಲಾಗುವುದು ಎಂದು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಕ್ರೀಡಾ ಹಾಗೂ ಯುವಸಬಲೀಕರಣ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಡಾ. ಮಂಜುನಾಥ್ ಪ್ರಸಾದ್ ತಿಳಿಸಿದ್ದಾರೆ.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜ.7ರಂದು ಕೇಂದ್ರ ಸಚಿವ ಅರ್ಜುನ್ ಮುಂಡಾ ಸೇರಿದಂತೆ ರಾಜ್ಯದ ವಿವಿಧ ಸಚಿವರು, ಗಣ್ಯ ವ್ಯಕ್ತಿಗಳು ಕ್ರೀಡಾಕೂಟವನ್ನು ಉದ್ಘಾಟಿಸಲಿದ್ದಾರೆ. ದೇಶದ ವಿವಿಧ ರಾಜ್ಯಗಳಿಂದ 4,500 ಕ್ರೀಡಾಪಟುಗಳು, 1500 ಶಾಲಾ ಶಿಕ್ಷಕರು ಸಿಬ್ಬಂದಿ ಸೇರಿದಂತೆ ಸುಮಾರು 6,000 ಜನ ಕ್ರೀಡಾಕೂಟದಲ್ಲಿ ಭಾಗವಹಿಸಲಿದ್ದಾರೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಏಕಲವ್ಯ ಮಾದರಿ ವಸತಿ ಶಾಲೆಯು ಕೇಂದ್ರ ಸರ್ಕಾರ ನಡೆಸುತ್ತಿರುವ ಶಾಲೆಗಳಾಗಿದ್ದು, 20 ಕೋಟಿ ವೆಚ್ಚ ಅನುದಾನದಲ್ಲಿ ಸದರಿ ಕಾರ್ಯಕ್ರಮವನ್ನು ಮೈಸೂರಿನಲ್ಲಿ ಈ ಬಾರಿ ಆಯೋಜಿಸಲಾಗುತ್ತಿದ್ದು, ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ತಿಳಿಸಿದ್ದಾರೆ.

ಅಂದಾಜು 5 ಕ್ರೀಡಾಂಗಣಗಳಲ್ಲಿ, ಏಕಕಾಲದಲ್ಲಿ ಕ್ರೀಡಾಸ್ಪರ್ಧೆಗಳು ಜರುಗಲಿದ್ದು, ಕ್ರೀಡಾಪಟುಗಳ ಸಂಚಾರಕ್ಕೆ ವಾಹನಗಳನ್ನು ಒದಗಿಸುವ ಕುರಿತು, ಕ್ರೀಡಾಂಗಣಗಳ ಸ್ವಚ್ಛತೆ, ಊಟದ ವ್ಯವಸ್ಥೆ, ಶೌಚಾಲಯದ ವ್ಯವಸ್ಥೆ, ವೈದ್ಯಕೀಯ ವ್ಯವಸ್ಥೆ, ಆಂಬುಲೆನ್ಸ್ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ, ಪೊಲೀಸ್ ಬಂದೋಬಸ್ತ್ ಸೇರಿದಂತೆ ಎಲ್ಲಾ ಮೂಲಸೌಕರ್ಯಗಳನ್ನು ಒದಗಿಸುವಂತೆ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ಮಾರ್ಗದರ್ಶನ ನೀಡಿದರು.

ಮೈಸೂರು ಅರಮನೆಗೆ ಆಗಮಿಸುವ ಕ್ರೀಡಾಪಟುಗಳಿಗೆ ಮೈಸೂರಿನ ಸಂಸ್ಕೃತಿ ಪರಂಪರೆಯನ್ನು ಪರಿಚಯಿಸುವ ವ್ಯವಸ್ಥೆ ಆಗಬೇಕು. ದೀಪಾಲಂಕಾರ ಹಾಗೂ ಚಾಮುಂಡಿಬೆಟ್ಟ ವೀಕ್ಷಣೆಗೆ ವ್ಯವಸ್ಥೆ ಮಾಡುವಂತೆಯೂ ಸೂಚಿಸಿದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಉಪನಿರ್ದೇಶಕ ಡಾ.ಜಿತೇಂದ್ರ ಶೆಟ್ಟಿ ಮಾತನಾಡಿ, ಕ್ರೀಡಾಕೂಟದಲ್ಲಿ 10 ಗುಂಪು ಕ್ರೀಡಾಸ್ಪರ್ಧೆಗಳನ್ನು ಹಾಗೂ 18 ಅಥ್ಲೆಟಿಕ್ಸ್ ಸ್ಪರ್ಧೆಗಳನ್ನು ಆಯೋಜಿಸಲಾಗುವುದು. ಕ್ರೀಡೆ ನಡೆಯುವ ಸ್ಥಳ, ಸಮಯ, ಕೆಲಸಗಳಿಗೆ ನಿಯೋಜಿಸಲ್ಪಟ್ಟ ನೋಡಲ್ ಅಧಿಕಾರಿಗಳ ವಿವರ ಎಲ್ಲವನ್ನು ಮುಂಚಿತವಾಗಿಯೇ ತಲುಪಿಸುವ ವ್ಯವಸ್ಥೆ ಆಗುತ್ತದೆ. ಈಗಾಗಲೇ 3500 ಕ್ರೀಡಾಪಟುಗಳಿಗೆ ಇನ್ಶೂರೆನ್ಸ್ ಮಾಡಿಸಲಾಗಿದೆ. ಕ್ರೀಡಾಕೂಟದಲ್ಲಿ ಕೋವಿಡ್ ಸೂಚನೆಗಳನ್ನು ಪಾಲಿಸಲಾಗುವುದು. ಪ್ರತಿಯೊಂದು ರಾಜ್ಯಕ್ಕೂ ನೋಡಲ್ ಅಧಿಕಾರಿಗಳನ್ನು ನಿಯೋಜಿಸಲಾಗುವುದು ಎಂದು ಮಾಹಿತಿ ನೀಡಿದ್ದಾರೆ. ಸಭೆಯಲ್ಲಿ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ, ಪರಿಶಿಷ್ಟ ವರ್ಗಗಳ ಇಲಾಖೆಯ ನಿರ್ದೇಶಕ ಕಲ್ಲೇಶ್, ಅಪರ ಜಿಲ್ಲಾಧಿಕಾರಿ ಆರ್.ಲೋಕನಾಥ್, ಉಪ ಪೊಲೀಸ್ ಆಯುಕ್ತ ಜಾಹ್ನವಿ, ಮೈಸೂರು ಮಹಾನಗರಪಾಲಿಕೆ ಆಯುಕ್ತ ಆಶಾದ್ ಉರ್ ರೆಹ್ಮಾನ್ ಷರೀಫ್, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಂಗೇಗೌಡ, ಯೋಜನಾ ನಿರ್ದೇಶಕ ಮುನಿರಾಜು ಹಾಗೂ ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆ ಉಪನಿರ್ದೇಶಕ ಅಶೋಕ್ ಕುಮಾರ್.ಡಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಪ್ರಧಾನ ಮಂತ್ರಿಗಳ ವಿಡಿಯೋ ಸಂವಾದ

ಜನವರಿ 15ರಂದು ನೈಜ ದುರ್ಬಲ ಬುಡಕಟ್ಟು ಜನಾಂಗದವರ ಜೊತೆ ಪ್ರಧಾನಮಂತ್ರಿಗಳ ವಿಡಿಯೋ ಸಂವಾದ ಕಾರ್ಯಕ್ರಮ ಮೈಸೂರಿನಲ್ಲಿ ನಡೆಯಲಿದ್ದು, ಕಾರ್ಯಕ್ರಮದಲ್ಲಿ ಪ್ರಧಾನ ಮಂತ್ರಿಗಳು ನೈಜ ದುರ್ಬಲ ಬುಡಕಟ್ಟು ಜನಾಂಗದ (ಜೇನು ಕುರುಬ ಮತ್ತು ಕೊರಗ) ಜನರ ಜೊತೆ ನೇರ ಸಂಭಾಷಣೆ ನಡೆಸುವರು ಎಂದು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಡಾ.ಮಂಜುನಾಥ್ ಪ್ರಸಾದ್ ತಿಳಿಸಿದ್ದಾರೆ.

ದೇಶದಲ್ಲಿ ನೈಜ ದುರ್ಬಲ ಬುಡಕಟ್ಟು ಜನಾಂಗದ ಸಂಖ್ಯೆ 20 ಲಕ್ಷವಿದ್ದು, ರಾಜ್ಯದಲ್ಲಿ 70 ಸಾವಿರ ಜನಸಂಖ್ಯೆ ಇದೆ. ಆದಿವಾಸಿ ದುರ್ಬಲ ಬುಡಕಟ್ಟು ಜನಾಂಗದ ಅಭಿವೃದ್ಧಿ ಯೋಜನೆ ಅಡಿ 24 ಸಾವಿರ ಕೋಟಿ ರೂ ಅನುದಾನವನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಲಿದ್ದು, ಸದರಿ ಯೋಜನೆಯು ಆದಿವಾಸಿಗಳ ಮನೆ ನಿರ್ಮಾಣ, ರಸ್ತೆ ನಿರ್ಮಾಣ, ಕುಡಿಯುವ ನೀರು, ವಿದ್ಯುತ್ ವ್ಯವಸ್ಥೆ, ಶಾಲೆ, ವಿದ್ಯಾರ್ಥಿ ನಿಲಯ, ಆಸ್ಪತ್ರೆ ನಿರ್ಮಾಣ, ಅಂಗನವಾಡಿ ನಿರ್ಮಾಣ, ಸಮುದಾಯ ಭವನ ನಿರ್ಮಾಣ ಸೇರಿದಂತೆ ಮೂಲ ಸೌಕರ್ಯಗಳನ್ನು ಒದಗಿಸುವುದಾಗಿದೆ ಎಂದರು.

ಪ್ರಧಾನ ಮಂತ್ರಿಗಳು ನಡೆಸಲಿರುವ ವಿಡಿಯೋ ಸಂವಾದ ಕಾರ್ಯಕ್ರಮದಲ್ಲಿ 50ರಿಂದ 75 ಆದಿವಾಸಿ ಜನರು ಭಾಗವಹಿಸಲಿದ್ದು, ಸಕಲ ಸಿದ್ಧತೆಗಳನ್ನು ಮಾಡುವಂತೆ ಸಂಬಂಧಿತ ಅಧಿಕಾರಿಗಳಿಗೆ ಸೂಚಿಸಿದರು.

ಶಿವಶರಣೆ ಹೇಮರೆಡ್ಡಿ ಮಲ್ಲಮ್ಮರಿಂದ ಸಮಾಜ ಕಲಿಯಬೇಕಾದ ದೊಡ್ಡ ಪಾಠ ಸಹನೆ

ಜಾನಪದ ವಿದ್ವಾಂಸ ಡಾ.ಗೊ.ರು.ಚನ್ನಬಸಪ್ಪ ಅಭಿಮತ



ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ಆವರಣದ ಶ್ರೀ ರಾಜೇಂದ್ರ ಭವನದಲ್ಲಿ ಶನಿವಾರ ವಿವಿಧ ಕ್ಷೇತ್ರದ ಸಾಧಕರಿಗೆ ಹೇಮರೆಡ್ಡಿ ಮಲ್ಲಮ್ಮ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು,ಡಿ.30(ಪಿಎಂ)– ಪ್ರಸ್ತುತ ಸಹನೆಯ ಕೊರತೆ ಕಾರಣಕ್ಕೆ ನಮ್ಮ ಸಮಾಜದ ಎಲ್ಲಾ ವ್ಯವಸ್ಥೆಗಳಲ್ಲಿ ಘರ್ಷಣೆಗೆ ಆಸ್ಪದವಾಗುತ್ತಿದ್ದು, ಶಿವಶರಣೆ ಹೇಮರೆಡ್ಡಿ ಮಲ್ಲಮ್ಮರಿಂದ ಸಮಾಜ ಕಲಿಯಬೇಕಾದ ಬಹಳ ದೊಡ್ಡ ಪಾಠವೆಂದರೆ ಸಹನೆ ಎಂದು ಜಾನಪದ ವಿದ್ವಾಂಸ ಡಾ.ಗೊ.ರು. ಚನ್ನಬಸಪ್ಪ ಅಭಿಪ್ರಾಯಪಟ್ಟರು.

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ಆವರಣದ ಶ್ರೀ ರಾಜೇಂದ್ರ ಭವನದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಬಳಗದ 5ನೇ ವಾರ್ಷಿಕೋತ್ಸವದಲ್ಲಿ 'ಹೇಮರೆಡ್ಡಿ ಮಲ್ಲಮ್ಮನ ಚರಿತ್ರೆ' ಪುಸ್ತಕ (ಮೂಲ ಕಾವ್ಯ ; ದ್ಯಾಂಪುರ ಚನ್ನಕವಿ, ಗದ್ಯಸಾರ ; ಗೊ.ರು.ಚನ್ನಬಸಪ್ಪ) ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಇಂದು ಸಹನೆ ಇಲ್ಲದ ಕಾರಣಕ್ಕೆ ನಮ್ಮ ರಾಜಕೀಯ, ಸಾಮಾಜಿಕ, ಧಾರ್ಮಿಕ ಮೊದಲಾದ ವ್ಯವಸ್ಥೆಗಳಲ್ಲಿ ಘರ್ಷಣೆಯೇ ತುಂಬಿ ಹೋಗಿದೆ. ಎಲ್ಲರ ಜೀವನ, ಕ್ಷೇತ್ರ, ವ್ಯಕ್ತಿಯಿಂದ ಹಿಡಿದು ಸಮಷ್ಟಿವರೆಗೆ ಬೇಕಿರುವ ದೊಡ್ಡ ಗುಣವೆಂದರೆ ಸಹನೆ. ಅಂತಹ ಸಹನೆಯ ಮಹತ್ವವನ್ನು ಹೇಮರೆಡ್ಡಿ ಮಲ್ಲಮ್ಮ ತೋರಿಸಿಕೊಟ್ಟಿದ್ದು, ಎಲ್ಲರ ಮನಸ್ಸನ್ನು ಸಹನೆಯಿಂದ ಗೆಲ್ಲುವ ಮತ್ತು ದುಷ್ಟರನ್ನು ಪರಿವರ್ತಿಸುವ ತಾತ್ವಿಕ ಗುಣ ಅವರಲ್ಲಿತ್ತು ಎಂದು ಸ್ಮರಿಸಿದರು.

ಆತ್ಮ ಪರಮಾತ್ಮ ಬ್ರಹ್ಮಾಂಡ, ಪಿಂಡಾಂಡ ಇಂತಹ ವೇದಾಂತ ತತ್ವಗಳ ಕುರಿತು ಹೇಮರೆಡ್ಡಿ ಮಲ್ಲಮ್ಮ ಚಿಂತನೆ ನಡೆಸಲಿಲ್ಲ. ವಚನ ಹಾಗೂ ಕಾವ್ಯ ರಚಿಸಲಿಲ್ಲ. ಜೊತೆಗೆ ಅಂತಹ ಯಾವುದೇ ಸ್ಥಾನಮಾನವೂ ಇರಲಿಲ್ಲ. ಆದರೂ ಅದೆಲ್ಲದಕ್ಕಿಂತಲೂ ಮಿಗಿಲಾದ ಒಂದು ನಡೆ–ನುಡಿಯಿಂದ ಹೇಮರೆಡ್ಡಿ ಮಲ್ಲಮ್ಮ ಚಾರಿತ್ರಿಕವಾಗಿ ಉಳಿದಿದ್ದಾರೆ ಎಂದು ಹೇಳಿದರು.

ಹೇಮರೆಡ್ಡಿ ಮಲ್ಲಮ್ಮ ಐತಿಹಾಸಿಕ ವ್ಯಕ್ತಿ. ದಾರ್ಶನಿಕರು, ಸಾಧು–ಸಂತರು, ರಾಜಕೀಯ ಪ್ರಮುಖರು, ಸಾಮಾಜಿಕ ಪ್ರಮುಖರು, ಧರ್ಮಗುರುಗಳು, ವಿದ್ವಾಂಸರ ಜಯಂತಿ ಆಚರಿಸುವುದು ಸಾಮಾನ್ಯ. ಆದರೆ ಹೇಮರೆಡ್ಡಿ ಮಲ್ಲಮ್ಮನವರಿಗೆ ಆ ಭಾಗ್ಯ ಇರಲಿಲ್ಲ. ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟ ನಂತರ ಸರ್ಕಾರವು ಅವರ ಜಯಂತಿ ಆಚರಣೆಗೆ ಕ್ರಮ ವಹಿಸಿದೆ. ಗುಲ್ಬರ್ಗ ವಿವಿಯಲ್ಲಿ ಹೇಮರೆಡ್ಡಿ ಮಲ್ಲಮ್ಮರ ಅಧ್ಯಯನ ಪೀಠ ಸ್ಥಾಪನೆಯಾಗಿದೆ. ಆದರೆ ಹೇಮರೆಡ್ಡಿ ಮಲ್ಲಮ್ಮರ ಬಗ್ಗೆ ಅಷ್ಟಾಗಿ ದಕ್ಷಿಣ ಕರ್ನಾಟಕದಲ್ಲಿ ಪರಿಚಯವಿಲ್ಲ. ಉತ್ತರ ಕರ್ನಾಟಕದಲ್ಲಿ ಅವರ ಕುರಿತು 13 ಗ್ರಂಥಗಳು ಪ್ರಕರಣವಾಗಿವೆ. ನಾಟಕ, ಪ್ರಬಂಧ, ಕಾವ್ಯ ಹೀಗೆ ನಾನಾ ಪ್ರಕಾರಗಳಲ್ಲಿ ಕೃತಿಗಳನ್ನು ಹೊರತರಲಾಗಿದೆ. ಜೊತೆಗೆ ಚಲನಚಿತ್ರವೂ ನಿರ್ಮಾಣವಾಗಿದೆ ಎಂದರು.

> **"ಮನುಷ್ಯ ಧಾರ್ಮಿಕ, ಆಧ್ಯಾತ್ಮಿಕವಾಗಿ ಸನ್ಮಾರ್ಗದಲ್ಲಿ ನಡೆಯಲು ತನ್ನ ಮನಸ್ಸಿನ ಎಲ್ಲಾ ಕಲ್ಮಷಗಳನ್ನು ಹೊರಹಾಕಿ ಪರಿಶುದ್ಧಿತೆ ಕಾಪಾಡಿಕೊಳ್ಳಬೇಕು. ಆಗಲೇ ಸದ್ಗತಿ ದೊರೆತು ಸದ್ವಿಚಾರಗಳು ಮೂಡಲು ಸಾಧ್ಯವಾಗುತ್ತದೆ. ಅದರಂತೆ ಬದುಕಿದವರು ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ. –ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ**

ಇತಿಹಾಸದಲ್ಲಿ ಬರುವ ಅಕ್ಕಮಹಾದೇವಿ ಸೇರಿದಂತೆ ಮೊದಲಾದವರು ಸಂಸಾರಕ್ಕೆ ದೂರವಾಗಿ ಆತ್ಮ ಸಾಕ್ಷಾತ್ಕಾರ ಮಾಡಿಕೊಂಡ ಮಹನೀಯ ಮಹಿಳೆಯರು. ಆದರೆ ಹೇಮರೆಡ್ಡಿ ಮಲ್ಲಮ್ಮ ನವರು ಸಂಸಾರದಲ್ಲಿದ್ದೇ ಅಲ್ಲಿ ಎದುರಾದ ಸಮಸ್ಯೆಗಳ ನಡುವೆಯೇ ಶ್ರೀಶೈಲ ಮಲ್ಲಿಕಾರ್ಜುನನ ಸಾಕ್ಷಾತ್ಕಾರ ಮಾಡಿಕೊಂಡ ಸಾಧ್ವಿ ಎಂದು ನುಡಿದರು.

ಮೈಸೂರಲ್ಲಿ ಹೇಮರೆಡ್ಡಿ ಮಲ್ಲಮ್ಮ ಬಳಗದ ಕಾರ್ಯಕ್ರಮಗಳಿಂದ ಮಲ್ಲಮ್ಮನ ಪರಿಚಯ ಈ ಭಾಗದಲ್ಲಿ ಆಗುತ್ತಿದೆ. ಮಲ್ಲಮ್ಮನ ವಿಶೇಷವೆಂದರೆ ಆಂಗ್ಲರ ವಿರುದ್ಧ ಖಡ್ಗ ಹಿಡಿದು ಹೋರಾಡಿದಂತಹ ಕಿತ್ತೂರು ರಾಣಿ ಚನ್ನಮ್ಮ ರಾಜಧರ್ಮ ಪಾಲಿಸಿದರೆ, ಮಲ್ಲಮ್ಮ ಭಕ್ತಿ ಎನ್ನುವ ಖಡ್ಗ ಹಿಡಿದು ಗೃಹಧರ್ಮ ಪಾಲಿಸಿದವರು ಎಂದು ಹೇಳಿದರು.

ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, ಬಳಗವು ಕಳೆದ ಐದು ವರ್ಷಗಳಿಂದ ಅನೇಕ ಅರ್ಥಪೂರ್ಣ ಕಾರ್ಯಕ್ರಮಗಳೊಂದಿಗೆ ಮುನ್ನಡೆಯುತ್ತಿದೆ. ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಒಬ್ಬ ಸಾತ್ವಿಕ ಹೆಣ್ಣು ಮಗಳು. ಪರಿಶುದ್ಧ ಮನಸ್ಸಿನಿಂದ ಮಾಡುವ ಕಾರ್ಯಕ್ಕೆ ಸಿದ್ಧಿ ಇರುತ್ತದೆ ಎನ್ನುವುದಕ್ಕೆ ಹೇಮರೆಡ್ಡಿ ಮಲ್ಲಮ್ಮನ ಜೀವನವೇ ಸಾಕ್ಷಿ. ಪತಿಯ ಮನೆಯಲ್ಲಿ ಕಷ್ಟಕಾರ್ಪಣ್ಯ ಅನುಭವಿಸಿದರೂ ಅದನ್ನು ಭಗವಂತ ಕೊಟ್ಟಂತಹ ಪರೀಕ್ಷೆ ಎಂದು ಧೈರ್ಯವಾಗಿ ಎದುರಿಸಿದ ಸೌಜನ್ಯ ಮೂರ್ತಿ ಎಂದು ನುಡಿದರು.

ಇದಕ್ಕೂ ಮುನ್ನ ಮೈಸೂರು ವೈದ್ಯಕೀಯ ಕಾಲೇಜಿನ ನಿರ್ದೇಶಕಿ ಮತ್ತು ಡೀನ್ ಡಾ.ಕೆ.ಆರ್. ದಾಕ್ಷಾಯಿಣಿ, ಬೋಗಾದಿ ಪೇರೆಂಟ್ಸ್ ಆಫ್ ಡೆಫ್ ಚಿಲ್ಡ್ರನ್ಸ್ ಅಸೋಸಿಯೇಷನ್‌ನ ಚೀಫ್ ಕೌನ್ಸಿಲರ್ ಉಮಾ ಹೆಚ್.ರಾಯನಗೌಡರ್, ಚಿತ್ರಕಲಾ ಶಿಕ್ಷಕಿ ಶಶಿಕಲಾ ಬಿ.ದೇಸಾಯಿ ಅವರಿಗೆ ಹೇಮರೆಡ್ಡಿ ಮಲ್ಲಮ್ಮ ಪ್ರಶಸ್ತಿ ಪ್ರದಾನ ಮಾಡಲಾಯಿತು. ಅಲ್ಲದೆ, ಬಳಗದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ವಾರ್ಷಿಕೋತ್ಸವ ಉದ್ಘಾಟಿಸಿದರು. ಬಡಗನಾಡು ಹೇಮರೆಡ್ಡಿ ಜನಾಂಗ ಸಂಘದ ಹೆಚ್.ಸಿ.ರೇವಣ್ಣ ಸಿದ್ದಪ್ಪ, ಬಳಗದ ಅಧ್ಯಕ್ಷ ಡಾ.ಜಿ.ಎಂ.ವಾಮದೇವ, ಉಪಾಧ್ಯಕ್ಷ ಶಿವಲಿಂಗಸ್ವಾಮಿ, ಕಾರ್ಯದರ್ಶಿ ಹೆಚ್.ಎಂ. ಹೇಮರೆಡ್ಡಿ, ಖಜಾಂಚಿ ಮಹಾಂತೇಶ್ ಮತ್ತಿತರರಿದ್ದರು.

ನಕ್ಕರೆ ಅದೇ ಸ್ವರ್ಗ

ಪತ್ನಿ : "ಏನೂಂದ್ರೆ ನೀವು ಯಾಕೆ ಈಜು ಕಲೀಲಿಲ್ಲ?"
ಪತಿ : "ಈಗ ಮಾಡ್ತಿರೋದು ಏನು?"
ಪತ್ನಿ : "ಎಲ್ರೀ, ಕುರ್ಚಿ ಮೇಲಷ್ಟೇ ಕೂತಿದ್ದೀರಿ"
ಪತಿ : "ಅಲ್ವೇ, ನಿನ್ನ ಮದುವೆಯಾದ ದಿನದಿಂದ ಸಂಸಾರ ಸಾಗರದಲ್ಲಿ ಈಜುತ್ತಾ ಇಲ್ವಾ?!"

ಮೈಸೂರು ಮಿತ್ರ

ಭಾನುವಾರ, 31 ಡಿಸೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಚಿಕ್ಕದು ಎನ್ನುವ ಕೆಲಸಗಳನ್ನು ಈಗಲೇ ಚೆನ್ನಾಗಿ ಮಾಡು. ಆಗ ದೊಡ್ಡ ಕೆಲಸ ತಾನಾಗಿಯೇ ನಿನ್ನನ್ನು ಹುಡುಕಿಕೊಂಡು ಬರುತ್ತದೆ. –ನುಡಿಮುತ್ತು

ವೇದ ಸುಳ್ಳಾದರೂ { ಉಂಡವರೇನು ಬಲ್ಲರು
ಗಾದೆ ಸುಳ್ಳಾಗದು { ಉಪವಾಸವಿದ್ದವರ ಸಂಕಟ

ನಿಮ್ಮ ಪತ್ರಗಳು

ಹೊಸ ವರ್ಷದ ಸಂಭ್ರಮದಲ್ಲಿ ಜೀವನಕ್ಕೆ ಅನುಕೂಲವಾಗುವ ನಿರ್ಣಯ ಕೈಗೊಳ್ಳಿ

ಮಾನ್ಯರೆ,

2023ರ ಕೊನೆಯ ಹಂತದಲ್ಲಿದ್ದೇವೆ.

ಪ್ರತೀ ವರ್ಷವೂ ಕೊನೆಯಲ್ಲಿ ಈ ವರ್ಷ ಹಾಗೆ ಮಾಡಬಾರದಿತ್ತು. ಹೀಗೆ ಮಾಡಬೇಕಿತ್ತು ಅಂತ ಅಂದುಕೊಳ್ಳುವುದು, ಹೊಸ ವರ್ಷದ ಮೊದಲಿನಿಂದಲೇ ಹಾಗೆ ಇರಬೇಕು, ಹೀಗೆ ಇರಬೇಕು ಅಂತ ನಿರ್ಣಯ ಮಾಡುವುದು ಮತ್ತು ನಾಲ್ಕು ದಿವಸ ಹೋದ ಮೇಲೆ ಯಾವುದೇ ನಿರ್ಣಯಗಳನ್ನು ಪಾಲಿಸದೇ ಅರ್ಧಕ್ಕೆ ನಿಲ್ಲಿಸುವುದು ಮಾಮೂಲಾಗಿ ಬಿಟ್ಟಿದೆ.

ಅದಕ್ಕೆ ಹೊಸ ವರ್ಷಕ್ಕೆ ಅಂತ ಯಾವುದೇ ನಿರ್ಣಯಗಳನ್ನು ಮಾಡುವುದರ ಬದಲಿಗೆ ನಮ್ಮ ಮುಂದಿನ ಜೀವನಕ್ಕೆ ಅನುಕೂಲವಾಗುವಂತಹ ಒಂದಿಷ್ಟು ಹೊಸ ಬದಲಾವಣೆ ಮಾಡಿಕೊಂಡರೆ ಒಳ್ಳೆಯದು.ಅಂತಹ ಕೆಲವು ಬದಲಾವಣೆಗಳು...

1)ಪ್ರತಿ ದಿನ ಮುಂಜಾನೆ ನಿಗದಿತ ಸಮಯಕ್ಕೆ ಅಥವಾ ಅಲರಾಂ ಹೊಡೆದ ತಕ್ಷಣ ತಡಮಾಡದೆ ಏಳುವುದು.

2)ಪ್ರತೀ ದಿನ ಬೆಳಿಗ್ಗೆ ಕನಿಷ್ಠ ಮೂವತ್ತರಿಂದ ನಲವತ್ತು ನಿಮಿಷಗಳ ವ್ಯಾಯಾಮ ಅಥವಾ ವಾಕಿಂಗ್ ಮಾಡುವುದು.

3) ಆದಾಯಕ್ಕೆ ತಕ್ಕ ಖರ್ಚುಗಳನ್ನು ಮಾಡುವುದು. ಸಾಲ ಮಾಡಿದರೂ ತೀರಿಸುವ ಸಾಮರ್ಥ್ಯಕ್ಕನುಗುಣವಾಗಿ ಸಾಲ ಮಾಡುವುದು ಮತ್ತು ನಿಗದಿತ ಸಮಯಕ್ಕೆ ಮರು ಪಾವತಿಸುವುದು.

4) ನಮ್ಮ ಆದಾಯ, ಸಾಲ, ಜೀವನ ಶೈಲಿ,ಕಷ್ಟ–ಸುಖ ಯಾವುದನ್ನೂ ಇನ್ನೊಬ್ಬರ ಜೊತೆ ತುಲನೆ ಮಾಡಿ ನೋಡಿಕೊಳ್ಳದಿರುವುದು ಹಾಗೂ ಇನ್ನೊಬ್ಬರ ಯಶಸ್ಸು ನೋಡಿ ಅಸೂಯೆ ಪಡದೆ ಇರುವುದು.

5) ಇನ್ನೊಬ್ಬರಿಗೆ ಒಳ್ಳೆಯದಾದರೆ, ಇನ್ನೊಬ್ಬರಲ್ಲಿ ವಿಶೇಷವಾದ ಪ್ರತಿಭೆ ಇದ್ದರೆ, ಸಾಧನೆ ಮಾಡಿದರೆ ನೋಡಿ ಗುರುತಿಸಿ ಸಂತೋಷ ಪಡುವುದು ಹಾಗೂ ಅವರಿಗೆ ಪ್ರೋತ್ಸಾಹಿಸುವುದು.

6) ಜೀವನದಲ್ಲಿ ನಡೆಯುವ ಸಣ್ಣ ಸಣ್ಣ ವಿಷಯಗಳನ್ನೂ ಸಂಭ್ರಮಿಸುವುದು ಹಾಗೂ ನಮ್ಮ ಕೈಯಲ್ಲಿ ಸಾಧ್ಯವಾದಷ್ಟು ಇನ್ನೊಬ್ಬರಿಗೆ ಸಹಾಯ ಮಾಡುವುದು.

7) ಸಾಧ್ಯವಾದಷ್ಟು ಜಂಕ್ ಫುಡ್, ಸ್ವಚ್ಛತೆ ಇಲ್ಲದ ಆಹಾರವನ್ನು ಹೊರಗಡೆ ಸೇವಿಸುವುದನ್ನು ಕಡಿಮೆ ಮಾಡುವುದು. ಧೂಮಪಾನ,ಮದ್ಯಪಾನ ವ್ಯಸನದಿಂದ ದೂರವಿರುವುದು.

8) ಬಿಡುವಿನ ವೇಳೆಯಲ್ಲಿ ಒಳ್ಳೆಯ ಪುಸ್ತಕಗಳನ್ನು ಓದುವುದು,ಸಂಗೀತ ಕೇಳುವುದು ಅಥವಾ ಧಾರ್ಮಿಕ ಗ್ರಂಥಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳುವುದು, ದೇವರ ಕೆಲಸ ಮಾಡುವುದು, ಒಳ್ಳೆಯ ಸ್ಥಳಗಳಿಗೆ ಪ್ರವಾಸ ಮಾಡುವುದು.

9) ಕೆಲಸಕಾರ್ಯಗಳ ಒತ್ತಡದಿಂದ ಮುಕ್ತರಾಗಲು ಮನೆಯವರ ಜೊತೆ, ಸಮಾನಮನಸ್ಕ ಸ್ನೇಹಿತರ ಜೊತೆ ಸಮಯ ಕಳೆಯುವುದು.ವರ್ಕ್ ಲೈಫ್ ಬ್ಯಾಲೆನ್ಸ್ ಮಾಡುವುದು.

10)ಎಂತಹ ಸಂದರ್ಭದಲ್ಲೂ ಭ್ರಷ್ಟರಾಗದೆ, ಆಮಿಷಗಳಿಗೆ ಒಳಗಾಗದೆ ಪ್ರಾಮಾಣಿಕರಾಗಿ ಬದುಕು ನಡೆಸುವುದು.

ಮೇಲ್ಕಂಡ ಯಾವುದೇ ಈ ನಿರ್ಣಯಗಳ ಕಾರ್ಯರೂಪಕ್ಕೆ ತರಲು ಹೆಚ್ಚು ಹಣದ ಅವಶ್ಯಕತೆಯಿಲ್ಲ.ಯಾರ ಅಪ್ಪಣೆ ಬೇಡ.ಮನಸ್ಸು ಮಾಡಬೇಕಷ್ಟೆ.

ಇಷ್ಟೆಲ್ಲಾ ಮಾಡಿದ ಮೇಲೂ ಯಾವಾಗಲೂ ನೆಮ್ಮದಿಯ ಜೀವನ ಸಿಗುತ್ತದೆ ಅಂತ ಏನೂ ಅಲ್ಲ.ಜೀವನ ಎಂದರೆ ಅನೇಕ ತಿರುವುಗಳು. ನಮ್ಮ ಅರಿವಿಲ್ಲದೆಯೇ ನಮ್ಮದೇನು ತಪ್ಪು ಇಲ್ಲದಿದ್ದರೂ ಕೆಲವೊಮ್ಮೆ ಕಷ್ಟಗಳ ಸರಮಾಲೆ ಬರಬಹುದು. ಹೆಚ್ಚಿನ ಸಮಸ್ಯೆಗಳಿಗೆ ಕಾಲವೇ ಉತ್ತರಿಸುತ್ತದೆ. ಹಾಗಾಗಿ ಧೃತಿಗೆಡದೆ ತಾಳ್ಮೆಯಿಂದ ಪರಿಹಾರ ಕಂಡುಕೊಳ್ಳಬೇಕು. ತೀರಾ ಬಗೆಹರಿಯದ ಸಮಸ್ಯೆಯಿದ್ದರೆ ಅದರೊಂದಿಗೆ ಬದುಕಲು ಮನಸ್ಸು ಗಟ್ಟಿ ಮಾಡಿಕೊಳ್ಳಬೇಕು ಅಷ್ಟೇ. ಹಾಗಾದಲ್ಲಿ ಮಾತ್ರ ಬದುಕು ಸುಂದರವಾಗಿರುತ್ತದೆ. 2024ರಿಂದ ಹೊಸ ಬದುಕು ಕಟ್ಟುವತ್ತ ಹೆಜ್ಜೆ ಹಾಕೋಣ.

–ರಾಘವೇಂದ್ರ ಜೋಯಿಸ್, ಮೈಸೂರು

ವೈದ್ಯರು ಅಪರಾಧಿಗಳಲ್ಲ

ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ಹೆಣ್ಣು ಭ್ರೂಣ ಹತ್ಯೆ ವಿಚಾರದಲ್ಲಿ ಪತ್ರಿಕೆಗಳಲ್ಲಿ ಬರುತ್ತಿರುವ ವರದಿಗಳನ್ನು ನೋಡುತ್ತಿದ್ದೇವೆ. ಆದರೆ ಇಲ್ಲಿ ವೈದ್ಯಾಧಿಕಾರಿಗಳು ಯಾವುದೇ ರೀತಿಯ ಜವಾಬ್ದಾರರಲ್ಲ. ಯಾವ ವೈದ್ಯರು ಮಹಿಳೆಯರೆ, ಅವಿವಾಹಿತರೆ ಬನ್ನಿ ನಾವು ನಿಮಗೆ ಗರ್ಭಪಾತ ಮಾಡುತ್ತೇವೆ ಎಂದು ಕರೆಯುವುದಿಲ್ಲ. ಅವರವರ ವೈಯಕ್ತಿಕವಾದ ಸಮಸ್ಯೆಯಿಂದ ಬಂದು ಚಿಕಿತ್ಸೆ ಪಡೆಯುತ್ತಾರೆ. ಇದರಿಂದ ಎಷ್ಟೋ ಕುಟುಂಬಗಳಿಗೆ ಒಳ್ಳೆಯದಾಗಿದೆ. ಬಹಳಷ್ಟು ಜನ ರೋಗಿಗಳಿಗೆ ತೊಂದರೆಯಾಗಿದೆ.

– ಹಿರಿಯ ನಾಗರಿಕರು, ನಂಜನಗೂಡು.

ಅಂಚೆ ಅಧಿಕಾರಿಗಳಲ್ಲಿ ಮನವಿ

ಮಾನ್ಯರೆ,

ಇತ್ತೀಚೆಗೆ ಮೈಸೂರಿನ ಬಹುತೇಕ ಅಂಚೆ ಕಚೇರಿಗಳಲ್ಲಿ ರೂ. 5ರ ಮುಖ ಬೆಲೆಯ ಪೋಸ್ಟ್ ಕವರ್‌ಗಳು ಅಲಭ್ಯವಾಗಿದೆ. ಇದರಿಂದ ಗ್ರಾಹಕರು ಹೊರಗಡೆ ಅಂಗಡಿಗಳಲ್ಲಿ ಲಕೋಟೆ ಕವರ್‌ಗಳನ್ನು ಕೊಂಡು ಅದಕ್ಕೆ ಸ್ಟಾಂಪ್ ಅಂಟಿಸಬೇಕಾಗುತ್ತದೆ. ಇದರಿಂದ ಹಣ ಮತ್ತು ಕಾಲಹರಣ ಹೆಚ್ಚಾಗುತ್ತದೆ. ದಕ್ಷ ಅಂಚೆ ಅಧಿಕಾರಿಗಳು ಸಮಸ್ಯೆ ಬಗೆಹರಿಸಲು ಮನವಿ. –ಜಿ.ಪಿ. ರಾಜೇಶ್, ವಿ.ವಿ. ಪುರಂ, ಮೈಸೂರು.


ಹೆಚ್‌ಎಸ್‌ಆರ್‌ಪಿ ಫಲಕ ಅಳವಡಿಕೆಗೆ ಹೆಚ್ಚುವರಿ ಶುಲ್ಕ ವಸೂಲಿ, ಕ್ರಮಕ್ಕೆ ಮನವಿ

ಮಾನ್ಯರೆ,

ಸರಕಾರ ಹೊಸದಾಗಿ ವಾಹನಗಳಿಗೆ ಹೆಚ್‌ಎಸ್‌ಆರ್‌ಪಿ ಫಲಕಗಳನ್ನು ಅಳವಡಿಸಲು ಅನುಷ್ಠಾನಕ್ಕೆ ತಂದಿರುವುದು ಸರಿಯಷ್ಟೆ. ಇದು ದೇಶದ ಭದ್ರತೆ ಮತ್ತು ನಾಗರಿಕರ ಸಂರಕ್ಷಣೆಯ ಬಗ್ಗೆ ಕೈಗೊಂಡ ನಿರ್ಧಾರವಿರಬಹುದು.

ಸದರಿ ನೂತನ ಫಲಕ ಅಳವಡಿಸಲು ನಿಗದಿತ ಶುಲ್ಕವನ್ನು ಜಾಲತಾಣದ ಮೂಲಕ ಸಂಬಂಧಿಸಿದ ಇಲಾಖೆಗೆ ಪಾವತಿ ಮಾಡಿ, ನಂತರ ನಿಗದಿತ ದಿನಾಂಕದಂದು ನಾವು ವಾಹನ ಕೊಂಡುಕೊಂಡ ಮಳಿಗೆಗೆ ಹೋಗಿ ಫಲಕ ಹಾಕಿಸಿಕೊಳ್ಳಬೇಕು. ಫಲಕಕ್ಕೆ ನಿಗದಿತ ಶುಲ್ಕ ರೂ. 495 ಪಾವತಿ ಮಾಡಿರುತ್ತೇವೆ. ಇದರಲ್ಲಿ ಜೋಡಣೆ ವೆಚ್ಚ ಸಹ ಸೇರಿರುತ್ತದೆ. ಆದರೆ ವಾಹನದ ಮಳಿಗೆಯವರು ಪ್ರತ್ಯೇಕವಾಗಿ 100 ರೂ. ಹೆಚ್ಚುವರಿ ಕಟ್ಟಿಸಿಕೊಳ್ಳುತ್ತಾರೆ. ವಿಚಾರಿಸಿದರೆ ನಮಗೆ ಅದರ ಬಗ್ಗೆ ಮಾಹಿತಿ ಇಲ್ಲ. ಹೆಚ್ಚುವರಿ ಪಾವತಿಸಿದರೆ ಮಾತ್ರ ಜೋಡಿಸಿ ಕೊಡುತ್ತೇವೆ ಎನ್ನುತ್ತಾರೆ. ಇದು ಹಗಲುದರೋಡೆಯ ತಂತ್ರ. ಈ ರೀತಿಯಿಂದ ವಾಹನ ಮಾಲೀಕರಿಗೆ ಅನ್ಯಾಯವಾಗುತ್ತಿದೆ. ಆದುದರಿಂದ ಸಂಬಂಧಪಟ್ಟ ಆರ್‌ಟಿಓ ಅಧಿಕಾರಿಗಳು ಕ್ರಮ ಕೈಗೊಳ್ಳಲು ಮನವಿ.

– ನೊಂದ ವಾಹನ ಚಾಲಕ, ಮೈಸೂರು.



ಕೆಬಿಜಿಯವರ

ಛೂಮಂತ್ರ... ಛೂಮಂತ್ರ... ಛೂಮಂತ್ರ...

ಸದ್ಗುರು ಶ್ರೀ ಮಧುಸೂದನ ಸಾಯಿ–1

ಭಗವಾನ್ ಶ್ರೀ ಸತ್ಯಸಾಯಿ ಬಾಬಾರ ಅಪರ ಆತ್ಮವೇ?

ಈ ಸನಾತನ ನಾಡು ಭಾರತ, ಮನುಷ್ಯ ನೆಲೆಸಿರುವ ಭೂಮಿಯ ಮೇಲಿನ ಬೇರೆ ಯಾವುದೇ ದೇಶಕ್ಕಿಂತ ವಿಭಿನ್ನ. ಏಕಮಾತ್ರ ಪ್ರವಾದಿ ಇಲ್ಲವೇ ಪವಿತ್ರ ಗ್ರಂಥದಿಂದ ಜನ್ಮ ತಾಳಿದ ಧರ್ಮ ಹೊಂದಿರದಂತಹ ಏಕೈಕ ದೇಶ. ನಮ್ಮ ಸಂಸ್ಕೃತಿಯ ವಿವಿಧತೆ ಅಥವಾ ಜನಾಂಗೀಯ ಬಹುತ್ವವನ್ನು ಪರಿಗಣಿಸದೆ–ಪರಕೀಯರು ಇಲ್ಲಿ ನೆಲೆಸಿರುವ ಜನರನ್ನು ಹಿಂದೂಗಳೆಂದು ಹಾಗೂ ನಾವು ಪಾಲಿಸುವ ಧರ್ಮಕ್ಕೆ ಹಿಂದೂ ಧರ್ಮ ಎಂದು ಕರೆದರು. ಸತ್ಯ ಏನೆಂದರೆ ಇದು **ಸನಾತನ ಧರ್ಮದ ನಾಡು**. ದಯೆ, ಧರ್ಮ, ಸತ್ಯ ನಿಷ್ಠೆಯನ್ನು ಪಾಲಿಸುವ ಜನರಿರುವ ಬೀಡು ಕೂಡ. ಈ ನಾಡಿನ ಆಧ್ಯಾತ್ಮಿಕ ನಡವಳಿಕೆ ಪುರಾತನ ಧರ್ಮ ಗ್ರಂಥಗಳಾದ ವೇದ, ಉಪನಿಷತ್, ಪುರಾಣಗಳು ಮತ್ತು ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತಗಳ ನೆಲೆಗಟ್ಟಿನ ಮೇಲೆ ಆಧಾರಿತವಾಗಿದೆ.

ಇಂತಹ ನಾಡಿನಲ್ಲಿ ಹಿಂದೂವಾಗಿ ಜನ್ಮ ತಾಳಿ, ಕರ್ಮಯೋಗ, ಜ್ಞಾನಯೋಗ, ರಾಜಯೋಗ ಮತ್ತು ಭಕ್ತಿಯೋಗದಲ್ಲಿ ಬಾಳಿ–ಬದುಕಿ, ತಿಳಿದೋ–ತಿಳಿಯದೆಯೋ, ಅವರದೇ ವಿಶಿಷ್ಟ ರೀತಿಯಲ್ಲಿ ವಿಭಿನ್ನ ಮತ್ತು ಅತೀಂದ್ರಿಯರಾದ ಕೆಲವು ಆಧ್ಯಾತ್ಮಿಕ ಪುರುಷರನ್ನು ನಾನು ಭೇಟಿ ಮಾಡಿದ್ದೇನೆ. ಅಲ್ಲದೇ ಬಂದು ಗತಿಸಿ ಹೋದ ಇನ್ನೂ ಹಲವರ ಬಗ್ಗೆ ಓದಿ ತಿಳಿದುಕೊಂಡಿದ್ದೇನೆ.

ಅವರಲ್ಲಿ ಕೆಲವರನ್ನು ಇಲ್ಲಿ ಉಲ್ಲೇಖಿಸಬಹುದು. ಗೀತಜ್ಞಾನ ಯಜ್ಞ ಪ್ರವಚನಗಳಿಗೆ ಹೆಸರುವಾಸಿಯಾದ ಸ್ವಾಮಿ ಚಿನ್ಮಯಾನಂದ, ಜಿಡ್ಡು ಕೃಷ್ಣಮೂರ್ತಿ, ಪುಟ್ಟಪರ್ತಿ ಸತ್ಯಸಾಯಿಬಾಬಾ, ಓಶೋ ರಜನೀಶ್, ಮೈಸೂರಿನ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಸದ್ಗುರು ಜಗ್ಗಿ ವಾಸುದೇವ್ ಮತ್ತು ನಾನು ಇತ್ತೀಚೆಗೆ ಭೇಟಿಯಾದ ಸದ್ಗುರು ಶ್ರೀ ಮಧುಸೂದನ ಸಾಯಿ.

ನಾನು ಭೇಟಿ ಮಾಡಿದವರಲ್ಲಿ ಸದ್ಗುರು ಶ್ರೀ ಮಧುಸೂದನ ಸಾಯಿಯವರು ಎಲ್ಲರಿಗಿಂತ ಕಿರಿಯರು. ಅವರು 26.07.1979ರಲ್ಲಿ ಜನಿಸಿದವರು. ಅವರಿಗೆ ಈಗ 44ರ ಪ್ರಾಯ.



ಸದ್ಗುರು ಶ್ರೀ ಮಧುಸೂದನ ಸಾಯಿ ಅವರೊಂದಿಗೆ ಡಾ.ಕೆ.ಬಿ.ಗಣಪತಿ ಹಾಗೂ ಪ್ರೊ. ಶಶಿಧರ ಪ್ರಸಾದ್

ನವೆಂಬರ್, 2023ರಲ್ಲಿ ನಾನು ಬಹಳ ವಿಶಿಷ್ಟವಾದ ಶೈಕ್ಷಣಿಕ ಸಂಸ್ಥೆವೊಂದಕ್ಕೆ ಭೇಟಿ ನೀಡಿದ್ದೆ. ಅದು ಪಕ್ಕದ ಮಂಡ್ಯ ಜಿಲ್ಲೆ, ಪಾಂಡವಪುರ ಬಳಿಯ ಮಾರದೇವನಹಳ್ಳಿಯಲ್ಲಿ ಒಂದು ಭವ್ಯವಾದ ಕಟ್ಟಡದಲ್ಲಿದೆ. ಈ ಕುರಿತು 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ನ.12, 2023ರಂದು ಒಂದು ಲೇಖನವೂ ಈ ಹಿಂದೆ ಪ್ರಕಟವಾಗಿದೆ. ಈ ಸಂಸ್ಥೆಯ ರೂವಾರಿಗಳೇ ಯುವ ಆಧ್ಯಾತ್ಮಿಕ ಗುರು ಹಾಗೂ ಸಾಮಾಜಿಕ ಮುಖಂಡರಾದ ಈ ಸದ್ಗುರು ಶ್ರೀ ಮಧುಸೂದನ ಸಾಯಿ.

ಇದೇ ತಿಂಗಳು ಶುಕ್ರವಾರ, 22ನೇ ತಾರೀಖು ನಾನು ಅವರನ್ನು ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳಾದಂತಹ ಪ್ರೊ. ಜೆ. ಶಶಿಧರ ಪ್ರಸಾದ್ ಅವರ ಜಯಲಕ್ಷ್ಮೀಪುರಂನ ನಿವಾಸದಲ್ಲಿ ವೈಯಕ್ತಿಕವಾಗಿ ಭೇಟಿ ಮಾಡಿದೆ. ನಾನು ಸಂದರ್ಶನಕ್ಕೆ ಕೊಠಡಿಯಲ್ಲಿ ಕಾಯುತ್ತ ಕುಳಿತಿರುವಾಗ ಸದ್ಗುರುಗಳು ಶುಭ್ರವಾದ ಖಾವಿಬಟ್ಟೆ ತೊಟ್ಟು, ನಮಸ್ಕಾರ ಮಾಡುತ್ತಾ, ಮುಗುಳ್ನಗೆ ಬೀರುತ್ತಾ ದಯಮಾಡಿಸಿದರು. ಬಂದು, ಅವರಿಗಾಗಿ ಮೀಸಲಾಗಿದ್ದ ವಿಶೇಷ ಆಸನದಲ್ಲಿ ಕುಳಿತರು. ಪ್ರೊ. ಶಶಿಧರ ಪ್ರಸಾದ್ ಮತ್ತು ನನ್ನ ಜೊತೆ ಆಗಮಿಸಿದ್ದ ಮೈಸೂರು ಗ್ರಾಹಕ ಪರಿಷತ್ತಿನ ಭಾಮಿ ವಿ. ಶೆಣೈ ಅವರು ಕೂಡ ಅಲ್ಲಿ ಉಪಸ್ಥಿತರಿದ್ದರು. ಈಗ ನನ್ನ ಸರದಿ ಎಂದು ನಾನು ಭಾವಿಸಿದ್ದೆ. ಆದರೆ ಸರ್ಕಾರೇತರ ಸಂಸ್ಥೆಗಳ ಶೈಕ್ಷಣಿಕ ಕಾಳಜಿಗಳಿರುವ ಭಾಮಿ ವಿ. ಶೆಣೈರವರು ಮೊದಲು ಪ್ರಶ್ನೆಗಳ ಸುರಿಮಳೆಗೈದರು. ನಂತರ ಶೆಣೈ ಮತ್ತು ಆಂಗ್ಲ ಭಾಷೆಯಲ್ಲಿ ನಿರರ್ಗಳವಾಗಿ ಮಾತನಾಡುವ ಸದ್ಗುರುಗಳ ಮಾತಿಗೆ ವಿರಾಮ ಹಾಕುವವರೇ ಇಲ್ಲದಾಯಿತು. ಸದ್ಗುರುಗಳನ್ನು ಸಂದರ್ಶನ ಮಾಡುವ ಕಾಲಾವಕಾಶ ಬಹಳ ಕಡಿಮೆ ಉಳಿಯಿತು. ಆದರೆ ನಾನು, ಭಾರತೀಯ ವಿದ್ಯಾಭವನ, ಮೈಸೂರು ಕೇಂದ್ರ ಹಾಗೂ ಅದರ ಶೈಕ್ಷಣಿಕ ಸಂಸ್ಥೆಗಳ ಅಧ್ಯಕ್ಷನಾಗಿ ಕಳೆದ ಹಲವು ದಶಕಗಳಿಂದ ಹಿಂದೂಗಳಿಗೆ ಕೇವಲ ಜಾತ್ಯಾತೀತ ಶಿಕ್ಷಣದ ಫಲವಾಗಿ ನಾವು ಕಳೆದುಕೊಂಡಿರುವುದನ್ನು ಮರಳಿ ಪಡೆಯುವ ನಿಟ್ಟಿನಲ್ಲಿ ಶೈಕ್ಷಣಿಕ ರಂಗದ ಸೇವೆಯ ನಾನಾ ವಿಷಯಗಳನ್ನು ಕುರಿತು ಅರಿಯುವುದು ಬಹಳಷ್ಟಿತ್ತು. ಆದುದರಿಂದ ನಾನು ಅವರಿಬ್ಬರ ಸಂಭಾಷಣೆಯನ್ನು ಆಲಿಸುತ್ತಾ ಕುಳಿತೆ.

ಸದ್ಗುರುಗಳ ಸಹಾಯಕರು ಬಂದು ಹೆಲಿಕಾಪ್ಟರ್ ಪೈಲಟ್ ಆಗಮಿಸಿದ್ದಾನೆ ಎಂದು ಹೇಳಿದಾಗ ನನಗೆ ಬಹಳ ಕಡಿಮೆ ಸಮಯವಿದೆ ಎಂಬುದು ಅರಿವಾಯಿತು. ಆದರೆ ಸದ್ಗುರುಗಳು ಬಹಳ ಶಾಂತಚಿತ್ತರಾಗಿ ಅನುಗ್ರಹಿಸಿದರು. ಅವರು ಮೆದು ಭಾಷಿಗರು ಮತ್ತು ನಿರರ್ಗಳವಾಗಿ ಮಾತನಾಡಬಲ್ಲವರು. ಸ್ಥಿತಪ್ರಜ್ಞರು ಮತ್ತು ಸಮಚಿತ್ತತೆ ಉಳ್ಳವರು. ಒಂದು ಚಿಕ್ಕ ಮುನ್ನುಡಿಯೊಂದಿಗೆ ನಾನು ನನ್ನ ಮೊದಲ ಪ್ರಶ್ನೆ ಕೇಳಿದೆ.

"ಸಾಮಾನ್ಯ ಜನರು, ಆದರೆ ಬಹಳ ಆಳವಾದ ಧಾರ್ಮಿಕ ನಂಬಿಕೆಗಳುಳ್ಳ ನನ್ನ ಹೆಚ್ಚಿನ ಓದುಗರ ಪರವಾಗಿ ನಾನು ನಿಮ್ಮನ್ನು ಕೇಳುತ್ತಿದ್ದೇನೆ. ಜನರಲ್ಲಿ ಒಂದು ಗ್ರಹಿಕೆಯಿದೆ. ಮೊದಲು ಶಿರಡಿ ಸಾಯಿಬಾಬಾ ಅವರಿದ್ದರು. ನಂತರ ಅವರ ಪುನರ್ಜನ್ಮ ಅವತಾರವಾದ ಪುಟ್ಟಪರ್ತಿ ಸಾಯಿಬಾಬಾ ಅವರಿದ್ದರು. ಈಗ ನೀವು ಇದ್ದೀರಿ. ಈ ಗ್ರಹಿಕೆ ಎಷ್ಟರಮಟ್ಟಿಗೆ ಸರಿಯಾಗಿದೆ".

ಸದ್ಗುರು : ನನಗೆ ಶಿರಡಿ ಸಾಯಿಬಾಬಾ ಮತ್ತು ಪುಟ್ಟಪರ್ತಿ ಸಾಯಿಬಾಬಾರು ಹಾಗೂ ಅವರ ಮರುಹುಟ್ಟಿನ ಬಗ್ಗೆ ತಿಳಿದಿಲ್ಲ. ಆದರೆ ನಾನು ಸತ್ಯಸಾಯಿ ಬಾಬಾರಿಂದ ಅನುಗ್ರಹಿಸಲ್ಪಟ್ಟವನು.

ಕೆಬಿಜಿ: ಅದು ಹೇಗೆ ನೆರವೇರಿತು ಎಂದು ತಿಳಿಸಬಹುದೆ?

ಸದ್ಗುರು: ಅವರು ಎಂತಹ ವ್ಯಕ್ತಿಯೆಂದು ನಾನಿಲ್ಲಿ ವಿವರಿಸುತ್ತೇನೆ. ಅವರು ಆಧ್ಯಾತ್ಮಿಕವಾಗಿ ತುಂಬಾ ಸಂಪ್ರದಾಯವಾದಿಗಳಂತೆ ನನಗೆ ತೋರಲಿಲ್ಲ. ಅವರು ವೇಷಭೂಷಣದಲ್ಲಿ, ಮಾತಿನಲ್ಲಿ ಸಾಕಷ್ಟು ಪಾರದರ್ಶಕರಾಗಿದ್ದರು. ಅವರ ಮಾತಿನಲ್ಲಿ ಯಾವುದೇ ಏರು–ಪೇರುಗಳು ಇರಲಿಲ್ಲ. ಆದರೆ ನಿರರ್ಗಳತೆ ಇತ್ತು. ಅವರ ಕಾಂತಿಯುತ ಮುಖಚರ್ಯೆಗೆ ಅವರ ವಯಸ್ಸು ಮತ್ತು ವೇಷಭೂಷಣ ಒಂದು ಆಧ್ಯಾತ್ಮಿಕ ಸೆಳೆವು ನೀಡಿ ಭಕ್ತಾದಿಗಳಿಗೆ ಒಬ್ಬ ಆಕರ್ಷಕ ವ್ಯಕ್ತಿಯ ನಿಲುವು ನೀಡಿತ್ತು.

ಭಾರತದ ಮಧ್ಯಭಾಗದಲ್ಲಿರುವ ಛತ್ತೀಸ್‌ಘಡದಿಂದ ಇಂದಿನ ಕರ್ಮಭೂಮಿಗೆ ಅವರು ನಡೆದು ಬಂದ ದಾರಿಯ ಬಗ್ಗೆ ಪ್ರಶ್ನೆ ಕೇಳಿದ್ದೆ. ಇತರೆ ಆಧ್ಯಾತ್ಮಿಕ ವ್ಯಕ್ತಿಗಳು ಮಾಡುವಂತೆ ಯಾವುದೇ ಕೃತ್ರಿಮತೆಯಿಲ್ಲದೆ ಅವರು, ಸವಿಸ್ತಾರವಾಗಿ ಅವರ ಪ್ರಯಾಣದ ಬಗ್ಗೆ ತಿಳಿಸಿಕೊಟ್ಟರು.

ಸದ್ಗುರು ಶ್ರೀ ಮಧುಸೂದನ ಸಾಯಿಯವರು ಹೇಳಿದ ಮಾತುಗಳನ್ನು ನನ್ನ ನೆನಪಿನಿಂದ ದಾಖಲಿಸಿದ್ದೇನೆ. ಏಕೆಂದರೆ ನಾನು ಅವರ ಮಾತನ್ನು ರೆಕಾರ್ಡ್ ಮಾಡುವುದಾಗಲೀ ಅಥವಾ ಬರೆದುಕೊಳ್ಳುವುದಾಗಲೀ ಮಾಡಿಕೊಂಡಿಲ್ಲ.

ಮಧುಸೂದನ ನಾಯ್ಡುವಾಗಿ ಜನಿಸಿದ ಇವರ ತಂದೆ–ತಾಯಿ ಉದ್ಯೋಗಿಗಳಾಗಿದ್ದು, ಮಧ್ಯಮ ವರ್ಗಕ್ಕೆ ಸೇರಿದವರಾಗಿದ್ದರು. ಛತ್ತೀಸ್‌ಘಡಕ್ಕಿಂತ ಪುಟ್ಟಪರ್ತಿಯ ಸತ್ಯಸಾಯಿ ಸಂಸ್ಥೆ ಮತ್ತು ಅವರ ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿರುವ ಶಿಕ್ಷಣ ಸಂಸ್ಥೆಯಲ್ಲಿ ಕಡಿಮೆ ಖರ್ಚಿನಲ್ಲಿ ಶಿಕ್ಷಣ ದೊರೆಯುತ್ತಿದ್ದರಿಂದ ಅವರು ಅಲ್ಲಿಗೆ ಪ್ರಯಾಣ ಬೆಳೆಸಿದರು. ರಜತ ಪದಕಗಳೊಂದಿಗೆ ಅವರು ರಸಾಯನ ಶಾಸ್ತ್ರದಲ್ಲಿ ಸ್ನಾತಕೋತ್ತರ ಮತ್ತು ಎಂಬಿಎ ಪದವಿಗಳನ್ನು ಗಳಿಸಿದರು. ಅವರಿಗೆ ಪುಟ್ಟಪರ್ತಿಯ ಪ್ರಶಾಂತಿ ನಿಲಯದಲ್ಲಿ ಅವರ ಗುರುಗಳಾದ ಸತ್ಯಸಾಯಿ ಬಾಬಾರವರ ಸೇವೆ ಮಾಡುವ ಹಂಬಲವಿದ್ದರೂ ಬಾಬಾರ ಆಣತಿಯಂತೆ ಆರು ವರ್ಷಗಳ ಕಾಲ ಬೆಂಗಳೂರಿನ ಹೆಚ್‌ಡಿಎಫ್‌ಸಿ ಬ್ಯಾಂಕಿನಲ್ಲಿ ಉದ್ಯೋಗಿಯಾಗಿದ್ದರು.

ಏಪ್ರಿಲ್, 2011ರಲ್ಲಿ ಸತ್ಯಸಾಯಿಬಾಬಾರವರು ಇಹಲೋಕ ತ್ಯಜಿಸಿದ ಮೇಲೆ, ಅವರ ಆತ್ಮದ ಅನುಜ್ಞೆಯಂತೆ 2012ರಿಂದ ಮಧುಸೂದನ ಸಾಯಿ ಅವರು ಯಾವುದೇ ಪ್ರತಿಫಲಾಪೇಕ್ಷೆಯೂ ಇಲ್ಲದೆ ತಮಗೆ ವಹಿಸಲಾದ ಶಿಕ್ಷಣ, ಆರೋಗ್ಯ ಮತ್ತು ಪೋಷಣೆಯ ಕ್ಷೇತ್ರಗಳಲ್ಲಿ ಕಾರ್ಯೋನ್ಮುಖರಾಗಿದ್ದಾರೆ.


(ಮುಂದುವರೆಯುವುದು)

email:
voice@starofmysore.com

***

ಕನ್ನಡವನ್ನು ವಿಶ್ವದೆತ್ತರಕ್ಕೆ ಕೊಂಡೊಯ್ದವರು ಕುವೆಂಪು

ಸಾಹಿತಿ ಬನ್ನೂರು ರಾಜು ಸ್ಮರಣೆ



ಮೈಸೂರು, ಡಿ.30(ಎಸ್‌ಬಿಡಿ)– ರಾಷ್ಟ್ರಕವಿ ಕುವೆಂಪು ಅವರು ಲೇಖನಿ ಮೂಲಕವೇ ಕನ್ನಡವನ್ನು ವಿಶ್ವದೆತ್ತರಕ್ಕೆ ಕೊಂಡೊಯ್ದು ಸಾಹಿತ್ಯ ಲೋಕದ ಮೇರು ಶಿಖರ ಎಂದು ಸಾಹಿತಿ ಬನ್ನೂರು ಕೆ.ರಾಜು ಬಣ್ಣಿಸಿದರು.

ಮೈಸೂರಿನ ಝಾನ್ಸಿರಾಣಿ ಲಕ್ಷ್ಮೀ ಬಾಯಿ(ಜೆಎಲ್‌ಬಿ) ರಸ್ತೆಯಲ್ಲಿರುವ ಹಾರ್ಡ್ವಿಕ್ ಪ್ರೌಢಶಾಲೆಯಲ್ಲಿ ಹಿರಣ್ಮಯಿ ಪ್ರತಿಷ್ಠಾನ ಹಾಗೂ ಕಾವೇರಿ ಬಳಗದ ಸಹಯೋಗದಲ್ಲಿ ವಿಶ್ವಕವಿ ಕುವೆಂಪು ಜಯಂತಿ ಅಂಗವಾಗಿ ಶನಿವಾರ ಏರ್ಪಡಿಸಿದ್ದ 'ವಿಶ್ವಮಾನವ ದಿನಾಚರಣೆ' ಯನ್ನು ಉದ್ಘಾಟಿಸಿ, ಮಾತನಾಡಿದರು.

ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ(ಕುವೆಂಪು) ನವರು ಮೈಸೂರಿನ ಹಾರ್ಡ್ವಿಕ್ ಪ್ರೌಢಶಾಲೆಯ ವಿದ್ಯಾರ್ಥಿಯಾಗಿದ್ದರು. ಆ ಸಂದರ್ಭದಲ್ಲೇ ಅವರೊಳಗಿನ ಕಾವ್ಯ ಪ್ರತಿಭೆ ಅರಳಲಾರಂಭಿಸಿತು. ರಸ ಋಷಿ, ವಿಶ್ವ ಕವಿಯ ಮಹಾ ಕಾವ್ಯ ಭವಿಷ್ಯಕ್ಕೆ ಮುನ್ನುಡಿ ಬರೆದಿದ್ದು ಇದೇ ಶಾಲೆ. ಈ ಹಿನ್ನೆಲೆಯಿಂದಲೂ ಹಾರ್ಡ್ವಿಕ್ ಶಿಕ್ಷಣ ಸಂಸ್ಥೆ ಚಾರಿತ್ರಿಕ ಮಹತ್ವ ಹೊಂದಿದೆ ಎಂದು ತಿಳಿಸಿದರು. ಕನ್ನಡದ ಆದಿಕವಿ ಪಂಪನ 'ಮನುಷ್ಯ ಜಾತಿ ತಾನೊಂದೇ ವಲಂ' ಎಂಬ ಸಂದೇಶವನ್ನು ಕುವೆಂಪು ಅವರು ತಮ್ಮ ಬದುಕು ಹಾಗೂ ಬರಹದ ಧ್ಯೇಯ ಮಾಡಿಕೊಂಡು ಕನ್ನಡ ಕಟ್ಟಿದರು. ಎಲ್ಲಾ ದೇಶ ಮತ್ತು ಮತಗಳಲ್ಲಿರುವ ಜಾತಿ ಪದ್ಧತಿಯನ್ನು ಸಂಪೂರ್ಣವಾಗಿ ವಿನಾಶಗೊಳಿಸಬೇಕು. ಮನುಜ ಮತ, ವಿಶ್ವ ಪಥವಾಗಬೇಕು ಎಂಬ ವಿಶ್ವ ಮಾನವ ಸಂದೇಶ ಸಾರಿದರು. 'ಕನ್ನಡ ಮಂತ್ರ ಕಣಾ, ಶಕ್ತಿ ಕಣಾ...' ಎಂದು ಕನ್ನಡ ಡಿಂಡಿಮ ಬಾರಿಸುತ್ತಾ ತಮ್ಮ ಲೇಖನಿ ಮೂಲಕವೇ ಕನ್ನಡವನ್ನು ವಿಶ್ವದೆತ್ತರಕ್ಕೂ ಕೊಂಡೊಯ್ಯುವ ಮೂಲಕ ಸಾಹಿತ್ಯ ಲೋಕದ ಮೇರು ಶಿಖರವಾದರು. ಜಗದ ಕವಿ, ಯುಗದ ಕವಿಯ ಜನ್ಮದಿನವನ್ನು ನಾಡಿನಾದ್ಯಂತ ವಿಶ್ವ ಮಾನವ ದಿನಾಚರಣೆಯನ್ನಾಗಿ ಆಚರಿಸುತ್ತಿರುವುದು ಸಂತಸದ ಸಂಗತಿ ಎಂದರು.

ಸಾರ್ವಜನಿಕ ಶಿಕ್ಷಣ ಇಲಾಖೆಯ ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಹಾಗೂ ಸಾಹಿತಿ ಡಾ.ಬಿ.ಸಿ.ವಿಜಯಕುಮಾರ್ ಮಾತನಾಡಿ, ನಮ್ಮ ಕನ್ನಡ ಜಾಗತಿಕವಾಗಿ ಗಮನ ಸೆಳೆದಿದೆ ಎಂದರೆ ಕನ್ನಡ ನಾಡಿನ ಮಹಾತ್ಮರಿಬ್ಬರು ಪ್ರಮುಖ ಕಾರಣಕರ್ತರು. ಒಬ್ಬರು ಸಾಹಿತ್ಯ ಲೋಕದ ಮೇರು ಶಿಖರ ರಾಷ್ಟ್ರಕವಿ ಕುವೆಂಪು, ಮತ್ತೊಬ್ಬರು ಚಲನಚಿತ್ರ ಜಗತ್ತಿನ ಮೇರುನಟ ಡಾ.ರಾಜ್‌ಕುಮಾರ್ ಎಂದು ಈ ದಿಗ್ಗಜರ ಕನ್ನಡ ಸೇವೆಯನ್ನು ಸ್ಮರಿಸಿಕೊಂಡರು. ಹಿರಣ್ಮಯಿ ಪ್ರತಿಷ್ಠಾನದ ಅಧ್ಯಕ್ಷ ಎ.ಸಂಗಪ್ಪ ಮಾತನಾಡಿದರು. ಇದೇ ವೇಳೆ ಭಾಷಣ ಸ್ಪರ್ಧೆ ವಿಜೇತರಾದ 10ನೇ ತರಗತಿಯ ಹರ್ಷ(ಪ್ರ), ಬಿಂದುಶ್ರೀ(ದ್ವಿ), ಗೀತ ಗಾಯನ ಸ್ಪರ್ಧೆ ವಿಜೇತರಾದ ಸುರೇಶ್‌ರಾವ್ (ಪ್ರ), ಕುಸುಮಾ(ದ್ವಿ) ಹಾಗೂ 9ನೇ ತರಗತಿಯ ರಕ್ಷಾ(ಪ್ರ) ಹಾಗೂ ಶಿವರಾಜ್(ದ್ವಿ)ಗೆ ಕಲಾವಿದೆ ಹಾಗೂ ಲೇಖಕಿ ಡಾ.ಜಮುನಾ ರಾಣಿ ಮಿರ್ಲೆ ಬಹುಮಾನ ನೀಡಿ, ಪ್ರೋತ್ಸಾಹಿಸಿದರು. ಕವಯಿತ್ರಿ ಮತ್ತು ಗಾಯಕಿ ರೋಹಿಣಿ ಶೇಖರ್, ಕುವೆಂಪು ವಿರಚಿತ ಕನ್ನಡ ಗೀತ ಗಾಯನ ನಡೆಸಿಕೊಟ್ಟರು.

ಕಾರ್ಯಕ್ರಮದಲ್ಲಿ ಮುಕ್ತಕ ಕವಿ ಎಂ. ಮುತ್ತುಸ್ವಾಮಿ, ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ನಿರ್ದೇಶಕ ಚಂದ್ರೇಗೌಡ, ಶಿಕ್ಷಕರಾದ ಜೆ.ಸಬೀನಾ, ಸಿ.ಷಣ್ಮುಖ, ಕೃಷ್ಣ ನಾಯಕ್, ರಮ್ಯಾ, ಪುಷ್ಪಲತಾ, ಅಕ್ಕಮಹಾದೇವಿ ಮತ್ತಿತರರು ಉಪಸ್ಥಿತರಿದ್ದರು.

ನಾರಾಯಣಗೌಡ ವಿರುದ್ಧ ಕಠಿಣ ಕ್ರಮದ ಅಗತ್ಯವಿರಲಿಲ್ಲ

ಕನ್ನಡ ಕ್ರಿಯಾ ಸಮಿತಿ ಪ್ರಧಾನ ಕಾರ್ಯದರ್ಶಿ ಸ.ರ. ಸುದರ್ಶನ ಅಭಿಮತ

ಮೈಸೂರು, ಡಿ. 30– ಕನ್ನಡ ನಾಮ ಫಲಕಗಳಿಗಾಗಿ ಹೋರಾಟ ನಡೆಸಿದ ಕರ್ನಾಟಕ ರಕ್ಷಣಾ ವೇದಿಕೆಯ ಅಧ್ಯಕ್ಷ ನಾರಾಯಣಗೌಡ ಮತ್ತು ಇತರರನ್ನು ಪೊಲೀಸರು ಬಂಧಿಸುವ ಅಗತ್ಯವಿರಲಿಲ್ಲ ಎಂದು ಕನ್ನಡ ಕ್ರಿಯಾ ಸಮಿತಿ ಪ್ರಧಾನ ಕಾರ್ಯದರ್ಶಿ ಸ.ರ. ಸುದರ್ಶನ ತಿಳಿಸಿದ್ದಾರೆ.

ನಾರಾಯಣಗೌಡ ಅವರನ್ನು ಬಂಧಿಸಿ, ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಬಹುದಿತ್ತು. ಬದಲಿಗೆ ಇಲ್ಲಸಲ್ಲದ ಸೆಕ್ಷನ್ ಗಳನ್ನು ವಿಧಿಸಿ ಬಂಧಿಸಿ, ಜೈಲಿಗೆ ಕಳುಹಿಸಿರುವುದು ಪೊಲೀಸರ ಕನ್ನಡ ವಿರೋಧಿ ಧೋರಣೆಗೆ ಸಾಕ್ಷಿಯಾಗಿದೆ ಎಂದಿದ್ದಾರೆ. ಈ ಕೃತ್ಯ ಕನ್ನಡಪರ ಮುಖ್ಯಮಂತ್ರಿ ಎನಿಸಿಕೊಂಡ ಸಿದ್ದರಾಮಯ್ಯನವರ ಕಾಲದಲ್ಲಿ ಆಗಿರುವುದು ವಿಷಾದನೀಯ. ಈಗಲಾದರೂ ನಾಮಫಲಕಗಳಲ್ಲಿ ಕನ್ನಡಕ್ಕೆ ಅಗ್ರಸ್ಥಾನ ಕೊಟ್ಟು ಸರಕಾರ ಶೇಕಡ 60ರಷ್ಟು ಕನ್ನಡ ಬಳಕೆಯನ್ನು ಕಡ್ಡಾಯಗೊಳಿಸಿರುವುದು ಸ್ವಾಗತಾರ್ಹ.

ಕನ್ನಡ ಆಡಳಿತ ಭಾಷೆಯಾಗಿದ್ದರೂ ಅನೇಕ ಅಧಿಕಾರಿಗಳು ನಾಮಫಲಕಗಳಲ್ಲಿ ಕನ್ನಡಕ್ಕೆ ಆದ್ಯತೆ ಕೊಡುತ್ತಿಲ್ಲ. ಕನ್ನಡಕ್ಕೆ ಆದ್ಯತೆ ಕೊಡದ ಸರಕಾರಿ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳುವ ದಿಟ್ಟತನವನ್ನು ಸರಕಾರ ತೋರಿಸಬೇಕು ಎಂದು ಕನ್ನಡ ಕ್ರಿಯಾ ಸಮಿತಿ ಆಗ್ರಹಿಸಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಹೊಸ ವರ್ಷಕ್ಕೆ ಮುನ್ನ ಐಪಿಎಸ್ ಅಧಿಕಾರಿಗಳ ಭಾರೀ ವರ್ಗಾವರ್ಗಿ

ಬೆಂಗಳೂರು, ಡಿ.30– ಹೊಸ ವರ್ಷದ ಹೊಸ್ತಿಲಲ್ಲಿ 37 ಐಪಿಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ, ರಾಜ್ಯ ಸರ್ಕಾರ ಆದೇಶಿಸಿದೆ. ಜೊತೆಗೆ ಮೈಸೂರು ಎಸ್ಪಿ ಸೀಮಾ ಲಾಟ್ಕರ್ ಸೇರಿದಂತೆ 46 ಐಎಎಸ್ ಅಧಿಕಾರಿಗಳಿಗೆ ವೇತನ ಶ್ರೇಣಿಯೊಂದಿಗೆ ಪದೋನ್ನತಿ ನೀಡಲಾಗಿದೆ. ಈ ಮೂಲಕ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಮೇಜರ್ ಸರ್ಜರಿ ಮಾಡಲಾಗಿದೆ.

ಕಮಲ್ ಪಂತ್ ನೇಮಕಾತಿ ವಿಭಾಗದ ಡಿಜಿಪಿ, ಅಲೋಕ್ ಕುಮಾರ್ ರಸ್ತೆ ಸುರಕ್ಷತಾ ವಿಭಾಗದ ವಿಶೇಷ ಆಯುಕ್ತ, ಸೀಮಂತ್ ಕುಮಾರ್ ಸಿಂಗ್ ಬಿಎಂಟಿಎಫ್ ಎಡಿಜಿಪಿ, ಹರಿಶೇಖರನ್ ಹೋಂಗಾರ್ಡ್ಸ್ ಮತ್ತು ಸಿವಿಲ್ ಡಿಫೆನ್ಸ್ ಎಡಿಜಿಪಿ, ನಂಜುಂಡಸ್ವಾಮಿ ಅಗ್ನಿಶಾಮಕ ಮತ್ತು ತುರ್ತು ಸೇವೆ ಎಡಿಜಿಪಿ, ಚಂದ್ರಗುಪ್ತಾ ಬೆಂಗಳೂರು ಸಿಸಿಬಿ ಹೆಚ್ಚುವರಿ ಪೊಲೀಸ್ ಆಯುಕ್ತ, ತ್ಯಾಗರಾಜನ್ ಪೂರ್ವ ವಲಯ ಐಜಿಪಿ, ಅಮಿತ್ ಸಿಂಗ್ ಪಶ್ಚಿಮ ವಲಯ ಐಜಿಪಿ, ರವಿಕುಮಾರ್ ಇಂಟಲಿಜೆನ್ಸ್ ಡಿಐಜಿ, ಶಾಂತನು ಸಿನ್ಹಾ ಪೊಲೀಸ್ ಉಪ ಮಹಾನಿರೀಕ್ಷಕರು, ದಿವ್ಯಾ ವಿ.ಗೋಪಿನಾಥ್ ಪೊಲೀಸ್ ಉಪ ಮಹಾನಿರೀಕ್ಷಕರು ಮತ್ತು ವಿಧಿವಿಜ್ಞಾನ ಪ್ರಯೋಗಾಲಯದ ನಿರ್ದೇಶಕರು, ಸುಧೀರ್ ಕುಮಾರ್ ರೆಡ್ಡಿ ಅಪರಾಧ ತನಿಖಾ ಇಲಾಖೆ ಅರಣ್ಯ ಕೋಶದ ಪೊಲೀಸ್ ಜನರಲ್ ಆಗಿ ವರ್ಗಾವಣೆಗೊಂಡಿದ್ದಾರೆ.

ತಮಿಳುನಾಡಿನಲ್ಲಿ ನಿಯಂತ್ರಣ ತಪ್ಪಿ ಟೀ ಅಂಗಡಿಗೆ ನುಗ್ಗಿದ ಲಾರಿ; 5 ಮಂದಿ ದುರ್ಮರಣ

ತಿರುಚಿ (ತಮಿಳುನಾಡು): ತಮಿಳುನಾಡಿನಲ್ಲಿ ಭೀಕರ ಅಪಘಾತ ಸಂಭವಿಸಿದ್ದು, ವೇಗವಾಗಿ ಬಂದ ಲಾರಿಯೊಂದು ನಿಯಂತ್ರಣ ಕಳೆದುಕೊಂಡು ರಸ್ತೆ ಪಕ್ಕದಲ್ಲಿದ್ದ ಟೀ ಅಂಗಡಿಗೆ ನುಗ್ಗಿದ ಪರಿಣಾಮ ಮಹಿಳೆ ಸೇರಿ 5 ಮಂದಿ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ತಿರುಚಿಯಲ್ಲಿ ಶನಿವಾರ ನಡೆದಿದೆ. ಘಟನೆಯಲ್ಲಿ 19 ಮಂದಿ ಗಾಯಗೊಂಡಿದ್ದು, ಗಾಯಾಳುಗಳನ್ನು ಸಮೀಪದ ಪುದುಕೊಟ್ಟೈ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ.



ತಿರುಚಿ–ರಾಮೇಶ್ವರಂ ಹೆದ್ದಾರಿಯಲ್ಲಿ ನಿಯಂತ್ರಣ ಕಳೆದುಕೊಂಡ ಲಾರಿ ಏಕಾಏಕಿ ಟೀ ಅಂಗಡಿಗೆ ನುಗ್ಗಿದೆ ಎಂದು ವರದಿಯಾಗಿದೆ. ಅಪಘಾತದಲ್ಲಿ ಲಾರಿಯ ಮುಂಭಾಗ ಸಂಪೂರ್ಣವಾಗಿ ನಜ್ಜು–ಗುಜ್ಜಾಗಿದೆ. ಸುದ್ದಿ ತಿಳಿದು ಸ್ಥಳಕ್ಕೆ ಆಗಮಿಸಿದ ಪೊಲೀಸರು ಪರಿಶೀಲನೆ ನಡೆಸಿದ್ದಾರೆ. ಸಿಮೆಂಟ್ ತುಂಬಿದ್ದ ಲಾರಿ ಅರಿಯಲೂರಿನಿಂದ ಶಿವಗಂಗೈಗೆ ತೆರಳುತ್ತಿತ್ತು. ಈ ವೇಳೆ ಚಾಲಕ ನಿದ್ರೆಗೆ ಜಾರಿದ್ದು, ಪರಿಣಾಮ ಚಾಲಕನ ನಿಯಂತ್ರಣ ತಪ್ಪಿ ಮೊದಲಿಗೆ ಎರಡು ವಾಹನಗಳಿಗೆ ಡಿಕ್ಕಿ ಹೊಡೆದು ನಂತರ, ತಿರುಚ್ಚಿ–ರಾಮೇಶ್ವರಂ ಹೆದ್ದಾರಿಯಲ್ಲಿ ಟೀ ಅಂಗಡಿಗೆ ನುಗ್ಗಿದೆ ಎಂದು ತಿಳಿದುಬಂದಿದೆ.

ಲಾರಿ ಡಿಕ್ಕಿ ಹೊಡೆದ ವಾಹನಗಳಲ್ಲಿ ಓಂಶಕ್ತಿ ದೇವಸ್ಥಾನ ಹಾಗೂ ಅಯ್ಯಪ್ಪ ದೇವಸ್ಥಾನಕ್ಕೆ ಹೋಗುತ್ತಿದ್ದ ಭಕ್ತರಿದ್ದರು ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಲಾರಿ ಡಿಕ್ಕಿ ಹೊಡೆದ ಪರಿಣಾಮ ನಾಲ್ವರು ಸ್ಥಳದಲ್ಲೇ ಮೃತಪಟ್ಟಿದ್ದರೆ, ಮತ್ತೊಬ್ಬರು ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಗು ಜನಿಸಿದ ತಕ್ಷಣ ಹೊಕ್ಕುಳಬಳ್ಳಿ ಕತ್ತರಿಸುವುದರಿಂದ ಉಸಿರಾಟ ಸಮಸ್ಯೆ

● 30 ರಿಂದ 120 ಸೆಕೆಂಡ್ ನಂತರವೇ ಕತ್ತರಿಸುವುದು ಸೂಕ್ತ
● ಅಮೆರಿಕಾದ ಮಕ್ಕಳ ತಜ್ಞ ವೈದ್ಯ ಡಾ.ಸತ್ಯನ್ ಲಕ್ಷ್ಮಿನರಸಿಂಹ ಸಲಹೆ

ಮೈಸೂರು, ಡಿ.30(ಎಂಕೆ)– ಮಗು ಹುಟ್ಟಿದ ನಂತರ 30 ರಿಂದ 120 ಸೆಕೆಂಡ್‌ವರೆಗೆ ಕಾದು ಹೊಕ್ಕುಳಬಳ್ಳಿ ಕತ್ತರಿಸುವುದರಿಂದ ನವಜಾತ ಶಿಶುಗಳಲ್ಲಿ ಕಂಡುಬರುತ್ತಿರುವ ಉಸಿರಾಟದ ಸಮಸ್ಯೆಯನ್ನು ನಿಯಂತ್ರಿಸಬಹುದಾಗಿದೆ ಎಂದು ಅಮೆರಿಕಾ ಕ್ಯಾಲಿಫೋರ್ನಿಯಾದ ಯುಸಿ ಡೇವಿಸ್(US DAVIS) ಮಕ್ಕಳ ಆಸ್ಪತ್ರೆಯ ಅಧ್ಯಕ್ಷ ಡಾ.ಸತ್ಯನ್ ಲಕ್ಷ್ಮಿನರಸಿಂಹ ತಿಳಿಸಿದರು.

ಮೈಸೂರಿನ ಸರಸ್ವತಿಪುರಂನಲ್ಲಿರುವ ಸಿಗ್ಮಾ ಆಸ್ಪತ್ರೆಯಲ್ಲಿ ಶನಿವಾರ ಇಂಡಿಯನ್ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್ ಮೈಸೂರು ವಿಭಾಗದ ವತಿಯಿಂದ ಆಯೋಜಿಸಿದ್ದ 'ನವಜಾತ ಶಿಶುಗಳಲ್ಲಿ ಉಸಿರಾಟ ತೊಂದರೆ' ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹೆರಿಗೆ ನಂತರ ಮಗುವಿನಲ್ಲಿ ಸುಮಾರು 80 ಎಂ.ಎಲ್‌ನಷ್ಟು ಹಾಗೂ ಹೊಕ್ಕುಳಬಳ್ಳಿಯಲ್ಲಿ 40 ಎಂ.ಎಲ್‌ನಷ್ಟು ರಕ್ತ ಇರಲಿದೆ. ಹೊಕ್ಕುಳಬಳ್ಳಿಯಲ್ಲಿರುವ ರಕ್ತ ಮಗುವಿನದ್ದಾಗಿದ್ದು, ಆ ರಕ್ತವೂ ಸಂಪೂರ್ಣವಾಗಿ ಮಗುವಿನ ದೇಹ ಸೇರಬೇಕಾದರೆ, 30 ರಿಂದ 120 ಸೆಕೆಂಡ್ ಬೇಕು. ಹೊಕ್ಕುಳಬಳ್ಳಿ ಕಟ್ ಮಾಡುವುದು ಒಳ್ಳೆಯದು ಎಂದರು.

ಹೊಕ್ಕುಳಬಳ್ಳಿಯನ್ನು ಮೊದಲು ಸ್ವಲ್ಪ ಸಮಯ ಕಾದು ಕಟ್ ಮಾಡಲಾಗುತ್ತಿತ್ತು. ಆದರೆ, 1950ರ ನಂತರ ಮಗು ಜನಿಸಿದ ಕೂಡಲೇ ಕಟ್ ಮಾಡುವುದು ಸಾಮಾನ್ಯವಾಯಿತು. ಇದರಿಂದ ನವಜಾತ ಶಿಶುಗಳ ದೇಹಕ್ಕೆ ನ್ಯಾಯಯುತವಾಗಿ ಸೇರಬೇಕಾದ ರಕ್ತ ಸೇರದ ಪರಿಣಾಮ ಮಗುವಿನಲ್ಲಿ ಉಸಿರಾಟ ಸಮಸ್ಯೆ, ಬೆಳವಣಿಗೆ ಸಮಸ್ಯೆಗಳು ಉಂಟಾಗುತ್ತಿದ್ದವು. ಆದ್ದರಿಂದ ಮಗು ಜನಿಸಿದ ನಂತರ ಒಂದೆರಡು ನಿಮಿಷ ಕಾದು ಹೊಕ್ಕುಳಬಳ್ಳಿ ಕತ್ತರಿಸುವುದು ಒಳಿತು ಎಂದು ಸಂಶೋಧನೆಗಳಿಂದ ತಿಳಿದುಬಂದಿದೆ ಎಂದರು.



ಮೈಸೂರಿನ ಸಿಗ್ಮಾ ಆಸ್ಪತ್ರೆಯಲ್ಲಿ ಅಮೆರಿಕಾದ ಮಕ್ಕಳ ತಜ್ಞ ಡಾ.ಸತ್ಯನ್ ಲಕ್ಷ್ಮಿನರಸಿಂಹ ವಿಶೇಷ ಉಪನ್ಯಾಸ ನೀಡಿದರು.

ಮೊದಲೇ ನಿರ್ಧರಿಸಬೇಕು: ತಾಯಿಯು ಮಗುವಿಗೆ ಜನ್ಮ ನೀಡುವ ಮುನ್ನವೇ ವೈದ್ಯರೊಂದಿಗೆ ಚರ್ಚಿಸಿ ಮಾಹಿತಿ ಪಡೆದುಕೊಳ್ಳುವುದರ ಜೊತೆಗೆ ಜನಿಸಿದ ಬಳಿಕ ಒಂದೆರಡು ನಿಮಿಷ ಕಾದು ಮಗುವಿನ ಹೊಕ್ಕುಳಬಳ್ಳಿ ಕಟ್ ಮಾಡುವುದಾಗಿ ನಿರ್ಧಾರ ಮಾಡಿಕೊಳ್ಳಬೇಕು. ಇದರಿಂದ ವೈದ್ಯರು ಹಾಗೂ ತಾಯಿಯಲ್ಲಿ ಉಂಟಾಗುವ ಗೊಂದಲಗಳು ದೂರಾಗಲಿವೆ ಎಂದು ಸಲಹೆ ನೀಡಿದರು.

ನವಜಾತ ಶಿಶುಗಳ ಶ್ವಾಸಕೋಶದಲ್ಲಿ ನೀರು ತುಂಬಿಕೊಳ್ಳುವುದು ಹಾಗೂ ಗರ್ಭದಲ್ಲಿಯೇ ಮಗು ಮಲ ವಿಸರ್ಜನೆ ಮಾಡಿಕೊಳ್ಳುವುದರಿಂದಲೂ ಉಸಿರಾಟದ ಸಮಸ್ಯೆ ಉಂಟಾಗಬಹುದು. ಇಂತಹ ಸಂದರ್ಭದಲ್ಲಿ ಸಾಕಷ್ಟು ಎಚ್ಚರಿಕೆಯಿಂದ ಹೆರಿಗೆ ಮಾಡಿಸಬೇಕಾಗುತ್ತದೆ. ಮಗುವಿನ ಶ್ವಾಸಕೋಶದಲ್ಲಿ ನೀರು ತುಂಬಿಕೊಂಡಿದ್ದರೆ, ಆ ಮಗುವನ್ನು ಅಂಗಾತ ಮಲಗಿಸುವ ಬದಲು ಪ್ರತಿ ಆರು ಗಂಟೆಗೊಮ್ಮೆ ಎಡಕ್ಕೆ ಮತ್ತು ಬಲಕ್ಕೆ ತಿರುಗಿಸಿ ಮಲಗಿಸುವುದರಿಂದ ಶ್ವಾಸಕೋಶದಲ್ಲಿ ನೀರು ಕಡಿಮೆಯಾಗಲಿದೆ. ಆರೋಗ್ಯವಾಗಿರುವ ಮಗುವನ್ನು ಹೆಚ್ಚಾಗಿ ಅಂಗಾತ ಮಲಗಿಸುವುದು ಸೂಕ್ತ ಎಂದು ತಿಳಿಸಿದರು.

ಕೊರೊನಾ ಎಚ್ಚರಿಕೆ: ಕೊರೊನಾ ಸೋಂಕಿತ ಗರ್ಭಿಣಿ ಸ್ತ್ರೀಯರಲ್ಲಿ ಉಸಿರಾಟದ ತೊಂದರೆ ಇದ್ದರೆ ಅಂಗಾತ ಮಲಗುವುದಕ್ಕಿಂತ ಎಡಕ್ಕೆ ಮತ್ತು ಬಲಕ್ಕೆ ತಿರುಗಿ ಮಲಗುವುದರಿಂದ ಅನುಕೂಲವಾಗಲಿದೆ. ಅದರಂತೆ ಸೋಂಕಿತ ಗರ್ಭಿಣಿ ಸ್ತ್ರೀಗೆ ಜನಿಸುವ ಮಗುವನ್ನು ತಪಾಸಣೆ ಮಾಡಿ, ಮಗುವಿನ ಆರೋಗ್ಯದ ಬಗ್ಗೆಯೂ ಗಮನ ಹರಿಸಬೇಕಾಗುತ್ತದೆ. ನವಜಾತ ಶಿಶುಗಳನ್ನು ಅಂಗಾತ ಮಲಗಿಸುವುದು ಒಳ್ಳೆಯದು. ಮಕಾಡೆ ಮಲಗಿಸುವುದರಿಂದ ಮೂರ್ಛೆ ರೋಗ ಬರುವ ಸಾಧ್ಯತೆ ಇರಲಿದೆ. ಆದ್ದರಿಂದ ಮುಂಜಾಗ್ರತೆ ವಹಿಸಬೇಕು ಎಂದರಲ್ಲದೆ, ಗರ್ಭಿಣಿ ಸ್ತ್ರೀಯರು ಉತ್ತಮವಾಗಿ ಆರೋಗ್ಯ ಕಾಪಾಡಿಕೊಳ್ಳುವುದು ಅವಶ್ಯವಾಗಿದೆ. ಪೌಷ್ಟಿಕ ಆಹಾರ ಸೇವನೆ, ವ್ಯಾಯಾಮದ ಅಗತ್ಯವಿರಲಿದೆ. ಸಮಯಕ್ಕೆ ಸರಿಯಾಗಿ ವೈದ್ಯರನ್ನು ಭೇಟಿಯಾಗಿ ತಪಾಸಣೆ ಮಾಡಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ನಿವೃತ್ತ ಡೀನ್ ಪ್ರೊ.ಕೃಷ್ಣಮೂರ್ತಿ, ಮಕ್ಕಳ ತಜ್ಞರಾದ ಡಾ.ಎಸ್.ಎನ್.ಮೋತಿ, ಡಾ.ರಾಜೇಶ್ವರಿ, ಡಾ.ಯು.ಜಿ.ಶೆಣೈ, ಡಾ.ಅಂಜಲಿ ಸಿದ್ದೇಶ್, ಡಾ.ನಂದಿತಾ ಮತ್ತಿತರರಿದ್ದರು.

> ಆಗತಾನೆ ಜನಿಸಿದ ಮಗುವಿಗೆ ಉಸಿರಾಟದ ಸಮಸ್ಯೆ ಹೆಚ್ಚಾಗಿದ್ದರೆ, ಹೊಕ್ಕುಳಬಳ್ಳಿಯನ್ನು ಹಾಲು ಕರೆಯುವಂತೆ ನಾಲ್ಕು ಬಾರಿ ಹಿಂಡುವುದರಿಂದ ಅದರಲ್ಲಿರುವ ರಕ್ತ, ಮಗುವಿನ ದೇಹ ಸೇರುತ್ತದೆ. ಆದರೆ ಈ ರೀತಿ ಮಾಡಬೇಕಾದರೆ ಆ ಮಗು 1.5(ಒಂದೂವರೆ) ಕೆ.ಜಿ ತೂಕಕ್ಕಿಂತ ಹೆಚ್ಚಾಗಿರಬೇಕು. ಅದಕ್ಕಿಂತ ಕಡಿಮೆ ತೂಕದ ಮಗುವಿಗೆ ಹೊಕ್ಕುಳಬಳ್ಳಿ ಹಿಂಡಬಾರದು. ಆಕಸ್ಮಾತ್ ಹಿಂಡಿದರೆ ಮಗುವಿನ ಮೆದುಳಿಗೆ ಸಮಸ್ಯೆಯಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ. ಹಾಗೆಯೇ 7 ತಿಂಗಳಿಗೆ ಜನಿಸುವ ಮಗುವಿಗೆ ಕಾದು ಹೊಕ್ಕುಳಬಳ್ಳಿ ಕಟ್ ಮಾಡಬಹುದೇ ಹೊರತು ಹಿಂಡಬಾರದು.
>
> -ಡಾ.ಸತ್ಯನ್ ಲಕ್ಷ್ಮಿನರಸಿಂಹ, ಅಮೆರಿಕಾ ಕ್ಯಾಲಿಫೋರ್ನಿಯಾದ ಯುಸಿ ಡೇವಿಸ್ ಮಕ್ಕಳ ಆಸ್ಪತ್ರೆಯ ಅಧ್ಯಕ್ಷ

ಸಂಸ್ಕೃತಕ್ಕೆ ವಿಶ್ವ ಮನ್ನಣೆ ಕಲ್ಪಿಸುವ ಪ್ರಯತ್ನ ಸಾಗಿದೆ

● ಸಂಸದ ಪ್ರತಾಪ ಸಿಂಹ ಹೆಮ್ಮೆಯ ನುಡಿ ● ಸುಧರ್ಮಾ ಸಂಸ್ಕೃತ ದಿನದರ್ಶಿನಿ-2024 ಬಿಡುಗಡೆ

ಮೈಸೂರು, ಡಿ.30(ಎಸ್‌ಪಿಎನ್)– ಸಂಸ್ಕೃತದಲ್ಲಿರುವ ಗ್ರಂಥಗಳಿಂದ ತಿಳಿದುಕೊಳ್ಳುವಂತಹ ವಿಷಯಗಳು ಸಾಕಷ್ಟಿವೆ. ಈ ಭಾಷೆಗೆ ಈಗಾಗಲೇ ಜಾಗತಿಕ ಮನ್ನಣೆ ದೊರಕಬೇಕಿತ್ತು ಎಂದು ಸಂಸದ ಪ್ರತಾಪಸಿಂಹ ಅಭಿಪ್ರಾಯಪಟ್ಟರು.

ಮೈಸೂರು ಖಿಲ್ಲೆ ಮೊಹಲ್ಲಾ ಶಂಕರ ಮಠ ರಸ್ತೆಯ ನಟರಾಜ ಮಂದಿರದಲ್ಲಿ ಸುಧರ್ಮಾ ಸಂಸ್ಕೃತ ದಿನದರ್ಶಿನಿ-2024ರ ಬಿಡುಗಡೆ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.



ಈ ಕ್ಷೇತ್ರದ ಬಗ್ಗೆ ನನಗೆ ಸಂಪೂರ್ಣ ಅರಿವಿದೆ. ಹಿರಿಯ ಪತ್ರಕರ್ತರಾದ ವಿಶ್ವೇಶ್ವರ ಭಟ್ಟರ ನೇತೃತ್ವದಲ್ಲಿ ಹಲವು ವರ್ಷಗಳ ಕಾಲ ಕೆಲಸ ಮಾಡಿದ್ದೇನೆ. ಪತ್ರಿಕೋದ್ಯಮದ ಕಷ್ಟ–ನಷ್ಟಗಳ ಹತ್ತಿರದಿಂದ ಅರಿತಿದ್ದೇನೆ. ಸುಧರ್ಮಾ ಸಂಸ್ಕೃತ ಪತ್ರಿಕೆ ವಿಶ್ವದಲ್ಲೇ ಏಕೈಕ ಪತ್ರಿಕೆ. ಈ ಪತ್ರಿಕೆಯನ್ನು ಇಷ್ಟು ವರ್ಷಗಳ ಕಾಲ ಉಳಿಸಿ, ಬೆಳೆಸಿರುವುದು ಮೈಸೂರಿಗರಾದ ನಮಗೆ ಹೆಮ್ಮೆಯ ವಿಷಯ ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು ಹಿಂದೂ ಧರ್ಮದ ಬಗ್ಗೆ ಪೂರ್ಣ ಪ್ರಮಾಣದಲ್ಲಿ ತಿಳಿದುಕೊಳ್ಳುವ ಹಂಬಲದಿಂದ ಸಂಸ್ಕೃತ ಭಾಷೆಯನ್ನು ಪ್ರಸಿದ್ಧ ವಿದ್ವಾಂಸರೊಬ್ಬರಿಂದ ಕಲಿತರು. ಇದರಿಂದ ಅವರು, ಅನೇಕ ವಿಷಯಗಳನ್ನು ತಿಳಿದುಕೊಳ್ಳುವ ಪ್ರಸಂಗವನ್ನು ಎಳೆಎಳೆಯಾಗಿ ಬಿಡಿಸಿಟ್ಟರು.

ಪ್ರಧಾನಿ ಮೋದಿ ಅಧಿಕಾರ ಸ್ವೀಕರಿಸಿದ ಮೇಲೆ ಯೋಗ, ಆಯುರ್ವೇದ ಸೇರಿದಂತೆ ಇತರೆ ದೇಶಿಯ ವಿಷಯಗಳಿಗೆ ಜಾಗತಿಕ ಮನ್ನಣೆ ದೊರಕಿಸಿಕೊಡಲು ಸಾಕಷ್ಟು ಪ್ರಯತ್ನಿಸಿದ್ದಾರೆ. ಅವರ ಪ್ರಯತ್ನದ ಫಲವಾಗಿ ಅಂತರರಾಷ್ಟ್ರೀಯ ಮಟ್ಟದ ಯೋಗ ದಿನಾಚರಣೆಗೆ ವಿಶ್ವಸಂಸ್ಥೆ ಕರೆ ನೀಡಿತು. ಅದೇ ರೀತಿ ಸಂಸ್ಕೃತ ಭಾಷೆಗೆ ಮುಂದಿನ ದಿನಗಳಲ್ಲಿ ಜಾಗತಿಕ ಮನ್ನಣೆ ದೊರಕಿಸಿಕೊಡಲು ಪ್ರಯತ್ನಗಳು ನಡೆಯುತ್ತಿವೆ. ಇದಕ್ಕೆ ನಾವು–ನೀವೆಲ್ಲರೂ ಸಾಥ್ ನೀಡಬೇಕು ಎಂದು ಕರೆ ನೀಡಿದರು.

ಸಂಸ್ಕೃತ ಸೇರಿದಂತೆ ಇತರೆ ಕಲೆಗಳಿಗೆ ರಾಜಾಶ್ರಯ ನೀಡುವಲ್ಲಿ ಚಾಮರಾಜ ಒಡೆಯರ್, ನಾಲ್ವಡಿ ಕೃಷ್ಣರಾಜ ಒಡೆಯರ್, ಜಯಚಾಮರಾಜ ಒಡೆಯರ್ ತಮ್ಮ ತಮ್ಮ ಆಳ್ವಿಕೆಯ ಕಾಲದಲ್ಲಿ ಮನ್ನಣೆ ನೀಡಿದ್ದಾರೆ. ಅವರ ಕೊಡುಗೆಯನ್ನು ಎಷ್ಟು ಹೇಳಿದರೂ ಸಾಲದು. ಅಲ್ಲದೆ, ಮೈಸೂರು ರಾಜಮನೆತನದ ಕೊಡುಗೆಯಿಂದಲೇ ಇಂದಿಗೂ ಪ್ರವಾಸೋದ್ಯಮ ನಗರಿ, ಸಾಂಸ್ಕೃತಿಕ ನಗರಿ ಎಂಬಿತ್ಯಾದಿ ಹೆಸರುಗಳಿಂದ ಜಾಗತಿಕ ಮನ್ನಣೆ ಮೈಸೂರಿಗೆ ದೊರಕಿದೆ ಎಂದರು.

ಸಂಸ್ಕೃತದಲ್ಲಿನ ವೇದ, ಉಪನಿಷತ್ ಸೇರಿದಂತೆ ಇತರೆ ವಿಷಯ ಭಂಡಾರದ ಬಗ್ಗೆ ಎಲ್ಲರೂ ಮೆಚ್ಚುಗೆಯ ಮಾತುಗಳನ್ನಾಡುತ್ತೇವೆ. ಆದರೆ, ಅದನ್ನು ಕಲಿಯುವುದರಲ್ಲಿ ಸ್ವಲ್ಪ ಹಿಂದೇಟು ಹಾಕುತ್ತೇವೆ. ಹಾಗಾಗಿ ಈ ಭಾಷೆ ಜನಸಾಮಾನ್ಯರ ಭಾಷೆಯಾಗದೇ ಪಂಡಿತ–ಪಾಮರರ ಭಾಷೆಯಾಗಿ ಇಂದಿಗೂ ಉಳಿದುಬಿಟ್ಟಿದೆ ಎಂದು ಬೇಸರ ವ್ಯಕ್ತಪಡಿಸಿದರು.

ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ಕಷ್ಟ–ನಷ್ಟಗಳ ನಡುವೆಯೂ ಸಂಸ್ಕೃತದ ಮೇಲಿನ ಪ್ರೀತಿಗಾಗಿ ನಿರಂತರ 50 ವರ್ಷಗಳ ಕಾಲ ಸುಧರ್ಮಾ ಪತ್ರಿಕೆ ಜೊತೆಗೆ ದಿನದರ್ಶಿನಿಯನ್ನು ಹೊರ ತಂದಿರುವುದು ಹೆಮ್ಮೆಯ ವಿಷಯ. ಕರ್ನಾಟಕದಲ್ಲಿ ಪ್ರತಿಯೊಬ್ಬರು ಕನ್ನಡಿಗ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಇವರೆಲ್ಲಾ ಭಾರತೀಯರು ಎಂಬುದು ಅಷ್ಟೇ ಸತ್ಯ ಎಂದರು.

ಸುಧರ್ಮಾ ಪತ್ರಿಕೆ ನಮ್ಮ ದೇಶದ ಏಕೈಕ ಸಂಸ್ಕೃತ ಪತ್ರಿಕೆಯಾಗಿದ್ದು, ಹೆಮ್ಮೆ ಎನ್ನಿಸುತ್ತದೆ. ಈಗಿನ ಪೀಳಿಗೆ ಹೈಬ್ರಿಡ್ ಕಲ್ಚರ್ ಕಡೆ ಮುಖಮಾಡಿದೆ. ಆಧುನಿಕ ಭರಾಟೆ ನಡುವೆಯೂ ಸಂಸ್ಕೃತ ಪತ್ರಿಕೆಯನ್ನು ಹೊರತರುತ್ತಿರುವುದು ಶ್ರೇಷ್ಠ ಕೆಲಸ. ಇಂತಹ ಕೆಲಸಕ್ಕೆ ಮೈಸೂರು ಅರಮನೆಯಿಂದ ಸದಾ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ವೇದಿಕೆಯಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ, ಸುಧರ್ಮಾ ಸಂಸ್ಕೃತ ದಿನಪತ್ರಿಕೆ ಗೌರವ ಸಂಪಾದಕರಾದ ವಿದ್ವಾನ್ ಡಾ.ಎಚ್.ವಿ. ನಾಗರಾಜ ರಾವ್, ವಿದ್ವಾನ್ ಡಾ.ವಿ.ಡಿ. ಹೆಗಡೆ, ವಿದ್ವಾನ್ ಡಾ.ಟಿ.ವಿ.ಸತ್ಯನಾರಾಯಣ ಉದ್ಯಮಿ ಆರ್.ಗುರು, ವಿದ್ವಾನ್ ಡಾ.ಗಣಪತಿ ಆರ್.ಭಟ್ ಉಪಸ್ಥಿತರಿದ್ದರು. ವಿದ್ವಾನ್ ಡಾ.ದೀಪಕ್ ಭಟ್ಟ ಅವರು 'ಸುಂದರಕಾಂಡ' ಕುರಿತು ವಿಶೇಷ ಉಪನ್ಯಾಸ ನೀಡಿದರು.

ಜನಮನ ಆಚಾರ್ಯ ಶ್ರೀ ಚಾಣಕ್ಯ ಪ್ರಶಸ್ತಿ ಪ್ರದಾನ



ಮೈಸೂರು, ಡಿ.30(ಎಂಕೆ)– ಸ್ನೇಹ ಸಿಂಚನ್ ಟ್ರಸ್ಟ್ ವತಿಯಿಂದ ವಿಜ್ಞಾನ ಲೇಖಕ ಎಸ್.ರಾಮಪ್ರಸಾದ್, ಜ್ಯೋತಿಷಿ ಮೈಸೂರು ಕುಮಾರ್ ಅವರಿಗೆ 'ಜನಮನ ಆಚಾರ್ಯ ಶ್ರೀ ಚಾಣಕ್ಯ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ನಮನ ಕಲಾಮಂಟಪದಲ್ಲಿ ಶನಿವಾರ ಆಯೋಜಿಸಿದ್ದ ಪ್ರಶಸ್ತಿ ಪ್ರದಾನ, ಕನ್ನಡ ಗೀತೆಗಳ ಗಾಯನ ಹಾಗೂ ನವರಾತ್ರಿ ಬೊಂಬೆ ಪ್ರದರ್ಶನ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ಶಾಸಕ ಟಿ.ಎಸ್. ಶ್ರೀವತ್ಸ ಪ್ರಶಸ್ತಿ ಪ್ರದಾನ ಮಾಡಿದರು.

ಬಳಿಕ ಮಾತನಾಡಿದ ಅವರು, ಮೈಸೂರು ಎಲ್ಲಾ ಕಲೆಗಳಿಂದ ಕೂಡಿರುವ ಸಾಂಸ್ಕೃತಿಕ ನೆಲೆ ಬೀಡಾಗಿದೆ. ದಸರಾ ಬಂದರೆ ಬೊಂಬೆ ಪ್ರದರ್ಶನ ಇರಲಿದೆ. ಸಾಹಿತಿಗಳ ತವರೂರಾಗಿದೆ. ಸಂಗೀತ ಕ್ಷೇತ್ರವನ್ನು ನೋಡುವುದಾದರೆ ಮೈಸೂರು ಸಂಸ್ಥಾನವೇ ಸಂಗೀತ ಕಲೆಯನ್ನು ಪೋಷಣೆ ಮಾಡಿದೆ. ಚಿತ್ರರಂಗಕ್ಕೂ ಮೈಸೂರಿನ ಕೊಡುಗೆ ಅಪಾರವಾಗಿದೆ. ಯೋಗದಲ್ಲಿ ಮೈಸೂರು ವಿಶ್ವದ ಗಮನ ಸೆಳೆದಿದೆ. ಒಟ್ಟಾರೆ ಮೈಸೂರು ಅಕ್ಷರಶಃ ಸಾಂಸ್ಕೃತಿಕ ನಗರಿಯಾಗಿದೆ ಎಂದು ಹೇಳಿದರು.

ಬಳಿಕ ನವರಾತ್ರಿ ಬೊಂಬೆ ಪ್ರದರ್ಶನದಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಬಳಿಕ ಕಲಾವಿದೆ ಎಂ.ಕಾವ್ಯ ಅವರಿಂದ ಮಾತನಾಡುವ ಗೊಂಬೆ ಪ್ರದರ್ಶನ ನಡೆಯಿತು. ಸಂಸ್ಕೃತ ವಿದ್ವಾಂಸರಾದ ಡಾ.ಕೆ.ಲೀಲಾ ಪ್ರಕಾಶ್, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಹಿರಿಯ ಸಮಾಜ ಸೇವಕ ರಘುರಾಂ ವಾಜಪೇಯಿ, ಅಭಿರುಚಿ ಬಳಗದ ಎನ್.ವಿ. ರಮೇಶ್, ಸ್ನೇಹ ಸಿಂಚನ್ ಟ್ರಸ್ಟ್ ಅಧ್ಯಕ್ಷೆ ಮ.ನ.ಲತಾ ಮೋಹನ್ ಮತ್ತಿತರರಿದ್ದರು.

ಲೋಕಸಭೆಯಲ್ಲಿ ಕಲರ್ ಸ್ಮೋಕ್ ಸ್ಫೋಟ ಪ್ರಕರಣ

ಮನೋರಂಜನ್ ಸೇರಿ 6 ಆರೋಪಿಗಳಿಗೆ ಪಾಲಿಗ್ರಾಫ್ ಪರೀಕ್ಷೆಗೆ ನ್ಯಾಯಾಲಯದ ಅನುಮತಿ ಕೋರಿರುವ ದೆಹಲಿ ಪೊಲೀಸರು

● ಜನವರಿ 2ಕ್ಕೆ ಆದೇಶ ಕಾಯ್ದಿರಿಸಿದ ನ್ಯಾಯಾಧೀಶರು ● ಸುಳಿವು ದೊರೆತರೆ ಪ್ರಕರಣಕ್ಕೆ ಮತ್ತೊಂದು ಟ್ವಿಸ್ಟ್
● ಕೃತ್ಯದ ಹಿಂದಿರುವ ಸಂಘಟನೆ ಬಗ್ಗೆ ಹೇಳದ ಚಾಕಚಕ್ಯತೆ ● ಪೊಲೀಸರ ಟ್ರೀಟ್‌ಮೆಂಟ್‌ಗೂ ಜಗ್ಗದ ಆರೋಪಿಗಳು

ಮೈಸೂರು, ಡಿ.30(ಬಿಎಲ್‌ಯು)– ಲೋಕಸಭೆಯ ಕಲಾಪಕ್ಕೆ ನುಗ್ಗಿ ಕಲರ್ ಸ್ಮೋಕ್ ಸ್ಫೋಟಿಸಿದ ಮೈಸೂರಿನ ಮನೋರಂಜನ್ ಸೇರಿದಂತೆ ಆರು ಜನರ ಪಾಲಿಗ್ರಾಫ್ ಟೆಸ್ಟ್ (ಸುಳ್ಳು ಪತ್ತೆ ಪರೀಕ್ಷೆ)ಗೆ ಒಳಪಡಿಸಲು ದೆಹಲಿ ಪೊಲೀಸರು ನ್ಯಾಯಾಲಯದ ಅನುಮತಿ ಕೋರಿದ್ದಾರೆ.

ಡಿಸೆಂಬರ್ 13ರಂದು ಲೋಕಸಭೆ ಕಲಾಪಕ್ಕೆ ನುಗ್ಗಿದ್ದ ಮನೋರಂಜನ್ ಹಾಗೂ ಸಾಗರ್ ಶರ್ಮಾ ಕಲರ್ ಸ್ಮೋಕ್ ಸ್ಫೋಟಿಸಿ ಇಡೀ ದೇಶವೇ ಬೆಚ್ಚಿ ಬೀಳುವಂತೆ ಮಾಡಿದ್ದರು.

ಈ ಪ್ರಕರಣದಲ್ಲಿ ದೆಹಲಿ ಪೊಲೀಸರ ವಿಶೇಷ ತಂಡ ಈಗಾಗಲೇ ಮನೋರಂಜನ್, ಸಾಗರ್ ಶರ್ಮಾ, ಅಮೋಲ್ ಶಿಂಧೆ ನೀಲಂ ದೇವಿ, ಲಲಿತ್ ಝಾ, ಮಹೇಶ್ ಕುಮಾವತ್ ವಿಚಾರಣೆ ಮಾಡಿದೆ.



ಈ ಪ್ರಕರಣದಲ್ಲಿ ಬೇರೆ ಯಾರು ಭಾಗಿಯಾಗಿದ್ದಾರೆ, ಈ ಕೃತ್ಯದ ಹಿಂದಿರುವ ಸಂಘಟನೆ ಯಾವುದು, ನಿಮಗೆ ಹಣಕಾಸು ನೆರವು ನೀಡಿದವರು ಯಾರು ಎಂಬ ಹಲವು ಪ್ರಶ್ನೆಗಳಿಗೆ ಆರೋಪಿಗಳಿಂದ ಉತ್ತರ ದೊರೆಯುತ್ತಿಲ್ಲ. ಪೊಲೀಸರು ತಮ್ಮದೇ ಶೈಲಿಯಲ್ಲಿ ಆರೋಪಿಗಳ ವಿಚಾರಣೆ ನಡೆಸಿದರು. ಅವರು ಬಾಯಿ ಬಿಡುತ್ತಿಲ್ಲ. ಇದರಿಂದ ದೆಹಲಿ ಪೊಲೀಸರ ವಿಶೇಷ ತಂಡ ಈ ಕೃತ್ಯದ ಹಿಂದಿರುವ ಇತರೆ ಆರೋಪಿಗಳು ಹಾಗೂ ಸಂಘಟನೆ ಪತ್ತೆಗೆ ಸಾಧ್ಯವಾಗುತ್ತಿಲ್ಲ.

ಮನೋರಂಜನ್ ಸೇರಿದಂತೆ ಆರು ಆರೋಪಿಗಳ ಮನೆಯಲ್ಲಿ ಶೋಧ ಕಾರ್ಯ ನಡೆಸಿ ಇಂಚಿಂಚು ಶೋಧಿಸಿದರೂ ಕೃತ್ಯದ ಹಿಂದಿರುವ ಕಾಣದ ಕೈಗಳು ಹಾಗೂ ಸಂಘಟನೆಯ ಬಗ್ಗೆ ಮಾಹಿತಿ ಕಲೆ ಹಾಕಲು ಪೊಲೀಸರಿಗೆ ಸಾಧ್ಯವಾಗುತ್ತಿಲ್ಲ.

ಈ ಹಿನ್ನೆಲೆಯಲ್ಲಿ ಆರು ಆರೋಪಿಗಳಿಂದ ಸತ್ಯ ಬಾಯಿ ಬಿಡಿಸಲು ದೆಹಲಿ ಪೊಲೀಸರ ವಿಶೇಷ ತಂಡ ಈಗ ವೈಜ್ಞಾನಿಕ ವಿಧಾನ ಅನುಸರಿಸುತ್ತಿದೆ. ಪಾಲಿಗ್ರಾಫ್ ಟೆಸ್ಟ್ ಮಾಡಿಸಿ ಸತ್ಯಾಂಶ ತಿಳಿಯಲು ಮುಂದಾಗಿದ್ದಾರೆ.

ಈ ಹಿನ್ನೆಲೆಯಲ್ಲಿ ಆರು ಆರೋಪಿಗಳನ್ನು ಪಾಲಿಗ್ರಾಫ್ ಟೆಸ್ಟ್‌ಗೆ ಒಳಪಡಿಸಲು ಅನುಮತಿ ನೀಡುವಂತೆ ದೆಹಲಿ ಪೊಲೀಸರ ವಿಶೇಷ ತಂಡ ಈಗ ದೆಹಲಿಯ ಪಾಟಿಯಾಲ ಹೌಸ್ ಕೋರ್ಟ್‌ಗೆ ಮನವಿ ಸಲ್ಲಿಸಿದೆ. ಈ ಬಗ್ಗೆ ವಿಚಾರಣೆ ನಡೆಸಿರುವ ನ್ಯಾಯಾಧೀಶರು 2024ರ ಜನವರಿ 2ಕ್ಕೆ ಆದೇಶ ಕಾಯ್ದಿರಿಸಿದ್ದಾರೆ.

ನ್ಯಾಯಾಲಯದಿಂದ ಅನುಮತಿ ದೊರೆತರೆ ಜನವರಿ ಮೊದಲ ವಾರದಲ್ಲಿ ಆರೋಪಿಗಳನ್ನು ಪಾಲಿಗ್ರಾಫ್ ಟೆಸ್ಟ್‌ಗೆ ಒಳಪಡಿಸಲು ದೆಹಲಿ ಪೊಲೀಸರು ತೀರ್ಮಾನ ಮಾಡಿದ್ದಾರೆ. ಈ ಮೂಲಕವಾದರೂ ಕೆಲವು ನಿಗೂಢ ಸತ್ಯಗಳು ಬರುವ ನಿರೀಕ್ಷೆಯಲ್ಲಿದ್ದಾರೆ.

ಪಾಲಿಗ್ರಾಫ್ ಟೆಸ್ಟ್‌ನಲ್ಲಿ ಆರು ಆರೋಪಿಗಳು ಕೆಲವು ಸತ್ಯ ತಿಳಿಸಿದರೆ ಈ ಪ್ರಕರಣ ಮತ್ತೊಂದು ರೀತಿಯ ತಿರುವು ಪಡೆಯಲಿದೆ. ಇದರಿಂದ ಸಂಸತ್ ಭವನದೊಳಗೆ ನುಗ್ಗಿರುವ ಪ್ರಕರಣದಲ್ಲಿ ಭಾಗಿಯಾಗಿರುವ ಇತರರು ಹಾಗೂ ಸಂಘಟನೆ ಕೈವಾಡ ಬಯಲಾಗುವ ಸಾಧ್ಯತೆ ಇದೆ.

ಮೈಸೂರು ಬಿಟ್ಟು ಕದಲದ ದೆಹಲಿ ಪೊಲೀಸ್ ವಿಶೇಷ ತಂಡ

ದೆಹಲಿ ಪೊಲೀಸರ ತಂಡ ಮೈಸೂರಿನಲ್ಲಿ ತನಿಖೆ ಪೂರ್ಣಗೊಳಿಸಿ ದೆಹಲಿಯತ್ತ ಪ್ರಯಾಣ ಬೆಳೆಸಲು ಸಿದ್ಧರಾಗಿ, ಫ್ಲೈಟ್ ಟಿಕೆಟ್ ಕೂಡ ಬುಕ್ ಮಾಡಿದ್ದರು. ಆದರೆ ಕಡೆ ಘಳಿಗೆಯಲ್ಲಿ ದೆಹಲಿಯ ಮೇಲಧಿಕಾರಿಗಳು ನೀಡಿದ ಕೆಲವು ಸುಳಿವುಗಳ ಹಿನ್ನೆಲೆಯಲ್ಲಿ ಪ್ರಯಾಣ ರದ್ದುಗೊಳಿಸಿ ಮೈಸೂರಿನಲ್ಲೇ ವಾಸ್ತವ್ಯ ಹೂಡಿದ್ದಾರೆ.

ಮನೋರಂಜನ್ ಜೊತೆ ಸಂಪರ್ಕ ಹೊಂದಿದ್ದ ಇನ್ನಿಬ್ಬರು ಯುವಕರನ್ನು ಈ ವೇಳೆ ವಿಚಾರಣೆ ಮಾಡಿದ್ದಾರೆ ಎನ್ನಲಾಗಿದೆ. ಮೈಸೂರಿನ ಮನೋರಂಜನ್ ಬಗ್ಗೆ ವಿಚಾರ ಕೆದಕುತ್ತಿದ್ದಂತೆ ಕೆಲವು ಸ್ಫೋಟಕ ಮಾಹಿತಿ ದೊರೆಯುತ್ತಲೇ ಇದೆ.

ಮೈಸೂರಿಗೆ ಬಂದ ಸಂದರ್ಭದಲ್ಲಿ ದೆಹಲಿ ಪೊಲೀಸರು ಸ್ಥಳೀಯ ಪೊಲೀಸರ ನೆರವು ಪಡೆದಿದ್ದರು. ಮೈಸೂರು ತಮಗೆ ಪರಿಚಯ ಇಲ್ಲದ ಕಾರಣ ಮನೋರಂಜನ್ ಸಂಪರ್ಕದಲ್ಲಿದ್ದ ಸ್ಥಳಗಳ ಬಗ್ಗೆ ಮಾಹಿತಿ ಪಡೆಯುತ್ತಿದ್ದರು. ಆದರೆ ಈಗ ಸ್ಥಳೀಯ ಪೊಲೀಸರ ಸಂಪರ್ಕದಲ್ಲಿ ಕೂಡ ಇಲ್ಲ. ಯಾರ ನೆರವು ಕೇಳದೆ ಸ್ವತಂತ್ರವಾಗಿ ತನಿಖೆ ಮಾಡುತ್ತಿದ್ದಾರೆನ್ನಲಾಗಿದೆ.

ಕಲರ್ ಸ್ಮೋಕ್ ಟ್ಯೂಬ್ ಇಡಲು ವಿಶೇಷ ಶೂ ರೂಪಿಸಿಕೊಂಡಿದ್ದರು

ಲೋಕಸಭೆಯ ಕಲಾಪದಲ್ಲಿ ಕಲರ್ ಸ್ಮೋಕ್ ಸ್ಫೋಟಿಸಲು ಯೋಜನೆ ರೂಪಿಸಿ, ಕಲರ್ ಸ್ಮೋಕ್‌ವುಳ್ಳ ಟ್ಯೂಬ್‌ಗಳನ್ನು ಬಚ್ಚಿಟ್ಟುಕೊಳ್ಳಲು ಮನೋರಂಜನ್ ಹಾಗೂ ಸಾಗರ್ ಶರ್ಮಾ ವಿಶೇಷವಾದ ಶೂ ರೂಪಿಸಿಕೊಂಡಿದ್ದರು ಎಂಬ ವಿಚಾರ ತಡವಾಗಿ ಬೆಳಕಿಗೆ ಬಂದಿದೆ.

ಸಾಗರ್ ಶರ್ಮಾ ವಾಸಿಸುತ್ತಿರುವ ಉತ್ತರ ಪ್ರದೇಶದ ಆಲಂಬಾಗ್‌ನ ರಾಮನಗರದಲ್ಲಿ ನುರಿತ ಕಸುಬುದಾರನಿಂದ ಶೂ ಸಿದ್ಧಪಡಿಸಿಕೊಂಡಿದ್ದರು. ಡಬ್ಬಿಯಾಕಾರದ ವಸ್ತು ಇಡಬೇಕಿದ್ದು, ಅದಕ್ಕೆ ಅನುಕೂಲವಾಗುವ ಶೂ ತಯಾರಿಸಿಕೊಡುವಂತೆ ಕೇಳಿದ್ದಾರೆ. ಹೆಚ್ಚಿನ ಹಣ ಕೊಟ್ಟಿದ್ದರಿಂದ ಆತ ವಿಶೇಷ ಸೋಲ್ ಹಾಕಿ ಶೂ ಹೊಲಿದುಕೊಟ್ಟಿದ್ದಾನೆ.

ಒಟ್ಟು ಮೂರು ಜೊತೆ ಇಂತಹ ಶೂಗಳನ್ನು ತಯಾರಿಸಿಕೊಂಡಿದ್ದಾರೆ. ಸಾಗರ್ ಶರ್ಮಾ, ಮನೋರಂಜನ್ ಧರಿಸಿದ ಶೂಗಳಲ್ಲದೆ ಮತ್ತೊಂದು ಜೊತೆ ಶೂ ಸಾಗರ್ ಶರ್ಮಾ ಮನೆಯಲ್ಲಿ ಪತ್ತೆಯಾಗಿದೆ. ಇದರ ಪ್ರಕಾರ ಮೂವರು ಸಂಸತ್ ಭವನ ಪ್ರವೇಶಿಸಲು ಯೋಜನೆ ರೂಪಿಸಿದ್ದರು. ಆದರೆ ಮತ್ತೊಬ್ಬನಿಗೆ ಸಂಸತ್ ಭವನದೊಳಗೆ ಹೋಗಲು ಪಾಸ್ ದೊರೆಯದ ಕಾರಣ ಯೋಜನೆಯಿಂದ ದೂರ ಸರಿದಿದ್ದಾನೆ ಎಂಬ ವಿಚಾರ ಪೊಲೀಸರ ತನಿಖೆಯಿಂದ ಬಯಲಾಗಿದೆ.

ಈ ಪ್ರಕರಣದಲ್ಲಿ ಶೂ ಹೊಲಿದುಕೊಟ್ಟವನನ್ನು ಪೊಲೀಸರು ಪ್ರಮುಖ ಸಾಕ್ಷಿಯಾಗಿ ಪರಿಗಣಿಸಿದ್ದಾರೆ. ಈ ಹಿನ್ನೆಲೆಯಲ್ಲಿ ದೆಹಲಿ ಪೊಲೀಸರ ವಿಶೇಷ ತಂಡ ಆಲಂಬಾಗ್‌ನ ರಾಮನಗರಕ್ಕೆ ಭೇಟಿ ನೀಡಿ ಶೂ ಹೊಲಿದುಕೊಟ್ಟವನಿಗಾಗಿ ಹುಡುಕಾಡುತ್ತಿದ್ದಾರೆ.

ಸಂಸತ್ ಭವನದೊಳಗೆ ನುಗ್ಗಿ ಕಲರ್ ಸ್ಮೋಕ್ ಸ್ಫೋಟಿಸಿದ ಮನೋರಂಜನ್ ಹಾಗೂ ಸಾಗರ್ ಶರ್ಮಾಗೆ ತಾನೇ ಶೂ ಹೊಲಿದುಕೊಟ್ಟವನು ಡಿಸೆಂಬರ್ 13 ರಿಂದ ನಾಪತ್ತೆಯಾಗಿದ್ದಾನೆ.

ಸಾಗರ್ ಶರ್ಮಾ ಮನೆಯಲ್ಲಿ ಕೂಡ ಮನೋರಂಜನ್ ಮನೆಯಲ್ಲಿ ಸಿಕ್ಕಿರುವಂತೆ ಭಗತ್ ಸಿಂಗ್ ಸೇರಿದಂತೆ ಇತರೆ ಕ್ರಾಂತಿಕಾರಿ ವ್ಯಕ್ತಿಗಳ ಪುಸ್ತಕಗಳು ಪೊಲೀಸರಿಗೆ ದೊರೆತಿದೆ. ಸಾಗರ್ ಶರ್ಮಾ ಡೈರಿ ಕೂಡ ಪತ್ತೆಯಾಗಿದ್ದು, ಅದರಿಂದ ಹಲವು ಮಾಹಿತಿಗಳನ್ನು ಕಲೆ ಹಾಕಿದ್ದಾರೆ.

ಆದರೆ ಈ ಪ್ರಕರಣದಲ್ಲಿ ಭಾಗಿಯಾಗಿರುವ ಕಾಣದ ಕೈಗಳು ಹಾಗೂ ಸಂಘಟನೆ ಬಗ್ಗೆ ಮಾತ್ರ ದೆಹಲಿ ಪೊಲೀಸರಿಗೆ ಸುಳಿವು ಸಿಕ್ಕಿಲ್ಲ.

ದಕ್ಷಿಣ ಶಿಕ್ಷಕರ ಕ್ಷೇತ್ರದ ಅಂತಿಮ ಮತದಾರರ ಪಟ್ಟಿ ಪ್ರಕಟ

ಮಂಡ್ಯದಲ್ಲಿ 4860 ಮತದಾರರು: ಡಿಸಿ ಡಾ.ಕುಮಾರ್



ಮಂಡ್ಯ, ಡಿ.30– ಮಂಡ್ಯ ಜಿಲ್ಲೆಗೆ ಸಂಬಂಧಿಸಿದಂತೆ ಕರ್ನಾಟಕ ದಕ್ಷಿಣ ಶಿಕ್ಷಕರ ಕ್ಷೇತ್ರದ ಅಂತಿಮ ಮತದಾರರ ಪಟ್ಟಿ ಪ್ರಕಟಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಕುಮಾರ್ ತಿಳಿಸಿದರು.

ಶನಿವಾರ ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ರಾಜಕೀಯ ಪಕ್ಷಗಳ ಮುಖಂಡರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜಿಲ್ಲೆಯ ಕೆಆರ್.ಪೇಟೆಯಲ್ಲಿ ಪುರುಷರು–296, ಮಹಿಳೆಯರು–131, ಒಟ್ಟು 427, ನಾಗಮಂಗಲದಲ್ಲಿ ಪುರುಷರು–268, ಮಹಿಳೆಯರು–132, ಒಟ್ಟು 400, ಮೇಲುಕೋಟೆಯಲ್ಲಿ ಪುರುಷರು–228, ಮಹಿಳೆಯರು– 167 ಒಟ್ಟು 395, ಮಂಡ್ಯದಲ್ಲಿ ಪುರುಷರು–923, ಮಹಿಳೆಯರು– 846, ಒಟ್ಟು 1769, ಮದ್ದೂರಿನಲ್ಲಿ ಪುರುಷರು–502, ಮಹಿಳೆಯರು– 373, ಒಟ್ಟು 875, ಶ್ರೀರಂಗಪಟ್ಟಣದಲ್ಲಿ ಪುರುಷರು–182, ಮಹಿಳೆಯರು–201, ಒಟ್ಟು 383. ಮಳವಳ್ಳಿಯಲ್ಲಿ ಪುರುಷರು– 420, ಮಹಿಳೆಯರು–191 ಒಟ್ಟು–611. ಒಟ್ಟಾರೆ ಜಿಲ್ಲೆಯಲ್ಲಿ ಪುರುಷರು–2819, ಮಹಿಳೆಯರು–2041 ಒಟ್ಟು 4860 ಮತದಾರರಿದ್ದಾರೆ ಎಂದರು.

ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್. ನಾಗರಾಜ್ ಮಾತನಾಡಿ, ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ 2024ಕ್ಕೆ ಸಂಬಂಧಿಸಿದಂತೆ ಭಾರತ ಚುನಾವಣಾ ಆಯೋಗ ಪರಿಷ್ಕೃತ ವೇಳಾಪಟ್ಟಿ ಹೊರಡಿಸಿದೆ. ಹಕ್ಕು ಮತ್ತು ಆಕ್ಷೇಪಣೆ ಇತ್ಯರ್ಥ ಪಡಿಸುವ ದಿನಾಂಕವನ್ನು ಜ.12ಕ್ಕೆ, ದತ್ತಾಂಶಗಳನ್ನು ಸಂಗ್ರಹಿಸಿ ಮತ್ತು ಪರಿಶೀಲಿಸುವ ದಿನಾಂಕವನ್ನು ಜ.17ಕ್ಕೆ ಹಾಗೂ ಅಂತಿಮ ಮತದಾರರ ಪಟ್ಟಿಯನ್ನು ಜ.22ಕ್ಕೆ ನಿಗದಿಪಡಿಸಲಾಗಿದೆ ಎಂದು ರಾಜಕೀಯ ಪಕ್ಷಗಳ ಮುಖಂಡರಿಗೆ ಮಾಹಿತಿ ನೀಡಿದರು. ಈ ವೇಳೆ ವಿವಿಧ ರಾಜಕೀಯ ಪಕ್ಷಗಳ ಮುಖಂಡರಾದ ಮಂಜುನಾಥ್, ನವೀನ್, ರಮೇಶ್, ದಿನೇಶ್, ಬೊಮ್ಮಯ್ಯ ಸೇರಿದಂತೆ ಇನ್ನಿತರರಿದ್ದರು.

ಮತದಾನ ನೋಂದಣಿಗೆ ಉತ್ಸುಕತೆ ತೋರದ ಶಿಕ್ಷಕರು

ಮಂಡ್ಯ: ಮುಂಬರುವ ಲೋಕಸಭಾ ಚುನಾವಣೆ ಬಳಿಕ ಜೂನ್ ತಿಂಗಳಲ್ಲಿ ನಡೆಯುವ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಗಾಗಿ ಅಭ್ಯರ್ಥಿಗಳಲ್ಲಿರುವ ಉತ್ಸಾಹ ಮತದಾರರಲ್ಲಿ ಕಾಣುತ್ತಿಲ್ಲ. ಏಕೋ ಏನೋ ದಕ್ಷಿಣ ಶಿಕ್ಷಕರ ಕ್ಷೇತ್ರ ವ್ಯಾಪ್ತಿಗೆ ಬರುವ ಶಿಕ್ಷಕರು ಹಾಗೂ ಮತದಾನ ನೋಂದಣಿಗೆ ಈ ಬಾರಿ ಉತ್ಸಾಹ ತೋರಿಲ್ಲ.

ಪದವೀಧರ ಅಥವಾ ಶಿಕ್ಷಕರ ಕ್ಷೇತ್ರದ ಚುನಾವಣೆಗೆ ಮತದಾರ ಈ ಹಿಂದೆ ಚುನಾವಣಾ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿದ್ದರೂ, ಈ ಎರಡೂ ಕ್ಷೇತ್ರದ ಮತದಾನಕ್ಕೆ ಚುನಾವಣೆಗೆ ಸನಿಹ ಇರುವಾಗ ಪ್ರತಿ ಬಾರಿಯೂ ಮತದಾನಕ್ಕಾಗಿ ಹೊಸದಾಗಿಯೇ ಹೆಸರನ್ನು ನೋಂದಾಯಿಸಿಕೊಳ್ಳಬೇಕು. ಆದರೆ ಈ ಬಾರಿ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆ ಜೂನ್‌ನಲ್ಲಿ ನಡೆಯಲಿದ್ದು, ಎರಡೆರಡು ಬಾರಿ ನೋಂದಣಿ ಕಾರ್ಯ ಆರಂಭಿಸಿದ್ದರೂ ಶಿಕ್ಷಕರು ಹಾಗೂ ಉಪನ್ಯಾಸಕರು ನೋಂದಣಿಗೆ ಹಿಂದೇಟು ಹಾಕಿದ್ದು, ಅಂತಿಮವಾಗಿ ಜಿಲ್ಲೆಯಲ್ಲಿ 4860 ಮತದಾರರು ಮತದಾನಕ್ಕೆ ಹೆಸರು ನೋಂದಾಯಿಸಿಕೊಂಡಿದ್ದಾರೆ.

ಮತದಾನದ ಹಕ್ಕು ಕಳೆದುಕೊಂಡ ಅತಿಥಿ ಉಪನ್ಯಾಸಕರು: ಈ ಬಾರಿಯ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಅತಿಥಿ ಉಪನ್ಯಾಸಕರಿಗೆ ಮತದಾನದ ಹಕ್ಕು ನೀಡದಿರುವುದು ಆಕ್ರೋಶಕ್ಕೆ ಕಾರಣವಾಗಿದೆ. ಕಳೆದ ಬಾರಿ ಅತಿಥಿ ಉಪನ್ಯಾಸಕರಿಗೆ ಮತದಾನಕ್ಕೆ ಅವಕಾಶವಿತ್ತು ಆದರೆ ಈ ಬಾರಿ ಅವರಿಗೆ ಮತದಾನಕ್ಕೆ ಅವಕಾಶ ಮಾಡಿಕೊಡದ ಕಾರಣ ಮಂಡ್ಯ ಜಿಲ್ಲೆಯಲ್ಲಿ ಕನಿಷ್ಠ ಒಂದೂವರೆ ಸಾವಿರ ಅತಿಥಿ ಉಪನ್ಯಾಸಕರು ಮತದಾನ ವಂಚಿತರಾಗಿದ್ದಾರೆ.

ಯಾರ್‍ಯಾರು ಮತಚಲಾಯಿಸಬಹುದು: ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಹೊರತುಪಡಿಸಿ ಪ್ರೌಢಶಾಲಾ ಶಿಕ್ಷಕರು, ಪಿಯುಸಿ, ಪದವಿ ಕಾಲೇಜುಗಳ ಖಾಸಗಿ ಹಾಗೂ ಸರ್ಕಾರಿ ಕಾಲೇಜಿನ ಉಪನ್ಯಾಸಕರಿಗೆ ಮತದಾನದ ಅವಕಾಶವಿರುತ್ತದೆ. ಈ ವಿಭಾಗದ ಎಲ್ಲಾ ರೀತಿಯ ಶಿಕ್ಷಕರು ಹಾಗೂ ಉಪನ್ಯಾಸಕರು ಹಕ್ಕು ಚಲಾಯಿಸಬಹುದಾಗಿದೆ.

ಅಖಾಡದಲ್ಲಿ ಕೆಟಿಎಸ್, ಮರಿತಿಬ್ಬೇಗೌಡ, ಈಸಿಎನ್



ಕೆ.ಟಿ.ಶ್ರೀಕಂಠೇಗೌಡ



ಮರಿತಿಬ್ಬೇಗೌಡ



ಈ.ಸಿ.ನಿಂಗರಾಜೇಗೌಡ

ಮಂಡ್ಯ: ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆ 4 ಜಿಲ್ಲೆಗಳ ವ್ಯಾಪ್ತಿಗೆ ಬಂದರೂ, ಈ ಬಾರಿ ಮಂಡ್ಯ ಕೇಂದ್ರಿ ಕೃತವಾಗಿ ಚುನಾವಣೆ ನಡೆಯುವ ಸಾಧ್ಯತೆ ಇದ್ದು, ಪ್ರಮುಖ ಪಕ್ಷಗಳಾದ ಜೆಡಿಎಸ್, ಬಿಜೆಪಿ, ಕಾಂಗ್ರೆಸ್‌ನಿಂದ ಮಂಡ್ಯ ಜಿಲ್ಲೆಯವರೇ ಅಭ್ಯರ್ಥಿಯಾಗಿ ಕಣಕ್ಕಿಳಿಯುವ ಸಾಧ್ಯತೆ ಹೆಚ್ಚಿದೆ.

ಕೆಟಿಎಸ್ ತಯಾರಿ: ಜೆಡಿಎಸ್‌ನಿಂದ ಮಾಜಿ ಎಂಎಲ್‌ಸಿ ಕೆ.ಟಿ.ಶ್ರೀಕಂಠೇಗೌಡ ಅಭ್ಯರ್ಥಿಯಾಗುವುದು ಬಹುತೇಕ ಅಂತಿಮವಾಗಿದ್ದು, ಕೆಟಿಎಸ್ ಈಗಾಗಲೇ ಚುನಾವಣಾ ತಯಾರಿ ಮಾಡಿಕೊಳ್ಳುತ್ತಿದ್ದಾರೆ. ಅವರಿಗೆ ಇತ್ತೀಚೆಗೆ ಉತ್ತಮ ಶಾಸಕ ಪ್ರಶಸ್ತಿ ಬಂದಾಗ ಮೈಸೂರಿನಲ್ಲಿ ನಡೆದ ಅಭಿನಂದನಾ ಸಮಾರಂಭದಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಶ್ರೀಕಂಠೇಗೌಡರು ಬಯಸಿದರೆ ದಕ್ಷಿಣ ಶಿಕ್ಷಕರ ಕ್ಷೇತ್ರದ ಟಿಕೆಟ್ ಕೊಡಲು ಸಿದ್ಧ ಎಂದಿದ್ದರು. ಅದಕ್ಕೆ ಪೂರಕವಾಗಿ ಕೆಟಿಎಸ್ ಚುನಾವಣಾ ತಯಾರಿಯಲ್ಲಿದ್ದಾರೆ.

ಮದ್ದೂರು ತಾಲೂಕಿನ ಕೊಪ್ಪ ಗ್ರಾಮದ ಕೆ.ಟಿ.ಶ್ರೀಕಂಠೇಗೌಡ ಈ ಹಿಂದೆ 2 ಬಾರಿ ದಕ್ಷಿಣ ಪದವೀಧರ ಕ್ಷೇತ್ರದಿಂದ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ಈ ಹಿಂದಿನ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಜೆಡಿಎಸ್ ಟಿಕೆಟ್ ಅನ್ನು ಹೆಚ್.ಕೆ.ರಾಮು ಅವರಿಗೆ ಬಿಟ್ಟುಕೊಟ್ಟಿದ್ದ ಕೆಟಿಎಸ್ ಶಿಕ್ಷಕರ ಕ್ಷೇತ್ರದ ಚುನಾವಣೆಗೆ ಅಣಿಯಾಗುತ್ತಿದ್ದಾರೆ.

ಮರಿತಿಬ್ಬೇಗೌಡ ಕಾಂಗ್ರೆಸ್ ಅಭ್ಯರ್ಥಿ?: ಸದ್ಯ ಜೆಡಿಎಸ್‌ನಿಂದ ದಕ್ಷಿಣ ಶಿಕ್ಷಕರ ಕ್ಷೇತ್ರದ ಪರಿಷತ್ ಸದಸ್ಯರಾಗಿರುವ ಮರಿತಿಬ್ಬೇಗೌಡರಿಗೆ ಕಾಂಗ್ರೆಸ್ ಟಿಕೆಟ್ ಸಿಗುವುದು ಬಹುತೇಕ ನಿಚ್ಚಳವಾಗಿದೆ. ಈಗಾಗಲೇ ಕಾಂಗ್ರೆಸ್ ಜೊತೆಗೆ ಗುರುತಿಸಿಕೊಂಡಿರುವ ಅವರು, ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಕಾಂಗ್ರೆಸ್‌ನ ಮಧು ಮಾದೇಗೌಡ ಪರ ಬಹಿರಂಗವಾಗಿಯೇ ಗುರುತಿಸಿಕೊಂಡಿದ್ದರು. ಅದಾದ ನಂತರ ನಡೆದ ವಿಧಾನಸಭಾ ಚುನಾವಣೆಯಲ್ಲಿ ತನ್ನ ತವರೂರು ಮಳವಳ್ಳಿ ಕ್ಷೇತ್ರದಲ್ಲಿ ನನ್ನ ಬೆಂಬಲ ಕಾಂಗ್ರೆಸ್‌ನ ಪಿ.ಎಂ. ನರೇಂದ್ರಸ್ವಾಮಿಗೆ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದ್ದರು.

ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಸತತ 4 ಬಾರಿ ಪರಿಷತ್‌ಗೆ ಆಯ್ಕೆಯಾಗಿರುವ ಗೌಡರು, 2 ಬಾರಿ ಜೆಡಿಎಸ್ ಹಾಗೂ ತಲಾ ಒಂದು ಬಾರಿ ಕಾಂಗ್ರೆಸ್ ಹಾಗೂ ಪಕ್ಷೇತರವಾಗಿ ಕ್ಷೇತ್ರವನ್ನು ಪ್ರತಿನಿಧಿಸಿದ್ದು, ಈ ಬಾರಿ ಮತ್ತೆ ಕಾಂಗ್ರೆಸ್‌ನಿಂದ ಅದೃಷ್ಟ ಪರೀಕ್ಷೆಗೆ ಇಳಿಯಲಿದ್ದಾರೆ. ಮರಿತಿಬ್ಬೇಗೌಡರು ಮೂಲತಃ ಮಂಡ್ಯ ಜಿಲ್ಲೆ ಮಳವಳ್ಳಿಯವರಾಗಿದ್ದಾರೆ.

ಬಿಜೆಪಿಯಿಂದ ಈ.ಸಿ.ನಿಂಗರಾಜೇಗೌಡ ಓಡಾಟ: ಜೆಡಿಎಸ್–ಬಿಜೆಪಿ ಈ ಬಾರಿ ಮೈತ್ರಿ ಮಾಡಿಕೊಂಡಿರುವ ಹಿನ್ನೆಲೆಯಲ್ಲಿ ಶಿಕ್ಷಕರ ಕ್ಷೇತ್ರಕ್ಕೆ ಮೈತ್ರಿ ಅಭ್ಯರ್ಥಿ ಕಣಕ್ಕಿಳಿಸಬಹುದು. ಬಿಜೆಪಿ ಜೆಡಿಎಸ್ ಅನ್ನು ಬೆಂಬಲಿಸಬಹುದೆಂದು ಹೇಳಲಾಗಿತ್ತಾದರೂ ಇತ್ತೀಚೆಗೆ ಮೈಸೂರಿಗೆ ಶಿಕ್ಷಕರ ಕ್ಷೇತ್ರದ ಚುನಾವಣೆ ತಯಾರಿ ಸಂಬಂಧ ವೀಕ್ಷಕರಾಗಿ ಆಗಮಿಸಿದ್ದ ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಈ ಬಾರಿ ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಅಖಾಡದಲ್ಲಿರಲಿದ್ದು, ಮೈತ್ರಿ ಸಂಸತ್ ಚುನಾವಣೆಗೆ ಮಾತ್ರ ಆಗಿದ್ದು, ಪರಿಷತ್ ಚುನಾವಣೆಗೆ ಆಗಿಲ್ಲ ಎಂದಿದ್ದರು. ಹೀಗಾಗಿ ಮೈಸೂರು ವಿವಿ ಮಾಜಿ ಸಿಂಡಿಕೇಟ್ ಸದಸ್ಯ ಈ.ಸಿ.ನಿಂಗರಾಜೇಗೌಡ ಹೆಸರು ಮುಂಚೂಣಿಯಲ್ಲಿದೆ.

ಮೂಲತಃ ಮಂಡ್ಯ ಜಿಲ್ಲೆಯವರಾದ ಗೌಡರು, ಸ್ವಯಂ ಸೇವಕ ಸಂಘ, ಎಬಿವಿಪಿ, ಅಖಿಲ ಭಾರತ ಸಾಹಿತ್ಯ ಪರಿಷತ್ ಸೇರಿ ಹಲವು ಸಂಘಟನೆಗಳೊಂದಿಗೆ ಕ್ರಿಯಾಶೀಲವಾಗಿ ಕೆಲಸ ಮಾಡಿದ್ದು, ದಕ್ಷಿಣ ಪದವೀಧರ ಹಾಗೂ ಶಿಕ್ಷಕರ ಕ್ಷೇತ್ರದ ಈ ಹಿಂದಿನ ಚುನಾವಣೆಗಳಲ್ಲಿ ಬಿಜೆಪಿ ಪರ ದುಡಿದ ಅನುಭವವಿದೆ. ಇತ್ತೀಚೆಗೆ ನಡೆದ ದಕ್ಷಿಣ ಪದವೀಧರ ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದರೂ ಟಿಕೆಟ್ ಸಿಕ್ಕಿರಲಿಲ್ಲ. ಈ ಬಾರಿಯ ಚುನಾವಣೆಯಲ್ಲಿ ಸಂಘಟನಾತ್ಮಕವಾಗಿ ಓಡಾಡುತ್ತಿದ್ದು, ಟಿಕೆಟ್ ಸಿಗುವ ನಿರೀಕ್ಷೆಯಲ್ಲಿದ್ದು, ಚುನಾವಣೆಗೆ ಸಜ್ಜಾಗುತ್ತಿದ್ದಾರೆ.

ಅರ್ಜಿ ಆಹ್ವಾನ

ಮಂಡ್ಯ: ಅಸಂಘಟಿತ ವಲಯ ವ್ಯಾಪ್ತಿಯಲ್ಲಿ ಬರುವ ದಿನಪತ್ರಿಕೆ ವಿತರಣಾ ಕಾರ್ಮಿಕರಿಗೆ ಅಪಘಾತ ಪರಿಹಾರ ಮತ್ತು ವೈದ್ಯಕೀಯ ಸೌಲಭ್ಯ ಯೋಜನೆ ಪಡೆಯಲು ಕಾರ್ಮಿಕ ಇಲಾಖೆ ವತಿಯಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿದಾರರು 16ರಿಂದ 59 ವರ್ಷದ ವಯೋಮಾನದವರಾಗಿರಬೇಕು. ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು. ಕೇಂದ್ರ ಸರ್ಕಾರದ ಇ–ಶ್ರಮ್ ಪೋರ್ಟಲ್‌ನಲ್ಲಿ News Paper Boy ಎಂಬ ವರ್ಗದಡಿ ನೋಂದಣಿಯಾಗಿರಬೇಕು. ಜೊತೆಗೆ ಆದಾಯ ತೆರಿಗೆ ಪಾವತಿದಾರರಾಗಿರಬಾರದು. ಇಎಸ್‌ಐ ಮತ್ತು ಪಿಎಫ್ ಸೌಲಭ್ಯ ಹೊಂದಿರದ ಅರ್ಹ ಫಲಾನುಭವಿಗಳು ಅರ್ಜಿ ಸಲ್ಲಿಸಬಹುದು.

ಅಪಘಾತ ಪರಿಹಾರ ಸೌಲಭ್ಯ ಯೋಜನೆಯಡಿ ಮರಣ ಪ್ರಕರಣಗಳಿಗೆ 2 ಲಕ್ಷಗಳ ಪರಿಹಾರ ನೀಡಲಾಗುವುದು. ಅಪಘಾತದಿಂದ ಉಂಟಾಗುವ ಸಂಪೂರ್ಣ ಶಾಶ್ವತ ದುರ್ಬಲತೆ ಪರಿಹಾರ 2 ಲಕ್ಷಗಳವರೆಗೆ ಪರಿಹಾರ. ಆಸ್ಪತ್ರೆ ವೆಚ್ಚ ಮರುಪಾವತಿ 1 ಲಕ್ಷಗಳವರೆಗೆ ಸಿಗಲಿದೆ.

ಪತ್ರಿಕಾ ವಿತರಕರು ಇ–ಶ್ರಮ್ ಪೋರ್ಟಲ್‌ನಲ್ಲಿ ಸ್ವಯಂ ಆಗಿ ಅಥವಾ ಹತ್ತಿರದ ಸಾಮಾನ್ಯ ಸೇವಾ ಕೇಂದ್ರಗಳಲ್ಲಿ ನೋಂದಾಯಿಸಿಕೊಳಿ. ಮಾಹಿತಿಗೆ ಸಹಾಯವಾಣಿ 155214 ಸಂಪರ್ಕಿಸಿ.

ಪಾಂಡವಪುರ ಪುರಸಭೆ ಉಪ ಚುನಾವಣೆ ಫಲಿತಾಂಶ ಪ್ರಕಟ

ಎರಡೂ ವಾರ್ಡ್‌ಗಳಲ್ಲೂ ಜೆಡಿಎಸ್ ಅಭ್ಯರ್ಥಿಗಳ ಗೆಲುವು

ಪಾಂಡವಪುರ, ಡಿ.30– ಪಟ್ಟಣದ ಪುರಸಭೆ ಉಪ ಚುನಾವಣೆಯ ಫಲಿತಾಂಶ ಪ್ರಕಟಗೊಂಡಿದ್ದು, 2 ವಾರ್ಡ್‌ಗಳಲ್ಲೂ ಜೆಡಿಎಸ್ ಅಭ್ಯರ್ಥಿಗಳು ಭರ್ಜರಿ ಜಯ ಸಾಧಿಸಿದ್ದಾರೆ. ಆ ಮೂಲಕ ಹಾಲಿ ಶಾಸಕ ದರ್ಶನ್ ಪುಟ್ಟಣ್ಣಯ್ಯಗೆ ತೀವ್ರ ಮುಖಭಂಗವಾಗಿದೆ.

ಪಟ್ಟಣದ 2ನೇ ಹಾಗೂ 9ನೇ ವಾರ್ಡ್‌ಗಳ ಸದಸ್ಯರು ಅಕಾಲಿಕ ಮರಣ ಹೊಂದಿದ ಹಿನ್ನೆಲೆಯಲ್ಲಿ ಎರಡು ಸ್ಥಾನಗಳಿಗೆ ಉಪ ಚುನಾವಣೆ ನಡೆದಿತ್ತು. ಪಟ್ಟಣದ ತಾಲೂಕು ಕಚೇರಿಯಲ್ಲಿ ಶನಿವಾರ ನಡೆದ ಮತ ಎಣಿಕೆಯಲ್ಲಿ 2ನೇ ವಾರ್ಡ್‌ನಿಂದ ಸ್ಪರ್ಧಿಸಿದ್ದ ಜೆಡಿಎಸ್ ಅಭ್ಯರ್ಥಿ ಯಶ್ವಂತ್ ಕುಮಾರ್–380, ರೈತ ಸಂಘದ ಅಭ್ಯರ್ಥಿ ರಾಜೇಂದ್ರ-216, ಬಿಜೆಪಿ ಅಭ್ಯರ್ಥಿ –21 ಹಾಗೂ ಕೆಆರ್‌ಎಸ್ ಪಕ್ಷದ ಅಭ್ಯರ್ಥಿ 1 ಮತ ಪಡೆದರು. ಆ ಮೂಲಕ ಜೆಡಿಎಸ್ ಅಭ್ಯರ್ಥಿ ಯಶ್ವಂತ್ ಕುಮಾರ್ 176 ಮತಗಳ ಅಂತರದಿಂದ ಭರ್ಜರಿ ಗೆಲುವು ಸಾಧಿಸಿದ್ದಾರೆ.

9ನೇ ವಾರ್ಡ್‌ನಿಂದ ಸ್ಪರ್ಧಿಸಿದ್ದ ಜೆಡಿಎಸ್ ಅಭ್ಯರ್ಥಿ ಜ್ಯೋತಿಲಕ್ಷ್ಮಿ 171, ರೈತ ಸಂಘದ ಅಭ್ಯರ್ಥಿ ಎಸ್.ರಾಜು–128,



ಬಿಜೆಪಿ ಅಭ್ಯರ್ಥಿ ಸೋಮಶೇಖರ್–81 ಮತಗಳನ್ನು ಪಡೆದರು. ಈ ಪೈಕಿ ಜ್ಯೋತಿಲಕ್ಷ್ಮಿ 43 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ. ಚುನಾವಣಾ ಫಲಿತಾಂಶ ಹೊರ ಬೀಳುತ್ತಿದ್ದಂತೆಯೇ ಜೆಡಿಎಸ್ ಮುಖಂಡರು ಹಾಗೂ ಕಾರ್ಯಕರ್ತರು ಪಟ್ಟಣದಲ್ಲಿ ಸಂಭ್ರಮಾಚರಣೆ ನಡೆಸಿದರು.

ಮತದಾರರಿಗೆ ಸಿಎಸ್ಪಿ ಕೃತಜ್ಞತೆ: ಉಪ ಚುನಾವಣೆಯಲ್ಲಿ ಜಯಶೀಲರಾದ ಯಶ್ವಂತ್ ಕುಮಾರ್ ಹಾಗೂ ಜ್ಯೋತಿ ಲಕ್ಷ್ಮಿ ಅವರನ್ನು ಅಭಿನಂದಿಸಿ ಮಾತನಾಡಿದ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಪುರಸಭೆಯ ಎರಡೂ ವಾರ್ಡ್‌ಗಳಲ್ಲಿ ಜೆಡಿಎಸ್ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ ಪಟ್ಟಣದ ಜನತೆಗೆ ಕೃತಜ್ಞತೆ ಸಲ್ಲಿಸುತ್ತೇನೆ. ಈ ಎರಡೂ ವಾರ್ಡ್‌ಗಳು ಮತ್ತೆ ಜೆಡಿಎಸ್ ತೆಕ್ಕೆಗೆ ಸೇರ್ಪಡೆಗೊಂಡಿದೆ. ಎಲ್ಲರೂ ಸೇರಿ ಪಟ್ಟಣವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ಕೆಲಸ ಮಾಡುತ್ತೇವೆ ಎಂದರು.

ಸಿ.ಎಸ್.ಪುಟ್ಟರಾಜು ಕೈ ಹಿಡಿದ ಮತದಾರರು: ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸೋತಿದ್ದ ಸಿ.ಎಸ್.ಪುಟ್ಟರಾಜು ಅವರನ್ನು ಪುರಸಭೆ ಚುನಾವಣೆಯಲ್ಲಿ ಮತದಾರರು ಕೈ ಹಿಡಿದಿದ್ದಾರೆ.

ಶಾಸಕರಿಗೆ ಮುಖಭಂಗ: ವಿಧಾನಸಭೆ ಚುನಾವಣೆ ಬಳಿಕ ನಡೆದ ಉಪ ಚುನಾವಣೆಯಲ್ಲಿ ಎರಡು ವಾರ್ಡ್‌ಗಳಲ್ಲೂ

ಮತದಾರರಿಗೆ ಮಾಜಿ ಸಚಿವ ಸಿಎಸ್‌ಪಿ ಕೃತಜ್ಞತೆ

ಜೆಡಿಎಸ್ ಅಭ್ಯರ್ಥಿಗಳು ಗೆಲುವು ಸಾಧಿಸಿ ರೈತ ಸಂಘದ ಅಭ್ಯರ್ಥಿಗಳು ಹೀನಾಯ ಸೋಲುಂಡಿರುವುದು ಕ್ಷೇತ್ರದ ಶಾಸಕ ದರ್ಶನ್ ಪುಟ್ಟಣ್ಣಯ್ಯಗೆ ತೀವ್ರ ಮುಖಭಂಗವಾಗಿದೆ. ಕ್ಷೇತ್ರದ ಶಾಸಕರಿದ್ದರೂ ಸಹ ಒಂದು ವಾರ್ಡ್ ಅನ್ನು ಸಹ ಗೆಲ್ಲಿಸಿಕೊಳ್ಳಲು ಸಾಧ್ಯವಾಗಿಲ್ಲ. ಜೊತೆಗೆ ಚುನಾವಣೆ ನಡೆಯುತ್ತಿದ್ದರೂ ಸಹ ಕ್ಷೇತ್ರದ ಶಾಸಕರು 4ನೇ ಬಾರಿಗೆ ಅಮೆರಿಕ ಪ್ರವಾಸದಲ್ಲಿದ್ದರು. ಕಳೆದ ಚುನಾವಣೆಗೆ ಹೋಲಿಸಿದರೆ ಬಿಜೆಪಿ ಮತಗಳು ಸುಧಾರಣೆ ಕಂಡಿವೆ.

ಈ ಸಂದರ್ಭ ಜೆಡಿಎಸ್ ಅಧ್ಯಕ್ಷ ಎಸ್. ಎ. ಮಲ್ಲೇಶ್, ಟಿಎಪಿಸಿಎಂಎಸ್ ಅಧ್ಯಕ್ಷ ಶ್ರೀನಿವಾಸ್, ಪುರಸಭೆ ಸದಸ್ಯರಾದ ಗಿರೀಶ್, ಸೋಮಶೇಖರ್, ಶಿವಕುಮಾರ್, ಚಂದ್ರು ಅರ್ಚನ, ಶ್ವೇತ, ಮುಖಂಡರಾದ ವೈರಮುಡಿಗೌಡ, ಬಿ.ಎಸ್.ಜಯರಾಮು, ನಟರಾಜು ಸೇರಿದಂತೆ ಹಲವರಿದ್ದರು.

ತಾಲೂಕುವಾರು ಉಸ್ತುವಾರಿ ಅಧಿಕಾರಿಗಳಾಗಿ ಕೆಎಎಸ್ ಅಧಿಕಾರಿಗಳ ನಿಯೋಜನೆ

ಮೈಸೂರು, ಡಿ.30(ಎಸ್‌ಬಿಡಿ)– ಪಂಚ ಗ್ಯಾರಂಟಿ ಯೋಜನೆ ಸೇರಿದಂತೆ ಸಾಮಾಜಿಕ, ಆರ್ಥಿಕ ಮತ್ತು ಭೌತಿಕ ಅಭಿವೃದ್ಧಿ ಕಾರ್ಯಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ತಾಲೂಕುಗಳಿಗೂ ಕೆಎಎಸ್ ಅಧಿಕಾರಿಗಳನ್ನು ಉಸ್ತುವಾರಿ ಅಧಿಕಾರಿಗಳನ್ನಾಗಿ ನೇಮಕ ಮಾಡಿ, ಸರ್ಕಾರ ಆದೇಶಿಸಿದೆ.

ಮೈಸೂರು ಜಿಲ್ಲೆ: ಮೈಸೂರು ತಾಲೂಕಿಗೆ ಜಿಲ್ಲೆಯ ಅಪರ ಜಿಲ್ಲಾಧಿಕಾರಿ ಆರ್.ಲೋಕನಾಥ್, ಹುಣಸೂರಿಗೆ ಮೈಸೂರು ಮಹಾನಗರ ಪಾಲಿಕೆ ವಲಯ ಆಯುಕ್ತೆ ವೈ.ಎನ್.ಚಂದ್ರಮ್ಮ, ನಂಜನಗೂಡಿಗೆ ಕೆಆರ್‌ಐಡಿಎಲ್ ವ್ಯವಸ್ಥಾಪಕ ನಿರ್ದೇಶಕ ಬಸವರಾಜು, ಹೆಚ್.ಡಿ.ಕೋಟೆಗೆ ಕಂದಾಯ ಇಲಾಖೆ ಜಂಟಿ ನಿರ್ದೇಶಕಿ ಆರ್.ಕವಿತಾ ರಾಣಿ, ಪಿರಿಯಾಪಟ್ಟಣಕ್ಕೆ ಸಿಬ್ಬಂದಿ ಆಡಳಿತ ಸುಧಾರಣೆ ಇಲಾಖೆ ಸರ್ಕಾರದ ಅಧೀನ ಕಾರ್ಯದರ್ಶಿ ಪಿ.ಎನ್.ನಾಗಪ್ರಶಾಂತ್, ಸರಗೂರಿಗೆ ಸ್ಥಳ ನಿರೀಕ್ಷಣೆಯಲ್ಲಿದ್ದ ಸಯಿದಾ ಆಯಿಷಾ ಹಾಗೂ ಸಾಲಿಗ್ರಾಮಕ್ಕೆ ಮಂಗಳೂರು ಉಪ ವಿಭಾಗದ ಸಹಾಯಕ ಆಯುಕ್ತ ಎಸ್.ಜೆ.ಹರ್ಷವರ್ಧನ ಅವರನ್ನು ನೇಮಕ ಮಾಡಲಾಗಿದೆ.

ಚಾಮರಾಜನಗರ ಜಿಲ್ಲೆ: ಚಾಮರಾಜನಗರ ತಾಲೂಕಿಗೆ ಅಪರ ಜಿಲ್ಲಾಧಿಕಾರಿ ಗೀತಾ ಹುಡೆದ್, ಗುಂಡ್ಲುಪೇಟೆಗೆ ಕರ್ನಾಟಕ ರಾಜ್ಯ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಕುಲಸಚಿವ ಎಂ.ಆರ್. ರಾಜೇಶ್, ಕೊಳ್ಳೇಗಾಲಕ್ಕೆ ಮೈಸೂರು ಮಹಾನಗರ ಪಾಲಿಕೆ ಕೌನ್ಸಿಲ್ ಕಾರ್ಯದರ್ಶಿ ಆರ್.ರಂಗಸ್ವಾಮಿ, ಯಳಂದೂರಿಗೆ ಕೆಐಎಡಿಬಿ ಮೈಸೂರು ಎಸ್‌ಎಲ್‌ಎಓ ವಿ.ಪ್ರಿಯದರ್ಶಿನಿ, ಹನೂರಿಗೆ ಬಿಡಬ್ಲ್ಯೂಎಸ್‌ಎಸ್‌ಬಿ ಸಿಇಓ ಆರ್.ವೀಣಾ.

ಕೊಡಗು ಜಿಲ್ಲೆ: ಮಡಿಕೇರಿ ತಾಲೂಕಿಗೆ ಜಿಲ್ಲೆಯ ಅಪರ ಜಿಲ್ಲಾಧಿಕಾರಿ ಬಿ.ಎನ್. ವೀಣಾ, ಸೋಮವಾರಪೇಟೆಗೆ ಬಿಎಂಆರ್‌ಡಿಎ ಅಪರ ಆಯುಕ್ತ ಎನ್.ಎಸ್. ಚಿದಾನಂದ್, ಕುಶಾಲನಗರಕ್ಕೆ ಪಿಯು ಮಂಡಳಿ ಜಂಟಿ ನಿರ್ದೇಶಕಿ ಜಿ.ಎನ್. ಶ್ವೇತಾ, ಪೊನ್ನಂಪೇಟೆಗೆ ಕೆಪಿಸಿಎಲ್ ನಿರ್ದೇಶಕ ಸಿ.ನಾಗರಾಜು.

ಮಂಡ್ಯ ಜಿಲ್ಲೆ: ಮಂಡ್ಯ ತಾಲೂಕಿಗೆ ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್. ನಾಗರಾಜ್, ಮದ್ದೂರಿಗೆ ಬಿಬಿಎಂಪಿ ಯಲಹಂಕ ವಲಯದ ಉಪ ಆಯುಕ್ತೆ ಡಾ.ಬಿ.ಕೆ.ಮಮತಾ, ಮಳವಳ್ಳಿಗೆ ತಾಂತ್ರಿಕ ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕ ಕೆ.ಎಂ. ಸುರೇಶ್ ಕುಮಾರ್, ಶ್ರೀರಂಗಪಟ್ಟಣಕ್ಕೆ ಎಸ್‌ಎಲ್‌ಎಓ ಅಧಿಕಾರಿ ಎ.ಎಂ.ಶೈಲಜಾ, ಕೆ.ಆರ್.ಪೇಟೆಗೆ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತೆ ಆರ್.ಐಶ್ವರ್ಯ, ನಾಗಮಂಗಲಕ್ಕೆ ಬೆಂಗಳೂರು ನಗರ ವಿವಿ ಕುಲಸಚಿವ ಟಿ.ಜವರೇಗೌಡ, ಪಾಂಡವಪುರಕ್ಕೆ ಮೈಸೂರು ಆಡಳಿತ ತರಬೇತಿ ಸಂಸ್ಥೆ ಜಂಟಿ ನಿರ್ದೇಶಕಿ ಕೆ.ರೂಪಶ್ರೀ.

ಹಾಸನ ಜಿಲ್ಲೆ: ಹಾಸನ ತಾಲೂಕಿಗೆ ಜಿಲ್ಲೆಯ ಅಪರ ಜಿಲ್ಲಾಧಿಕಾರಿ ಕೆಟಿ. ಶಾಂತಲಾ, ಆಲೂರಿಗೆ ಡಿಯುಡಿಸಿ ಯೋಜನಾ ನಿರ್ದೇಶಕ ಬಿ.ಎ.ಜಗದೀಶ್, ಅರಸೀಕೆರೆಗೆ ರೇಷ್ಮೆ ಇಲಾಖೆ ಜಂಟಿ ನಿರ್ದೇಶಕಿ ಎಸ್.ಕಾತ್ಯಾಯಿನಿದೇವಿ, ಅರಕಲಗೂಡಿಗೆ ಮೈಸೂರು ಮಹಾನಗರ ಪಾಲಿಕೆ ಉಪ ಆಯುಕ್ತ (ಕಂದಾಯ) ಡಾ.ಎಂ.ದಾಸೇಗೌಡ, ಹೊಳೆನರಸೀಪುರಕ್ಕೆ ಬಿಬಿಎಂಪಿ ಯಲಹಂಕ ವಲಯದ ಜಂಟಿ ನಿರ್ದೇಶಕ ಮೊಹಮ್ಮದ್ ನಯೀಮ್ ಮೊಮಿನ್, ಸಕಲೇಶಪುರಕ್ಕೆ ಎನ್‌ಹೆಚ್‌ಎಐ ವಿಶೇಷ ಭೂಸ್ವಾಧೀನ ಅಧಿಕಾರಿಗಳಾದ ಜಿ.ಎನ್. ಮಂಜು ನಾಥ್(ಹಾಸನ), ಬೇಲೂರಿಗೆ ಎನ್.ವಿ.ನಟೇಶ್ (ಅರಸೀಕೆರೆ), ಚನ್ನರಾಯಪಟ್ಟಣಕ್ಕೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ಜಿ.ಟಿ.ದಿನೇಶ್ ಕುಮಾರ್ ಅವರನ್ನು ನೇಮಿಸಲಾಗಿದೆ.


ಇವರು ನಿರ್ವಹಿಸಬೇಕಾದ ಜವಬ್ದಾರಿ ನಿಗದಿ

ಗೃಹಲಕ್ಷ್ಮಿ, ಗೃಹಜ್ಯೋತಿ, ಅನ್ನಭಾಗ್ಯ, ಶಕ್ತಿ ಯೋಜನೆ, ಯುವನಿಧಿ ಪಂಚ ಗ್ಯಾರಂಟಿ ಅನುಷ್ಠಾನದ ಬಗ್ಗೆ ಪರಿಶೀಲನೆ ನಡೆಸುವುದು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ವಿದ್ಯಾರ್ಥಿ ನಿಲಯಗಳಿಗೆ ಹಾಗೂ ವಸತಿ ನಿಲಯಗಳಿಗೆ ಅನಿರೀಕ್ಷಿತ ಭೇಟಿ ನೀಡಿ ಪರಿಶೀಲಿಸಿ, ನ್ಯೂನತೆಗಳನ್ನು ಸರಿಪಡಿಸಲು ಕ್ರಮವಹಿಸುವುದು. ಶಾಲೆ, ಕಾಲೇಜು ಹಾಗೂ ಐಟಿಐಗಳಿಗೆ ಭೇಟಿ ನೀಡಿ ಸಮಸ್ಯೆಗಳನ್ನು ಪರಿಶೀಲಿಸಿ, ಸೂಕ್ತ ಪರಿಹಾರ ಕ್ರಮ ವಹಿಸುವುದು. ಶಾಲಾ ಕಟ್ಟಡ ದುರಸ್ತಿ, ಹೊಸ ಕಟ್ಟಡಗಳ ನಿರ್ಮಾಣ ಇತ್ಯಾದಿ ಕಾಮಗಾರಿಗಳ ಪರಿಶೀಲನೆ ನಡೆಸುವುದು. ಸ್ವಂತ ಕಟ್ಟಡ ಇಲ್ಲದಿರುವ ಅಂಗನವಾಡಿಗಳಿಗೆ ನಿವೇಶನವನ್ನು ಒದಗಿಸುವ ಬಗ್ಗೆ ಪರಿಶೀಲನೆ, ನಿರ್ಮಾಣ ಹಂತದಲ್ಲಿರುವ ಕಟ್ಟಡಗಳ ಕಾಮಗಾರಿ ಪರಿಶೀಲಿಸುವುದು. ತಾಲೂಕಿನಲ್ಲಿರುವ ಅಪೌಷ್ಠಿಕ ಮಕ್ಕಳ ವಿವರ ಪಡೆದು, ನಿರಂತರವಾಗಿ ಸರ್ಕಾರದ ಅಪೌಷ್ಠಿಕತೆ ನಿವಾರಣೆ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ಕ್ರಮವಹಿಸುವುದು. ಗ್ರಾಮೀಣಾಭಿವೃದ್ಧಿ, ನಗರಾಭಿವೃದ್ಧಿ ಇಂಧನ, ಜಲಸಂಪನ್ಮೂಲ, ಲೋಕೋಪಯೋಗಿ, ಕೃಷಿ, ತೋಟಗಾರಿಕೆ ಇಲಾಖೆಗಳಲ್ಲಿನ ಪ್ರಮುಖ ಕಾರ್ಯಕ್ರಮಗಳಾದ ಕುಡಿಯುವ ನೀರು, ರಸ್ತೆಗಳು, ವಿದ್ಯುಚ್ಛಕ್ತಿ, ಮೇವು ಲಭ್ಯತೆ, ಬೀಜ ಮತ್ತು ರಸಗೊಬ್ಬರ ಮಧ್ಯಾಹ್ನದ ಬಿಸಿಯೂಟ, ನರೇಗಾ, ಸಾಮಾಜಿಕ ಭದ್ರತೆಯಡಿ ನೀಡುತ್ತಿರುವ ಪಿಂಚಣಿ ಕಾರ್ಯಕ್ರಮಗಳ ಆರ್ಥಿಕ ಮತ್ತು ಭೌತಿಕ ಪ್ರಗತಿ ಪರಿಶೀಲನೆ ನಡೆಸುವುದು.

ಯುವಕರಿಗೆ ಉದ್ಯೋಗಾಧಾರಿತ ತರಬೇತಿ ಕುರಿತು ಸಮನ್ವಯ ಹಾಗೂ ಸಾಲ ಮಂಜೂರಾತಿಗೆ ಬೇಕಾದ ಅವಶ್ಯ ಸಲಹೆ ನೀಡುವುದು. ಯುವಕ–ಯುವತಿಯರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಯೋಜನೆಗಳಡಿಯಲ್ಲಿ ಅವರ ವೃತ್ತಿ ನೈಪುಣ್ಯತೆ(skill) ಹೆಚ್ಚಿಸಿ ಅವರ ಜೀವನೋಪಾಯವನ್ನು ಸದೃಢಗೊಳಿಸಲು ಕ್ರಮವಹಿಸುವುದು. ಗೃಹ ಮತ್ತು ಸಣ್ಣ ಕೈಗಾರಿಕೆಗಳನ್ನು ಗುರುತಿಸಿ, ಅವರಿಗೆ ಸರ್ಕಾರದ ಸವಲತ್ತುಗಳ ಬಗ್ಗೆ ಅರಿವು ಮೂಡಿಸಿ, ಉದ್ಯೋಗಾವಕಾಶ ಕಲ್ಪಿಸುವ ಬಗ್ಗೆ ಕ್ರಮವಹಿಸುವುದು. ಖಾಸಗಿ ಸಾಮಾಜಿಕ ಜವಾಬ್ದಾರಿ ಯೋಜನೆಯಡಿಯಲ್ಲಿ ವಿವಿಧ ಕಂಪನಿಗಳಿಂದ ಶಾಸನಬದ್ಧವಾದ ಆರ್ಥಿಕ ಸಹಾಯ ಪಡೆದು ಶೈಕ್ಷಣಿಕ, ಆರೋಗ್ಯ, ಸ್ವಚ್ಛತೆ ಹಾಗೂ ನೈಸರ್ಗಿಕ ಕಾರ್ಯಗಳನ್ನು ನಿರ್ವಹಿಸಲು ಕ್ರಮವಹಿಸುವುದು. ಪ್ರತಿ ಗ್ರಾಮ ಪಂಚಾಯತಿವಾರು ಕುಡಿಯುವ ನೀರಿನ ವ್ಯವಸ್ಥೆ, ಓವರ್‌ಹೆಡ್ ಟ್ಯಾಂಕ್‌ಗಳ ಸ್ವಚ್ಛತೆ ಪರಿಶೀಲಿಸಿ ವರದಿ ಸಲ್ಲಿಸುವುದು. ಅತಿವೃಷ್ಟಿ ಮತ್ತು ಅನಾವೃಷ್ಟಿಗಳಂತಹ ಸಂದರ್ಭದಲ್ಲಿ ತಾಲೂಕಿನ ವಿವಿಧ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಪ್ರಕೃತಿ ವಿಕೋಪಕ್ಕೀಡಾದ ಪ್ರದೇಶಗಳಲ್ಲಿ ತುರ್ತು ಕ್ರಮ ವಹಿಸುವುದು. ದೌರ್ಜನ್ಯ ಪ್ರಕರಣಗಳನ್ನು ಪರಿಶೀಲಿಸಿ ಕ್ರಮವಹಿಸಲು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮ ವಹಿಸುವುದು. ತಿಂಗಳಲ್ಲಿ ಕನಿಷ್ಠ ಎರಡು ಬಾರಿ ಭೇಟಿ ನಿಯೋಜಿತ ತಾಲೂಕಿಗೆ ನೀಡಿ, ಇಲಾಖೆಗಳ ಕಾರ್ಯ ಪರಿಶೀಲನೆ, ಇಲಾಖೆಗಳು ಕೈಗೊಂಡಿರುವ ವಿವಿಧ ಯೋಜನೆಗಳಡಿ ಅಭಿವೃದ್ಧಿ ಯೋಜನೆಗಳು ಸ್ಥಳ ಪರಿಶೀಲನೆ ನಡೆಸಿವುದು. ಕ್ರಿಯಾಯೋಜನೆಗಳ ಪರಿಶೀಲನೆ ಮಾಡಿ ಸೂಕ್ತ ಸಲಹೆಗಳನ್ನು ನೀಡುವುದು, ಸರ್ಕಾರದ ಹಿತದೃಷ್ಟಿಗೆ ಧಕ್ಕೆಯಾಗದಂತೆ ನೂತನ ಉಪಕ್ರಮಗಳನ್ನು ತೆಗೆದುಕೊಳ್ಳುವುದು. ತಾವು ನಿರ್ವಹಿಸಿದ ಕಾರ್ಯ ವರದಿಯನ್ನು ಸರ್ಕಾರಕ್ಕೆ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರಿಗೆ ಹಾಗೂ ಜಿಲ್ಲಾಧಿಕಾರಿಯವರಿಗೆ ಸಲ್ಲಿಸಬೇಕು ಎಂದು ಸರ್ಕಾರ ನಿರ್ದೇಶನ ನೀಡಿದೆ.

ಪುರಾಣ ಪುಣ್ಯಕಥೆಗಳಲ್ಲೇ ಪರಿಸರ ಸಂರಕ್ಷಣೆ ಉಲ್ಲೇಖವಿದೆ

ಬೆಂಗಳೂರು ಶ್ರೀ ವಿಶ್ವೇಶತೀರ್ಥ ಸಂಶೋಧನಾ ಪ್ರತಿಷ್ಠಾನದ ಗೌರವ ನಿರ್ದೇಶಕ ಡಾ.ಆನಂದತೀರ್ಥ ವಿ.ನಾಗಸಂಪಿಗೆ ಉಪನ್ಯಾಸ



ಮೈಸೂರು, ಡಿ.30(ಎಸ್‌ಪಿಎನ್)– ಪರಿಸರ ಉಳಿಸುವ ಸಂಬಂಧ ಅನೇಕ ಉಲ್ಲೇಖಗಳು ವೇದ, ಉಪನಿಷತ್ ಹಾಗೂ ಸಂಸ್ಕೃತದ ಇತರೆ ಗ್ರಂಥಗಳಲ್ಲಿ ಅಡಕವಾಗಿದೆ ಎಂದು ಬೆಂಗಳೂರು ಶ್ರೀ ವಿಶ್ವೇಶತೀರ್ಥ ಸಂಶೋಧನಾ ಪ್ರತಿಷ್ಠಾನದ ಗೌರವ ನಿರ್ದೇಶಕ ಡಾ.ಆನಂದತೀರ್ಥ ವಿ.ನಾಗಸಂಪಿಗೆ ತಿಳಿಸಿದರು.

ಮೈಸೂರು ವಿವಿ ಮಾನಸಗಂಗೋತ್ರಿ ಆವರಣದ ವಿಜ್ಞಾನ ಭವನದಲ್ಲಿ ಪ್ರಾಚ್ಯ ವಿದ್ಯಾ ಸಂಶೋಧನಾಲಯ, ಕೇಂದ್ರದ ಸರ್ಕಾರದ ಇಂದಿರಾಗಾಂಧಿ ರಾಷ್ಟ್ರೀಯ ಕಲಾಕೇಂದ್ರ ಸಹಯೋಗದೊಂದಿಗೆ ನಡೆದ ವಿಚಾರ ಸಂಕಿರಣದಲ್ಲಿ 'ಪುರಾಣಗಳಲ್ಲಿ ಪ್ರಕೃತಿಯ ಮಹತ್ವ' ವಿಷಯ ಕುರಿತು ಮಾತನಾಡಿದರು.

ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಸಲ್ಡಾನ ಅವರು ಮಾತನಾಡಿ, ಗಾಳಿ, ನೀರು, ಶಬ್ದ ಮಾಲಿನ್ಯಗಳನ್ನು ತಡೆಗಟ್ಟಲು ಸರ್ಕಾರ, ಜನಸಾಮಾನ್ಯರು ಮುಂದಾಗಬೇಕು. ಇಲ್ಲದಿದ್ದರೆ, ಮುಂದಿನ ಪೀಳಿಗೆ, ಈ ಮಾಲಿನ್ಯ ನಡುವೆ ಜೀವನ ನಡೆಸುವುದು ಕಷ್ಟಕರ. ಕೊರೊನಾ ಸಂದರ್ಭದಲ್ಲಿ ಜನ ಸಂದಣಿ ಕಡಿಮೆ ಇದ್ದ ಕಾರಣ ಗಾಳಿ, ನೀರು, ಶಬ್ದ ಮಾಲಿನ್ಯ ಕಡಿಮೆಯಾಗಿತ್ತು. ತದನಂತರ ಜನ ಸಂದಣಿ ಹೆಚ್ಚಾಗಿ ಗಂಗಾನದಿ ಸೇರಿದಂತೆ ಎಲ್ಲಾ ಪ್ರದೇಶಗಳಲ್ಲಿ ಮಾಲಿನ್ಯ ಹೆಚ್ಚಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರಸ್ತುತ ಆಧುನಿಕತೆಯ ಭರಾಟೆ ಮನುಷ್ಯನ ಸ್ವಾರ್ಥದಿಂದಾಗಿ ಅವಿಭಕ್ತ ಕುಟುಂಬಗಳು ಚಿಕ್ಕಚಿಕ್ಕ ಕುಟುಂಬಗಳಾಗಿ ಪರಿವರ್ತಿತವಾಗಿವೆ. ಈ ಕುಟುಂಬಗಳಲ್ಲೂ ಸಣ್ಣಸಣ್ಣ ವಿಷಯದ ಜಗಳಕ್ಕೆ ವಿಚ್ಛೇದನ ತೆಗೆದುಕೊಳ್ಳುವ ಹಂತಕ್ಕೆ ಬಂದಿವೆ. ನಗರೀಕರಣಕ್ಕಾಗಿ ದಿನೇದಿನೆ ಮರಗಳ ಹನನ ಹೆಚ್ಚಾಗಿದೆ. ಇದರಿಂದ ಪರಿಸರ ಮಾಲಿನ್ಯ ಹೆಚ್ಚಾಗಲು ಕಾರಣವಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಈಗ ವಿದ್ಯಾವಂತರು ಹಣದ ಹಿಂದೆ ಓಡುತ್ತಿದ್ದಾರೆ. ಹಾಗಾಗಿ ಕುಟುಂಬ ಬೆಳವಣಿಗೆಯಲ್ಲೂ ಹಿನ್ನೆಡೆಯಾಗುತ್ತಿದೆ. ಇದರಿಂದ ಹಿರಿಯರು ಆತಂಕಗೊಂಡು ಮಕ್ಕಳಿಲ್ಲದಿದ್ದರೆ, ನಿಮ್ಮ ಮುಪ್ಪಿನ ಸಂದರ್ಭದಲ್ಲಿ ಸದ್ಗತಿ ಯಾರು ದೊರಕಿಸಿಕೊಡುತ್ತಾರೆ ಎಂದು ಪ್ರಶ್ನಿಸುತ್ತಿದ್ದಾರೆ. ಮಕ್ಕಳಿಲ್ಲದ ನೋವು ಅನೇಕ ದಂಪತಿಗಳ ಕಾಡುತ್ತಿದೆ. ಮಕ್ಕಳಿಲ್ಲದ ದಂಪತಿ ನೊಂದುಕೊಳ್ಳದೆ, ಮರಗಳನ್ನು ಬೆಳೆಸಿ, ಪ್ರಕೃತಿ ಉಳಿವಿಗೆ ನಿಮ್ಮ ಕೈಲಾದ ಸೇವೆ ಮಾಡಿದರೆ, ಈ ಕಾರ್ಯ ನಿಮ್ಮ ಸಾವಿನ ಸಂದರ್ಭದಲ್ಲಿ ನೆರವಿಗೆ ಬರುತ್ತದೆ ಎಂದು ತಿಳಿಸಿದರು.

ಎಲ್ಲರೂ ಸನ್ಯಾಸಿಗಳಾಗಿ, ಮಹಾಂತರಾಗಿ ಎಂದು ಸಂದೇಶ ನೀಡುವುದಿಲ್ಲ. ಬದಲಾಗಿ ಜೀವನದಲ್ಲಿ ಎಲ್ಲರೂ ಪರೋಪಕಾರಿ ಗುಣಗಳನ್ನು ಬೆಳೆಸಿಕೊಳ್ಳಿ ಎಂದು ಸಂದೇಶ ನೀಡಲು ಬಯಸುತ್ತೇನೆ ಎಂದು ಉಡುಪಿಯ ಸಾರ್ವಜನಿಕ ಸಭೆಯಲ್ಲಿ ಪೇಜಾವರ ವಿಶ್ವೇಶ ತೀರ್ಥ ಶ್ರೀಗಳು, ನೀಡಿದ್ದ ಉಪದೇಶವನ್ನು ಉಲ್ಲೇಖಿಸಿದರು. ಸ್ಕಂದ ಪುರಾಣ, ವಿಷ್ಣು ಪುರಾಣ, ಶಿವಪುರಾಣಗಳಲ್ಲಿ ಪ್ರಕೃತಿ ಉಳಿಸುವ ಸಂಬಂಧ ಅನೇಕ ವಿಚಾರಗಳು ಅಡಕವಾಗಿವೆ. ಶುದ್ಧ ಗಾಳಿ ಸೇವನೆಗೆ ಹೆಚ್ಚು ಹೆಚ್ಚು ಅರಳಿ ಮರ ನೆಡಬೇಕು. ಔಷಧಿ ಗುಣಗಳುಳ್ಳ ಮರಗಳನ್ನು ನೆಟ್ಟರೆ, ಪುನಃ ಆ ಮರಗಳು ಸಮಾಜಕ್ಕೆ ಬೇರೆಬೇರೆ ರೂಪದಲ್ಲಿ ಸಹಾಯಕ್ಕೆ ಬರುತ್ತವೆ ಎಂದು ಸಂಸ್ಕೃತ ಶ್ಲೋಕಗಳನ್ನು ಉಲ್ಲೇಖಿಸಿ ಪ್ರಕೃತಿ ಉಳಿಸುವ ಅಂಶಗಳನ್ನು ತಿಳಿಸಿದರು.

ಬೇರೆಬೇರೆ ಕ್ಷೇತ್ರಗಳಲ್ಲಿ ದೇಶ ಪ್ರಗತಿ ಸಾಧಿಸಬೇಕಾದರೆ, ಯುವ ಪೀಳಿಗೆ ಕೊಡುಗೆ ಅಪಾರ. ಮುಂದಿನ ಪೀಳಿಗೆ ಬೆಳವಣಿಗೆಗೆ ಈ ಹಂತದಲ್ಲಿ ಹೆಣ್ಣಿನ ಪಾತ್ರ ಪ್ರಮುಖವಾಗಿದೆ. ಪ್ರತಿಯೊಬ್ಬರು ಹೆಣ್ಣು ಮಗುವಿಗೆ ಜನ್ಮ ನೀಡಿ, ಬೇರೆಯವರ ಮನೆ ಬೆಳಗಲು ಕನ್ಯಾ ದಾನ ಮಾಡಬೇಕು. ಇದೂ ಕೂಡ ಸೇವಾ ಕ್ಷೇತ್ರದಲ್ಲಿ ಶ್ರೇಷ್ಠ ಕೆಲಸ ಎಂದರು.

ಬೆಂಕಿಯಲ್ಲಿ ಎರಡು ರೀತಿಯ ಬೆಳಕು ಕಾಣಬಹುದು. ಕತ್ತಲಿನಲ್ಲಿ ಮುಳುಗಿರುವ ಮನೆಗೆ ದೀಪದಲ್ಲಿನ ಬೆಂಕಿ ಬೆಳಕಾಗುತ್ತದೆ. ಆ ಬೆಂಕಿ ಪ್ರಕೃತಿ ಮೇಲೆ ಬಿದ್ದರೆ ಜ್ವಾಲೆಯಾಗುತ್ತದೆ. ಅದೇ ರೀತಿ ನಮ್ಮ ಮಾತುಗಳಲ್ಲೂ ಎರಡು ವಿಧಗಳಾಗಿ ನೋಡಬಹುದು. ಬೆಳಕಿನಂತಹ ಮುದಸ್ಮಿತ ಮಾತು ಹಾಗೂ ಬೆಂಕಿಯಂತಹ ಮಾತುಗಳು. ಹೀಗೆ ಪುರಾಣದಲ್ಲೂ ಪ್ರಕೃತಿ ಉಳಿಸುವ ಅನೇಕ ಅಂಶಗಳು ಅಡಕವಾಗಿವೆ ಎಂದು ತಿಳಿಸಿದರಲ್ಲದೆ, ವ್ಯಾಸ ಮಹರ್ಷಿ ಗ್ರಂಥಗಳಲ್ಲಿ ಪ್ರಕೃತಿ ಕುರಿತಾದ ಅನೇಕ ಅಂಶಗಳನ್ನು ಅಧ್ಯಯನ ಮೂಲಕ ತಿಳಿದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಅಲ್ಲದೆ, ಈ ಹಿಂದೆ ಗುರುಕುಲ ಶಿಕ್ಷಣ ಪದ್ಧತಿ ಜಾರಿಯಲ್ಲಿತ್ತು. ಆಗ ವಿದ್ಯಾರ್ಥಿಗಳು ಪುಸ್ತಕಗಳನ್ನು ನೋಡಿಕೊಂಡು ಅಧ್ಯಯನ ಮಾಡುವ ಕಾಲವಾಗಿರಲಿಲ್ಲ. ಆ ಸಂದರ್ಭದಲ್ಲಿ ಗುರುಗಳು ಹೇಳಿಕೊಟ್ಟ ವಾಕ್ಯಗಳನ್ನು ಹೇಳಿಕೊಂಡು ನೆನಪಿನಲ್ಲಿಟ್ಟುಕೊಳ್ಳಬೇಕಿತ್ತು. ಆಗ ಸಂಸ್ಕೃತದ ಎಲ್ಲಾ ಶ್ಲೋಕಗಳು ಜ್ಞಾಪಕದಲ್ಲಿರುತ್ತಿದ್ದವು. ನಂತರ ಬ್ರಿಟಿಷರು ಜಾರಿಗೆ ತಂದ ಪಠ್ಯಪುಸ್ತಕ ಶಿಕ್ಷಣ ಪದ್ಧತಿಯಿಂದ ಈಗ ಎಲ್ಲವೂ ಉಲ್ಟಾಪಲ್ಟಾ ಆಗಿವೆ ಎಂದರು.

ಈ ವೇಳೆ ಪ್ರಾಚ್ಯ ವಿದ್ಯಾ ಸಂಶೋಧನಾಲಯದ ನಿರ್ದೇಶಕ ಡಾ.ಡಿ.ಪಿ. ಮಧುಸೂದನಾಚಾರ್ಯ, ಉಪನಿರ್ದೇಶಕಿ ಡಾ.ಸಿ.ಪಾರ್ವತಿ, ಕೇಂದ್ರದ ಸರ್ಕಾರದ ಇಂದಿರಾಗಾಂಧಿ ರಾಷ್ಟ್ರೀಯ ಕಲಾಕೇಂದ್ರ ಪ್ರಾದೇಶಿಕ ನಿರ್ದೇಶಕ ಡಿ.ಮಹೇಂದ್ರ ಉಪಸ್ಥಿತರಿದ್ದರು.

ರಾಷ್ಟ್ರಕವಿ ಕುವೆಂಪು ಸಾಹಿತ್ಯ ಕುರಿತ ಕವನ ಸ್ಪರ್ಧೆ ಆಯೋಜನೆ



ಮೈಸೂರು, ಡಿ.30(ಎಸ್‌ಪಿಎನ್)– ರಾಷ್ಟ್ರಕವಿ ಕುವೆಂಪು ಅವರ 120ನೇ ಜನ್ಮದಿನದ ಅಂಗವಾಗಿ ಕುವೆಂಪು ರಚಿತ ಕವಿತೆ, ಭಾವಗೀತೆ ಹಾಗೂ ಬದುಕು/ಬರಹ ಆಧಾರಿತ ಕವನ ರಚನ ಸ್ಪರ್ಧೆಗಳನ್ನು ಶನಿವಾರ ಆಯೋಜಿಸಲಾಗಿತ್ತು.

ಮೈಸೂರು ಕುವೆಂಪುನಗರದ ಮರುಳೇಶ್ವರ ಸೇವಾ ಭವನದಲ್ಲಿ ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಹಾಗೂ ನೇಗಿಲಯೋಗಿ ಮಹಿಳಾ ಕ್ಷೇಮಾಭಿವೃದ್ಧಿ ಸಂಘದ ಸಹಯೋಗದಲ್ಲಿ ಜನ್ಮ ದಿನಾಚರಣೆ ಅಂಗವಾಗಿ ಕುವೆಂಪು ರಚಿತ ಭಾವಗೀತೆ, ಕವಿತೆ, ಭಾವಗೀತೆ ಗಾಯನ, ಕುವೆಂಪು ಬದುಕು ಆಧಾರಿತ ಬದುಕು/ಬರಹ ಆಧಾರಿತ ಕವನ ರಚನಾ ಸ್ಪರ್ಧೆ ಕಾರ್ಯಕ್ರಮವನ್ನು ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಅಧ್ಯಕ್ಷ ಡಿ. ರವಿಕುಮಾರ್ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಕುವೆಂಪು ಅವರು ತಮ್ಮ ಜೀವಿತಾವಧಿಯಲ್ಲಿ ನುಡಿದಂತೆ ನಡೆಯುವ ಮೂಲಕ ಇಂದಿನ ಯುವ ಪೀಳಿಗೆಗೆ ಆದರ್ಶ ಪ್ರಾಯರಾಗಿದ್ದರು. ಅವರ ವಿಚಾರಧಾರೆಯಿಂದ ಎಲ್ಲರ ಹೃದಯದಲ್ಲಿ ಶಾಶ್ವತವಾಗಿ ನೆಲೆಸಿದ್ದರು. ಅಲ್ಲದೆ, ತಮ್ಮ ಮನದ ಭಾವನೆಗಳನ್ನು ಯಾವುದೇ ಅಡೆ–ತಡೆ ಇಲ್ಲದೆ ನೇರವಾಗಿ ಹೇಳುವ ಸ್ವಭಾವ ಹೊಂದಿದ್ದರು. ಅವರು ಕನ್ನಡದ ನೆಲ–ಜಲ, ಭಾಷೆ ವಿಚಾರದಲ್ಲಿ ಯಾವುದೇ ಒತ್ತಡಕ್ಕೂ ಮಣಿಯುತ್ತಿರಲಿಲ್ಲ. ಅವರ ನೇರ ನಡೆ–ನುಡಿಗಳು ಹಾಗೂ ಪ್ರಕೃತಿ ಪ್ರೇಮವು ಸಹ ಬರವಣಿಗೆಯಲ್ಲಿ ವ್ಯಕ್ತವಾಗಿರುವುದನ್ನು ನಾವು ಅಧ್ಯಯನದ ಮೂಲಕ ತಿಳಿದುಕೊಳ್ಳಬಹುದು ಎಂದು ತಿಳಿಸಿದರು.

ಜ.6ರಂದು ಬಹುಮಾನ ವಿತರಣೆ: ರಾಷ್ಟ್ರಕವಿ ಕುವೆಂಪು ಅವರ 120ನೇ ಜನ್ಮ ದಿನಾಚರಣೆಯ ಅಂಗವಾಗಿ ಏರ್ಪಡಿಸಿದ್ದ ಕುವೆಂಪು ವಿರಚಿತ ಭಾವಗೀತೆಗಳ ಗಾಯನ ಸ್ಪರ್ಧೆ ಹಾಗೂ ಕುವೆಂಪು ಬದುಕು ಬರಹ ಕುರಿತ ಕವನ ರಚನಾ ಸ್ಪರ್ಧೆಯನ್ನು 5 ವಿಭಾಗದಲ್ಲಿ 10 ವರ್ಷದೊಳಗಿನವರು. 11ರಿಂದ 13, 14ರಿಂದ 16 , 17ರಿಂದ 21 ಹಾಗೂ 21 ವರ್ಷ ಮೇಲ್ಪಟ್ಟ ವಯೋಮಿತಿಯಲ್ಲಿ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಈ ಸ್ಪರ್ಧೆಯಲ್ಲಿ ವಿಜೇತರಾದವರಿಗೆ 2024ರ ಜ.6 ರಂದು ಮೈಸೂರು ಜಯಲಕ್ಷ್ಮೀಪುರಂನಲ್ಲಿರುವ 'ಉದಯರು 'ವಿ' ಮನೆಯಂಗಳದಲ್ಲಿ ಸಂಜೆಗೆ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಬಹುಮಾನ ವಿತರಣೆ ಮಾಡಲಾಗುವುದು ತಿಳಿಸಿದರು.

ಈ ವೇಳೆ ಸಂಗೀತ ನಿರ್ದೇಶಕ ವಿದ್ವಾನ್ ಆರ್.ರಘು, ಡಾ.ಶ್ಯಾಮೇಶ್, ನೇಗಿಲಯೋಗಿ ಮಹಿಳಾ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷೆ ಜೆ.ಶೋಭ ರಮೇಶ್ ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮೈಸೂರಲ್ಲಿ ಅದ್ಧೂರಿಯಾಗಿ ನಡೆದ ಸೌಹಾರ್ದಯುತ ಹನುಮ ಜಯಂತಿ ಮೆರವಣಿಗೆ

● ಶಾಸಕ ಜಿ.ಟಿ.ದೇವೇಗೌಡರಿಂದ ಚಾಲನೆ ● ಅತ್ಯಾಕರ್ಷಿಸಿದ ಅಯೋಧ್ಯೆ ರಾಮಮಂದಿರ ಮಾದರಿಯ ಸ್ತಬ್ಧಚಿತ್ರ ● ಜಾನಪದ ಕಲಾ ತಂಡಗಳ ಮೆರಗು: ಶ್ರೀರಾಮ, ಹನುಮನಿಗೆ ಮೊಳಗಿದ ಜೈಕಾರ ● ಸರ್ವಪಕ್ಷಗಳ ನಾಯಕರ ಸಮಾಗಮ; ಮೆರವಣಿಗೆಯಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್





ಮೈಸೂರು, ಡಿ.30(ಬಿಎಲ್‌ಯು)– ಮೈಸೂರಿನಲ್ಲಿ ಶನಿವಾರ ಹನುಮ ಜಯಂತಿಯನ್ನು ಭಕ್ತಿ ಭಾವ ಹಾಗೂ ಅದ್ಧೂರಿಯಾಗಿ ಆಚರಿಸಲಾಯಿತು.

ಮೈಸೂರು ಅರಮನೆಯ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಕೇಸರಿ ಬಾವುಟಗಳು ರಾರಾಜಿಸಿದವು, ಭಕ್ತ ಸಾಗರ ಶ್ರೀರಾಮ ಹಾಗೂ ಹನುಮನಿಗೆ ಜೈಕಾರದ ಘೋಷಣೆಗಳನ್ನು ಮೊಳಗಿಸಿದರು.

ರಾಮನ ಭಂಟ ಹನುಮನ ಜಯಂತಿ ಹಿನ್ನೆಲೆಯಲ್ಲಿ ಮೈಸೂರು ಅರಮನೆಯ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಇಂದು ಸಾಂಪ್ರದಾಯಿಕ ಹಾಗೂ ಧಾರ್ಮಿಕ ಪೂಜಾ ಕೈಂಕರ್ಯ ನೆರವೇರಿಸಲಾಯಿತು. ಸಾವಿರಾರು ಭಕ್ತರು ಆಂಜನೇಯನ ದರ್ಶನ ಪಡೆದು, ಧನ್ಯತಾ ಭಾವ ಮೆರೆದರು.

ಹನುಮ ಜಯಂತಿ ಅಂಗವಾಗಿ ಮೈಸೂರು ಹನುಮೋತ್ಸವ ಸಮಿತಿಯವರು ಭವ್ಯ ಮೆರವಣಿಗೆ ಆಯೋಜಿಸಿದ್ದರು. ಅರಮನೆ ಮುಂದಿನ ಆಂಜನೇಯಸ್ವಾಮಿ ದೇವಸ್ಥಾನದಿಂದ ಆರಂಭವಾದ ಮೆರವಣಿಗೆಗೆ ಶಾಸಕ ಜಿ.ಟಿ.ದೇವೇಗೌಡರು ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಪಕ್ಷಾತೀತವಾಗಿ ನಡೆಯುತ್ತಿರುವ ಹನುಮ ಜಯಂತಿ ಮೆರವಣಿಗೆಯಲ್ಲಿ ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್‌ನ ನಾಯಕರು ಸೇರಿದಂತೆ ಸಾವಿರಾರು ಜನ ಭಾಗಿಯಾಗಿದ್ದೇವೆ ಎಂದರು.

ಜನವರಿ 22ರಂದು ಉತ್ತರ ಪ್ರದೇಶದ ಅಯೋಧ್ಯೆಯಲ್ಲಿ ರಾಮಮಂದಿರದ ಉದ್ಘಾಟನೆ ನೆರವೇರಲಿದೆ. ಇದರೊಂದಿಗೆ ಬಹು ವರ್ಷಗಳ ಎಲ್ಲರ ಕನಸು ನನಸಾಗುತ್ತಿದೆ. ಇಂತಹ ಸುಸಂದರ್ಭಕ್ಕೆ ಮುನ್ನ ನಡೆಯುತ್ತಿರುವ ರಾಮನ ಭಂಟ ಹನುಮನ ಜಯಂತಿಯನ್ನು ಎಲ್ಲಾ ಸೇರಿ ಅದ್ಧೂರಿಯಿಂದ ಆಚರಿಸುತ್ತಿದ್ದೇವೆ ಎಂದು ಜಿಟಿಡಿ ಹೇಳಿದರು.

ಶಾಸಕರಾದ ಟಿ.ಎಸ್.ಶ್ರೀವತ್ಸ ಕೆ.ಹರೀಶ್ ಗೌಡ, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಬಿಜೆಪಿ ಮುಖಂಡ ಕವೀಶ್‌ಗೌಡ, ರಘು ಕೌಟಿಲ್ಯ, ಮಾಜಿ ಮೇಯರ್ ಶಿವಕುಮಾರ್, ಮಾಜಿ ಕಾರ್ಪೋರೇಟರ್ ಶಿವಣ್ಣ, ಶಿವಕುಮಾರ್, ಸೌಮ್ಯ ಉಮೇಶ್ ಸೇರಿದಂತೆ ಹಲವರು ಈ ವೇಳೆ ಹಾಜರಿದ್ದರು. ಹತ್ತಕ್ಕೂ ಹೆಚ್ಚು ಹನುಮನ ಪ್ರತಿಮೆಗಳಿರುವ ಮೆರವಣಿಗೆಗೆ ಅರಮನೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಚಾಲನೆಗೊಂಡಿತು. ಈ ವೇಳೆ ಹನುಮನ ಉತ್ಸವ ಮೂರ್ತಿಗೆ ಪುಷ್ಪದಿಂದ ಅಲಂಕರಿಸಿ ಉದ್ದಿನ ವಡೆ ಹಾರ ಹಾಗೂ ಕಜ್ಜಾಯದ ಹಾರ ಹಾಕಲಾಗಿತ್ತು. ಮಂಗಳ ವಾದ್ಯ, ಪೂಜಾ ಕುಣಿತ, ಲಿಂಗಧೀರ ಕುಣಿತ, ಬೆದರು ಬೊಂಬೆ ಸೇರಿದಂತೆ ಹಲವು ಜಾನಪದ ಕಲಾತಂಡಗಳು ಮೆರವಣಿಗೆಗೆ ಮೆರಗು ನೀಡಿತು. ಕೇಸರಿ ಬಾವುಟಗಳು ರಾರಾಜಿಸಿದವು. ಈ ವೇಳೆ ಭಕ್ತರು ಹನುಮ ಹಾಗೂ ಶ್ರೀರಾಮನಿಗೆ ಜೈಕಾರದ ಘೋಷಣೆಗಳನ್ನು ಮೊಳಗಿಸಿದರು.

ಮೆರವಣಿಗೆಯಲ್ಲಿ ಸಾಗಿದ ಅಯೋಧ್ಯೆಯ ರಾಮಮಂದಿರ ಮಾದರಿಯ ಸ್ತಬ್ಧಚಿತ್ರ ಜನರನ್ನು ಅತ್ಯಾಕರ್ಷಿಸಿತು. ಹನುಮನ ಭಾವಚಿತ್ರವಿರುವ ಮಾಸ್ಕ್ ಹಾಕಿದ್ದ ಚಿಣ್ಣರು ಕೂಡ ಮೆರವಣಿಗೆಯಲ್ಲಿ ಭಾಗಿಯಾಗಿದ್ದರು.

ನಗರದ ಅಶೋಕ ರಸ್ತೆ, ಇರ್ವಿನ್ ರಸ್ತೆ, ಸಂಯ್ಯಾಜಿರಾವ್ ರಸ್ತೆ, ಕೆ.ಆರ್.ವೃತ್ತ, ದೇವರಾಜ ಅರಸ್ ರಸ್ತೆ, ನಾರಾಯಣ ಶಾಸ್ತ್ರಿ ರಸ್ತೆ, ಚಾಮರಾಜ ಜೋಡಿ ರಸ್ತೆ ಮೂಲಕ ಸಾಗಿದ ಹನುಮ ಜಯಂತಿ ಮೆರವಣಿಗೆ ಗನ್ ಹೌಸ್ ವೃತ್ತದಲ್ಲಿ ಸಮಾಪ್ತಿಗೊಂಡಿತು.

ಹನುಮ ಜಯಂತಿ ಮೆರವಣಿಗೆ ಕೆಲವು ಸೂಕ್ಷ್ಮ ಸ್ಥಳಗಳಲ್ಲಿ ಸಾಗಿದ ಹಿನ್ನೆಲೆ ಮೆರವಣಿಗೆ ಉದ್ದಕ್ಕೂ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಸ್ವತಃ ಡಿಸಿಪಿ ಮುತ್ತುರಾಜ್ ಭದ್ರತೆಯ ಉಸ್ತುವಾರಿ ವಹಿಸಿ ಯಾವುದೇ ಅಹಿತಕರ ಘಟನೆ ಜರುಗದಂತೆ ಬಿಗಿ ಕ್ರಮ ಕೈಗೊಂಡಿದ್ದರು.

ಬುದ್ಧನ ಧರ್ಮ ಸಮಾನತೆ ನೀಡುತ್ತದೆ

ಮಾಜಿ ಮೇಯರ್ ಪುರುಷೋತ್ತಮ್ ಅಭಿಮತ



ಮೈಸೂರು, ಡಿ.30(ಎಂಟಿವೈ)– ನಮ್ಮ ನಡೆ, ನುಡಿ, ವ್ಯಕ್ತಿತ್ವದಲ್ಲಿ ಬುದ್ಧನ ಸಂದೇಶಗಳನ್ನು ಕಂಡುಕೊಳ್ಳುವ ಪ್ರಯತ್ನ ಮಾಡಬೇಕು ಎಂದು ಮಾಜಿ ಮೇಯರ್ ಪುರುಷೋತ್ತಮ ಸಲಹೆ ನೀಡಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ 67ನೇ ಪರಿನಿಬ್ಬಾಣ ದಿನದ ಅಂಗವಾಗಿ ಶನಿವಾರ ಆಯೋಜಿಸಿದ್ದ "ದಲಿತರ ನಡೆ ಬೌದ್ಧ ಧರ್ಮದ ಕಡೆ" ವಿಚಾರ ಸಂಕಿರಣ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಬೌದ್ಧಿಕ ಬುದ್ಧ, ಮೌನದ ಬುದ್ಧ ಬೇರೆ ಬೇರೆ ಆಗಿದ್ದಾರೆ. ಮೌನಕ್ಕೆ ಮನುಷ್ಯರನ್ನು ಮನುಷ್ಯರನ್ನಾಗಿಸುವ ಶಕ್ತಿ ಇದೆ. ಬುದ್ಧನ ಚಿಂತನೆಗಳಲ್ಲಿರುವ ತಾಯಿ ಗುಣ ಬದುಕಿಗೆ ಆತ್ಮೀಯತೆ ತಂದು ಕೊಡುವ ಶಕ್ತಿ ಹೊಂದಿದೆ. ಬುದ್ಧ ಸುತ್ತಲಿನ ಜನರು, ಶಿಷ್ಯರನ್ನು ನೋಡುತ್ತಲೇ ತನ್ನ ಚಿಂತನೆ ರೂಪಿಸಿಕೊಂಡ. ನಗು ಮತ್ತು ಮೌನದಿಂದ ಎಲ್ಲ ವಿರೋಧಗಳನ್ನು ಗೆದ್ದ. ಬುದ್ಧನ ಹುಟ್ಟಿನೊಂದಿಗೆ ತಳುಕು ಹಾಕಿಕೊಂಡಿರುವ ಕತೆಗಳು ರಂಜನೀಯವಾಗಿವೆ. ಆದರೆ, ವಾಸ್ತವ ಅದಲ್ಲ. ಬುದ್ಧನ ಚಿಂತನೆಗಳಲ್ಲಿ ಪರಸ್ಪರ ಪ್ರೀತಿಸುವ, ಗೌರವಿಸುವ ಗುಣ ಇದೆ. ಈ ಚಿಂತನೆಗಳ ಬೆಳಕಲ್ಲಿ ನಮ್ಮ ವೈಚಾರಿಕ ಶಕ್ತಿ ಬೆಳೆಸಿಕೊಳ್ಳಬೇಕು ಎಂದು ಅಭಿಪ್ರಾಯಪಟ್ಟರು.

ಬುದ್ಧನ ಮಾರ್ಗವನ್ನು ಪ್ರತಿಯೊಬ್ಬರು ಅನುಸರಿಸಬೇಕು. ಯಾಕೆಂದರೆ ಈ ಬುದ್ಧನ ಧರ್ಮ ಎಲ್ಲರಿಗೂ ಸಮಾನತೆಯನ್ನು ನೀಡುತ್ತದೆ. ಆರೋಗ್ಯಕ್ಕಾಗಿ, ವಸತಿಗಾಗಿ ಹೋರಾಟ ಮಾಡುತ್ತಿದ್ದೇವೆ. ದೇವರು ಎಂಬುದು ಕಾಲ್ಪನಿಕವಷ್ಟೇ. ಬುದ್ಧನ ಕಾರ್ಯಕ್ರಮಕ್ಕೆ ಬರುವವರು ಪ್ರತಿಯೊಬ್ಬರು ಬಿಳಿ ವಸ್ತ್ರವನ್ನೇ ಧರಿಸಿ ಬರಬೇಕು. ಅಲ್ಲದೇ ನಾಯಕತ್ವ ಹೊಂದಿರುವವರು ಮೊದಲು ಬದಲಾವಣೆ ಆಗಬೇಕಿದೆ ಎಂದು ಸಲಹೆ ನೀಡಿದರು

ಕಾರ್ಯಕ್ರಮದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ನಿಂಗರಾಜ್ ಮಲ್ಲಾಡಿ, ನಗರ ಸಂಚಾಲಕ ಪೈ.ಕೃಷ್ಣ ಅಶೋಕಪುರಂ, ಸಂಘಟನಾ ಸಂಚಾಲಕ ಕೆ.ನಂಜಪ್ಪ ಬಸವನಗುಡಿ, ರಾಜ್ಯ ಸಂಘಟನಾ ಸಂಚಾಲಕ ಹೆಚ್.ಬಿ.ದಿವಾಕರ್, ಜೀವಿಕ ಸಂಸ್ಥೆಯ ಜಿ.ವಿ.ಕ.ಬಸವರಾಜು, ಕರ್ನಾಟಕ ಬುದ್ಧ ಸಮಿತಿ ಕಾರ್ಯದರ್ಶಿ ಆರ್.ಮಹದೇವಪ್ಪ, ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಹೊಸೂರು ಕುಮಾರ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಜಯದೇವ ಹೃದ್ರೋಗ ಸಂಸ್ಥೆ ದೇಶಕ್ಕೇ ಮಾದರಿ

ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಮಾಹಿತಿ



ಮೈಸೂರು ಜಯದೇವ ಹೃದ್ರೋಗ ಸಂಸ್ಥೆಯಲ್ಲಿ ಶನಿವಾರ ನಡೆದ ವಾರ್ಷಿಕೋತ್ಸವ ಸಮಾರಂಭವನ್ನು ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಪದ್ಮಶ್ರೀ ಡಾ.ಸಿ.ಎನ್.ಮಂಜುನಾಥ್ ಉದ್ಘಾಟಿಸಿದರು. ವೈದ್ಯಕೀಯ ಅಧೀಕ್ಷಕ ಡಾ.ಸದಾನಂದ್, ಡಾ.ಶಂಕರ್ ಶಿರಾ, ಡಾ. ಶಿವಸ್ವಾಮಿ ಸೋಸಲೆ, ಡಾ. ಸಂತೋಷ್, ಡಾ. ರಾಜೀತ್, ಡಾ. ವೀಣಾ ನಂಜಪ್ಪ ಚಿತ್ರದಲ್ಲಿದ್ದಾರೆ.

ಮೈಸೂರು,ಡಿ.30(ಎಂಟಿವೈ)– ಜಯದೇವ ಹೃದ್ರೋಗ ಸಂಸ್ಥೆ ದೇಶಕ್ಕೇ ಮಾದರಿಯಾಗಿದೆ ಎಂದು ಕೇಂದ್ರ ಸರ್ಕಾರದ ಸಂಸದೀಯ ಸ್ಥಾಯಿ ಸಮಿತಿ ಮೆಚ್ಚುಗೆ ವ್ಯಕ್ತಪಡಿಸಿದೆ ಎಂದು ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಪದ್ಮಶ್ರೀ ಡಾ.ಸಿ.ಎನ್. ಮಂಜುನಾಥ್ ತಿಳಿಸಿದ್ದಾರೆ.

ಮೈಸೂರು ಜಯದೇವ ಹೃದ್ರೋಗ ಸಂಸ್ಥೆಯಲ್ಲಿ ನಡೆದ ವಾರ್ಷಿಕೋತ್ಸವ ಸಮಾರಂಭವನ್ನು ಉದ್ಘಾಟಿಸಿ ವಿವಿಧ ಕ್ರೀಡೆಯಲ್ಲಿ ವಿಜೇತರಾದ ಸಿಬ್ಬಂದಿಗಳಿಗೆ ಬಹುಮಾನ ವಿತರಿಸಿ ಮಾತನಾಡಿದ ಅವರು, ಜಯದೇವ ಸಂಸ್ಥೆ 16 ವರ್ಷದಲ್ಲಿ ಶೇ.500ರಷ್ಟು ಪ್ರಗತಿ ಸಾಧಿಸಿದೆ. ಇದುವರೆಗೂ ನಮ್ಮ ಸಂಸ್ಥೆಯಲ್ಲಿ 75 ಲಕ್ಷ ಜನರಿಗೆ ಚಿಕಿತ್ಸೆ ನೀಡಲಾಗಿದೆ. 8 ಲಕ್ಷ ಜನರಿಗೆ ಆಪರೇಷನ್ ಮಾಡಿದ್ದೇವೆ. 2 ಸಾವಿರ ಹಾಸಿಗೆ ಸಾಮರ್ಥ್ಯವಿರುವ ಜಯದೇವ ಆಸ್ಪತ್ರೆ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದೆ. 45 ರಿಂದ 50 ಸಂಘ ಸಂಸ್ಥೆಗಳು ನಿರಂತರವಾಗಿ ಆಸ್ಪತ್ರೆಗೆ ದಾನ ಮಾಡುತ್ತಾ ಬರುತ್ತಿರುವುದರಿಂದ ಬಡವರಿಗೆ ಉಚಿತವಾಗಿ ಚಿಕಿತ್ಸೆ ನೀಡಲು ಸಾಧ್ಯವಾಗುತ್ತಿದೆ ಎಂದರು.

ಆಸ್ಪತ್ರೆಗೆ ಬರುವ ರೋಗಿಯ ಜೀವ ಉಳಿಸುವುದರೊಂದಿಗೆ ಉತ್ತಮವಾದ ಆರೈಕೆ ಮಾಡಲಾಗುತ್ತಿದೆ. ಆಸ್ಪತ್ರೆಯ ವೈದ್ಯರೂ ಸೇರಿದಂತೆ ಸಿಬ್ಬಂದಿಗಳು ರೋಗಿಗಳೊಂದಿಗೆ ಪ್ರೀತಿಯಿಂದ ಮಾತನಾಡಿ ಉಪಚರಿಸುತ್ತಿರುವುದು ರೋಗಿಗಳಲ್ಲಿ ಆತ್ಮಸ್ಥೈರ್ಯ ಹೆಚ್ಚಿಸುತ್ತದೆ. ಎಲ್ಲರೂ ಮಾನವೀಯತೆಯಿಂದ ಕೆಲಸ ಮಾಡಬೇಕು. ನಾವೆಲ್ಲಾ ಪ್ರತಿದಿನ ಯಂತ್ರಗಳ ರೀತಿ ಕೆಲಸ ಮಾಡುತ್ತಿದ್ದೇವೆ. ಒತ್ತಡಗಳಿಂದ ವೈದ್ಯರ ಆಯಸ್ಸು ಕಡಿಮೆಯಾಗುತ್ತಿದೆ. ಆದ್ದರಿಂದ ಕ್ರೀಡೆ ಮನುಷ್ಯನ ಆರೋಗ್ಯಕ್ಕೆ ಔಷಧವಾಗಿದ್ದು, ದೇಹಕ್ಕೆ, ಮನಸ್ಸಿಗೆ ಯೌವನವನ್ನು ತರುತ್ತದೆ. ಪ್ರತಿಯೊಬ್ಬರೂ ಕ್ರೀಡಾ ಮನೋಭಾವ ಬೆಳೆಸಿಕೊಳ್ಳಬೇಕು. ನಮ್ಮ ವೃತ್ತಿ ಕೌಶಲ್ಯತೆ ಬೇರೆಯವರ ಜೀವನದಲ್ಲಿ ಎಷ್ಟು ನಗು ತಂದಿದೆ ಅನ್ನುವುದು ಮುಖ್ಯವಾಗಿದೆ. ಇದುವರೆಗೂ ನನ್ನ ಗಮನಕ್ಕೆ ಬಂದ ಒಂದೇ ಒಂದು ರೋಗಿಯನ್ನು ಹಣ ಇಲ್ಲವೆಂದು ಚಿಕಿತ್ಸೆ ನೀಡದೆ ಕಳಿಸಿಲ್ಲ. ಡಾ. ಸದಾನಂದ ನೇತೃತ್ವದಲ್ಲಿ ಮೈಸೂರು ಜಯದೇವ ಆಸ್ಪತ್ರೆ ಯಶಸ್ವಿಯಾಗಿ ಸೇವೆ ಸಲ್ಲಿಸುತ್ತಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ವೈದ್ಯಕೀಯ ಅಧೀಕ್ಷಕ ಡಾ.ಸದಾನಂದ್, ಡಾ.ಶಂಕರ್ ಶಿರಾ, ಡಾ.ಶಿವಸ್ವಾಮಿ ಸೋಸಲೆ, ಡಾ. ಸಂತೋಷ್, ಡಾ.ರಾಜೀತ್, ಡಾ. ವೀಣಾ ನಂಜಪ್ಪ, ಡಾ.ಹೇಮಾ ರವೀಶ್, ಡಾ.ಜಯಪ್ರಕಾಶ್, ಡಾ.ಪಶುಪತಿ, ಡಾ. ಮಂಜುನಾಥ್, ಡಾ.ಭಾರತಿ, ಡಾ.ರಶ್ಮಿ, ಡಾ.ಶ್ರೀನಿಧಿ ಹೆಗ್ಗಡೆ, ಡಾ.ನಿಖಿಲ್, ಡಾ. ದೇವರಜ, ನರ್ಸಿಂಗ್ ಅಧೀಕ್ಷಕ ಹರೀಶ್ ಕುಮಾರ್, ಪಿಆರ್‌ಓ ಚಂಪಕ ಮಾಲ, ಗಾಯಕ ಹರ್ಷ, ರೂಪಶ್ರೀ ಉಪಸ್ಥಿತರಿದ್ದರು.

ಮಂಚೇಗೌಡನಕೊಪ್ಪಲಿನಲ್ಲಿ ವಿಕಸಿತ ಭಾರತ್ ಸಂಕಲ್ಪ ಯಾತ್ರೆ



ಮೈಸೂರು, ಡಿ.30(ಬಿಎಲ್‌ಯು)– ಮೈಸೂರಿನ ಮಂಚೇಗೌಡನಕೊಪ್ಪಲಿನಲ್ಲಿ ಶನಿವಾರ ಕೇಂದ್ರ ಸರ್ಕಾರದ ವಿಕಸಿತ ಭಾರತ್ ಸಂಕಲ್ಪ ಯಾತ್ರೆ ಕಾರ್ಯಕ್ರಮ ನಡೆಯಿತು. ಸಂಸದ ಪ್ರತಾಪ್ ಸಿಂಹ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಯಾತ್ರೆಯ ಉದ್ದೇಶವನ್ನು ಜನರಿಗೆ ತಿಳಿಸಿದರು. ಕೇಂದ್ರ ಸರ್ಕಾರದ ಯೋಜನೆಯ ಸವಲತ್ತು ಪಡೆಯಲು ಸ್ಥಳದಲ್ಲೇ ನೋಂದಣಿ ಮಾಡಿಕೊಂಡು ಉಪಯೋಗ ಪಡೆಯುವಂತೆ ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಉಜ್ವಲ ಯೋಜನೆಯ ಅರ್ಹ ಫಲಾನುಭವಿಗಳಿಗೆ ಗ್ಯಾಸ್ ಕಲೆಕ್ಷನ್ ಸೇರಿದಂತೆ ಇತರೆ ಸವಲತ್ತುಗಳನ್ನು ಸಂಸದ ಪ್ರತಾಪ್ ಸಿಂಹ ವಿತರಣೆ ಮಾಡಿದರು. ಬಿಜೆಪಿ ಯುವ ಮೋರ್ಚಾ ನಗರಾಧ್ಯಕ್ಷ ಎಂ.ಜೆ.ಕಿರಣ್ ಗೌಡ, ಚಾಮರಾಜ ಕ್ಷೇತ್ರದ ಅಧ್ಯಕ್ಷ ಸೋಮಶೇಖರ್, ಪ್ರಧಾನ ಕಾರ್ಯದರ್ಶಿ ಪುನೀತ್, ರಮೇಶ್ ಸೇರಿದಂತೆ ಇತರರು ಈ ಸಂದರ್ಭದಲ್ಲಿ ಹಾಜರಿದ್ದರು.

ಕ್ಲಬ್‌ಗಳಿಗೆ ಅಧಿಕ ಮದ್ಯ ಪೂರೈಕೆ; ಸನ್ನದುದಾರರಿಗೆ ನಷ್ಟದ ಆರೋಪ



ಮೈಸೂರು,ಡಿ.30(ಎಂಟಿವೈ)– ಮೈಸೂರಿನ ಕೆಲವು ಕ್ಲಬ್‌ಗಳಿಗೆ ಮದ್ಯ ತಯಾರಕ ಕಂಪನಿ ಹಾಗೂ ಡಿಸ್ಟಿಲರಿ ಸಂಸ್ಥೆಗಳು ಅಗತ್ಯಕ್ಕಿಂತ ಹೆಚ್ಚಿನ ಪ್ರಮಾಣದ ಮದ್ಯ ಪೂರೈಸುತ್ತಿರುವುದರಿಂದ ವಿವಿಧ ಸನ್ನದುದಾರರಿಗೆ ನಷ್ಟವಾಗುತ್ತಿದೆ ಎಂದು ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಮದ್ಯ ವರ್ತಕರ ಸಂಘದ ಪ್ರಧಾನ ಕಾರ್ಯದರ್ಶಿ ಆರ್.ಲಕ್ಷ್ಮಣ ಆರೋಪಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿವಿಧ ಕ್ಲಬ್‌ಗಳಿಗೆ ಮಿತಿ ಮೀರಿದ ಪ್ರಮಾಣದಲ್ಲಿ ಸ್ಕೀಂ ನೀಡುತ್ತಿದ್ದು, ಅದರ ಮೊತ್ತವನ್ನು ಮಾಲೀಕರಿಗೆ ನೀಡಲಾಗುತ್ತಿದೆ. ಇದರಿಂದ ಕ್ಲಬ್ ಸದಸ್ಯರಲ್ಲದವರಿಗೂ ಮದ್ಯ ನೀಡಲಾಗುತ್ತಿದೆ. ಈ ಹಿಂದೆ 5 ಬಾಕ್ಸ್ ಮದ್ಯ ಪಡೆಯುತ್ತಿದ್ದ ಕ್ಲಬ್‌ಗಳಿಗೆ 500 ಬಾಕ್ಸ್ ಮದ್ಯ ನೀಡಲಾಗುತ್ತಿದೆ. ಕೆಎಸ್‌ಬಿಸಿಎಲ್ ನಿಂದ ರಿಯಾಯಿತಿ ದರದಲ್ಲಿ ಬಿಲ್ ಮಾಡಿಸಲಾಗುತ್ತಿದೆ. ಇದರಿಂದ ದುಬಾರಿ ಶುಲ್ಕ ಪಾವತಿಸುವ ಸನ್ನದುದಾರರಿಗೆ ನಷ್ಟವಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸರ್ಕಾರಕ್ಕೆ ದುಬಾರಿ ಶುಲ್ಕ ಪಾವತಿಸುವ (ಸಿಎಲ್–2, ಸಿಎಲ್9, ಸಿಎಲ್–7) ವೈನ್ ಶಾಪ್, ಬಾರ್‌ಗಿಂತಲೂ ಕಡಿಮೆ ದರದಲ್ಲಿ ಕ್ಲಬ್‌ಗಳಿಗೆ ಮದ್ಯ ಪೂರೈಕೆ ಮಾಡಲಾಗುತ್ತಿದೆ. ಕ್ಲಬ್‌ಗಳಲ್ಲಿ ಕೇವಲ ಸದಸ್ಯರಿಗೆ ಮಾತ್ರ ಮದ್ಯ ಪೂರೈಸುವ ನಿಯಮವಿದೆ. ಆದರೆ ನಿಯಮ ಗಾಳಿಗೆ ತೂರಲಾಗುತ್ತಿದೆ. ಡಿಸ್ಟಿಲರಿ ಕಂಪನಿಗಳೊಂದಿಗೆ ಅಕ್ರಮ ವ್ಯವಹಾರ ನಡೆಸುತ್ತಿರುವ ಶಂಕೆ ವ್ಯಕ್ತವಾಗುತ್ತಿದೆ. ರಿಯಾಯಿತಿ ದರದಲ್ಲಿ ಹೆಚ್ಚು ಸರಕು ಖರೀದಿಸಿ ಬೇಕಾದವರಿಗೆ ಹೆಚ್ಚಿನ ಬೆಲೆಗೆ ಮಾರುತ್ತಿರುವ ಸಂಶಯವಿದೆ. ಇದರಿಂದ ನಾವು ವ್ಯಾಪಾರ ಮಾಡುವುದೇ ಕಷ್ಟವಾಗಿದೆ. ಈ ವ್ಯವಹಾರಗಳಿಗೆ ಕಡಿವಾಣ ಹಾಕುವಂತೆ ಅಧಿಕಾರಿಗಳಿಗೆ ಮೌಖಿಕ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಸರ್ಕಾರ ಇದರತ್ತ ಗಮನಹರಿಸಬೇಕು. ಇಲ್ಲದಿದ್ದರೆ ಅಬಕಾರಿ ಮತ್ತು ಡಿ.ಸಿ ಕಚೇರಿ ಮುಂಭಾಗ ಪ್ರತಿಭಟಿಸಲಾಗುವುದು ಎಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ಎಸ್.ಗುರುಸ್ವಾಮಿ, ಉಪಾಧ್ಯಕ್ಷ ಭಾಸ್ಕರ್ ಎಲ್.ಗೌಡ, ಸದಸ್ಯರಾದ ಲೋಕೇಶ್, ಶ್ರೀನಿವಾಸ ಗಿರಿ, ಶ್ರೀಕಾಂತ್ ಉಪಸ್ಥಿತರಿದ್ದರು.

ನಿಧಿ ಆಪ್ಕೆ ನಿಕಟ್ 2.0ರ ಕಾರ್ಯಕ್ರಮ



ಮೈಸೂರು,ಡಿ.30–ಇಪಿಎಫ್‌ಓ ಪ್ರಾದೇಶಿಕ ಕಚೇರಿಯಿಂದ ನಿಧಿ ಆಪ್ಕೆ ನಿಕಟ್ 2.0ರ ಕಾರ್ಯಕ್ರಮವನ್ನು ಕೆ.ಆರ್.ನಗರದ ಕೃಷ್ಣರಾಜ ವೃತ್ತದಲ್ಲಿ ನಡೆಸಲಾಯಿತು.

ಕಾರ್ಯಕ್ರಮದಲ್ಲಿ ಎಂಸಿಡಿಸಿಸಿ ಬ್ಯಾಂಕ್ ಕ್ಷೇತ್ರ ಮೇಲ್ವಿಚಾರಕ ಆರ್.ಲಿಂಗರಾಜು ಉಪಸ್ಥಿತರಿದ್ದರು. ಇಪಿಎಫ್‌ಓ, ಪ್ರಾದೇಶಿಕ ಕಚೇರಿಯಿಂದ ದೀಪಲ್ ಮಹಲ, ಲೆಕ್ಕಾಧಿಕಾರಿ/ನೋಡಲ್ ಅಧಿಕಾರಿ, ಸಂಪತ್‌ಕುಮಾರ್ ಎಸ್., ಡಿಪಿಎ ಮತ್ತು ಆರ್.ಜಗದೀಶ್, ಎಸ್‌ಎಸ್‌ಎಸ್‌ಎ ಹಾಗೂ ಇಎಸ್‌ಐಸಿ ಕಡೆಯಿಂದ ರಾಕೇಶ್ ಕುಮಾರ್ ಝಾ, ಎಸ್‌ಎಸ್‌ಓ, ಇಎಸ್‌ಐಸಿ ಉದ್ಯೋಗದಾತರು, ಉದ್ಯೋಗಿಗಳು ಮತ್ತು ಪಿಂಚಣಿದಾರರು ಕುಂದುಕೊರತೆಗಳ ಪರಿಹಾರ ಮತ್ತು ಸಂದರ್ಭದ ಸರಿಯಾದ ನಿರ್ವಹಣೆಗಾಗಿ ಉಪಸ್ಥಿತರಿದ್ದರು.

ಇಪಿಎಫ್‌ಓ ಉದ್ಯೋಗದಾತರು, ಉದ್ಯೋಗಿಗಳು ಮತ್ತು ಪಿಂಚಣಿದಾರರು ತಮ್ಮ ಪ್ರಶ್ನೆಗಳು ಮತ್ತು ಕುಂದುಕೊರತೆಗಳೊಂದಿಗೆ ಸ್ಥಳಕ್ಕೆ ಭೇಟಿ ನೀಡಿ, ಸ್ಥಳದಲ್ಲೇ ಸಮಸ್ಯೆ ಆಲಿಸಿ ಪರಿಹರಿಸಲಾಯಿತು.

ಅತಿಥಿ ಉಪನ್ಯಾಸಕರ ಬೇಡಿಕೆ ಈಡೇರಿಕೆ; ರಾಜ್ಯ ಸರ್ಕಾರಕ್ಕೆ ಕೃತಜ್ಞತೆ



ಮೈಸೂರು, ಡಿ.30(ಬಿಎಲ್‌ಯು)– ಕಾಲೇಜುಗಳ ಅತಿಥಿ ಉಪನ್ಯಾಸಕರ ಬೇಡಿಕೆ ಈಡೇರಿಸಿದ ರಾಜ್ಯ ಸರ್ಕಾರಕ್ಕೆ ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಕೃತಜ್ಞತೆ ಸಲ್ಲಿಸಿದ್ದಾರೆ.

ಕಾಲೇಜು ಶಿಕ್ಷಣ, ತಾಂತ್ರಿಕ ಶಿಕ್ಷಣ ಇಲಾಖೆಯ ಪ್ರಥಮ ದರ್ಜೆ ಕಾಲೇಜು, ಇಂಜಿನಿಯರಿಂಗ್ ಮತ್ತು ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರ ಬೇಡಿಕೆಯನ್ನು ಸರ್ಕಾರ ಸಹಾನುಭೂತಿಯಿಂದ ಪರಿಗಣಿಸಿದೆ. ಈ ಉಪನ್ಯಾಸಕರ ಉತ್ತಮ ಕಾರ್ಯವನ್ನು ವಿದ್ಯಾರ್ಥಿಗಳ ಹಿತ ದೃಷ್ಟಿಯಿಂದ ಗೌರವಿಸಿ ವೇತನ ಪರಿಷ್ಕರಣೆ, ನಿವೃತ್ತಿ ಸಹಾಯಧನ, ವೈದ್ಯಕೀಯ ಸೌಲಭ್ಯ, ರಜೆ ಸೌಕರ್ಯ, ಭವಿಷ್ಯತ್ತಿನ ನೇಮಕಾತಿಗೆ ಕೃಪಾಂಕ ನೀಡುವುದರ ಮೂಲಕ ಅವರ ಸೇವಾ ಭದ್ರತೆಗೆ ಸರ್ಕಾರ ಅವಕಾಶ ಕಲ್ಪಿಸಿಕೊಟ್ಟಿದೆ ಎಂದಿದ್ದಾರೆ. ಈ ಮೂಲಕ ಸರ್ಕಾರ ರಚನೆಯಾದ 6 ತಿಂಗಳ ಅವಧಿಯಲ್ಲಿ ಅತಿಥಿ ಉಪನ್ಯಾಸಕರ ದೀರ್ಘಕಾಲದ ಬೇಡಿಕೆಗಳಿಗೆ ಸ್ಪಂದಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಅವರಿಗೆ ಮರಿತಿಬ್ಬೇಗೌಡರು ಕೃತಜ್ಞತೆ ಸಲ್ಲಿಸಿದ್ದಾರೆ.



ಮೈಸೂರಿನ ಅಶೋಕಪುರಂ ಜಯರಾಜ್ ಗ್ರೂಪ್ಸ್ ವತಿಯಿಂದ ಹೊರ ತಂದಿರುವ 'ಮಹಾನಾಯಕ ದಿನಸೂಚಿ'ಯನ್ನು ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಬಿಡುಗಡೆ ಮಾಡಿದರು. ಈ ವೇಳೆ ಅಶೋಕಪುರಂ ಜಯರಾಜ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್, ಪ್ರಸಾದ್, ಕೃಷ್ಣಮೂರ್ತಿ, ಪುಟ್ಟಸ್ವಾಮಿ, ರಾಜು, ಗುಣಶೇಖರ್, ಮಹಮ್ಮದ್ ಫಾರೂಕ್, ಮಧುರಾಜ್, ಅರುಣ್ ಗಂಗಾಧರ್ ಉಪಸ್ಥಿತರಿದ್ದರು.

ಅಡುಗೆ ಅನಿಲ ಸಂಪರ್ಕ ಹೊಂದಿದವರು ಕೆವೈಸಿ ಮಾಡಿಸಲು ಗಡುವು ನಿಗದಿಯಾಗಿಲ್ಲ

ಆಹಾರ ಮತ್ತು ನಾಗರಿಕ ಸರಬರಾಜು ಜಂಟಿ ನಿರ್ದೇಶಕಿ ಕುಮುದಾ ಸ್ಪಷ್ಟನೆ



ಮೈಸೂರು,ಡಿ.30(ಎಸ್‌ಬಿಡಿ)–ಅಡುಗೆ ಅನಿಲ ಸಂಪರ್ಕ (ಎಲ್‌ಪಿಜಿ ಗ್ಯಾಸ್) ಹೊಂದಿರುವ ಗ್ರಾಹಕರು ಏಜೆನ್ಸಿಗಳಲ್ಲಿ ಇ–ಕೆವೈಸಿ ಮಾಡಿಸಲು ಯಾವುದೇ ಗಡುವು ನಿಗದಿಯಾಗಿಲ್ಲ ಎಂದು ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ ಜಂಟಿ ನಿರ್ದೇಶಕಿ ಕುಮುದಾ ಪತ್ರಿಕಾ ಪ್ರಕಟಣೆ ಮೂಲಕ ಸ್ಪಷ್ಟಪಡಿಸಿದ್ದಾರೆ.

ಅಡುಗೆ ಅನಿಲ ಸಂಪರ್ಕ(ಎಲ್‌ಪಿಜಿ ಗ್ಯಾಸ್) ಹೊಂದಿರುವ ಗ್ರಾಹಕರು ಡಿ.31ರೊಳಗೆ ತಮ್ಮ ಅಡುಗೆ ಅನಿಲ ಗ್ರಾಹಕ ಸಂಖ್ಯೆಗೆ ಇ–ಕೆವೈಸಿ ಮಾಡಿಸಬೇಕು. ಜೊತೆಗೆ ಬ್ಯಾಂಕ್ ಖಾತೆ ಮಾಹಿತಿಯನ್ನು ಗ್ಯಾಸ್ ಏಜೆನ್ಸಿಗೆ ಸಲ್ಲಿಸಬೇಕು. ತಪ್ಪಿದ್ದಲ್ಲಿ ಅಂತಹ ಗ್ರಾಹಕರಿಗೆ ಸಬ್ಸಿಡಿ ಹಣ ಪಾವತಿ ಸ್ಥಗಿತವಾಗುತ್ತದೆ. ಅಲ್ಲದೆ ಗೃಹೋಪಯೋಗಿ ಗ್ಯಾಸ್ ಸಂಪರ್ಕ ವಾಣಿಜ್ಯ ಉದ್ದೇಶಿತ ಸಂಪರ್ಕವೆಂದು ಪರಿವರ್ತನೆಯಾಗುತ್ತದೆ. ಇಲ್ಲವೇ ಅನಿಲ ಸಂಪರ್ಕವೇ ಕಡಿತವಾಗುತ್ತದೆ ಎಂಬ ವದಂತಿ ಸಾರ್ವಜನಿಕ ವಲಯದಲ್ಲಿ ಗೊಂದಲ ಸೃಷ್ಟಿಸಿದೆ. ಆದರೆ ಅಡುಗೆ ಅನಿಲ ಗ್ರಾಹಕರು ಈ ರೀತಿಯ ವದಂತಿಗಳಿಗೆ ಕಿವಿಗೊಡಬಾರದು. ಗ್ರಾಹಕರು ಇ–ಕೆವೈಸಿ ಮಾಡಿಸಲು ಕೇಂದ್ರ ಸರ್ಕಾರವಾಗಲೀ ಅಥವಾ ಅನಿಲ ಕಂಪನಿಗಳಾಗಲೀ ಯಾವುದೇ ಗಡುವು ನಿಗದಿಪಡಿಸಿಲ್ಲ. ಇ–ಕೆವೈಸಿ ನಿರಂತರ ಪ್ರಕ್ರಿಯೆ. ಪ್ರಧಾನಮಂತ್ರಿ ಉಜ್ವಲ ಯೋಜನೆಯಡಿ ಅಡುಗೆ ಅನಿಲ ಸಂಪರ್ಕ ಪಡೆದಿರುವವರು ಮತ್ತು ಸಬ್ಸಿಡಿ ಪಡೆಯುವ ಗ್ರಾಹಕರು ಆದ್ಯತೆ ಮೇಲೆ ಇ–ಕೆವೈಸಿ ಮಾಡಿಸಬಹುದು. ಅಲ್ಲದೆ ಇ–ಕೆವೈಸಿ ಉಚಿತವಾಗಿದ್ದು, ಯಾವುದೇ ರೀತಿಯ ಶುಲ್ಕ ಪಾವತಿಸುವ ಅಗತ್ಯವಿಲ್ಲ ಎಂದು ಸ್ಪಷ್ಟವಾಗಿ ತಿಳಿಸಿದ್ದಾರೆ.

ಸಾಲುಗಟ್ಟಿ ನಿಂತಿದ್ದ ಗ್ರಾಹಕರು: ಅನಿಲ ಸಂಪರ್ಕ ಗ್ರಾಹಕರು ಏಜೆನ್ಸಿಯಲ್ಲಿ ಇ–ಕೆವೈಸಿ ಮಾಡಿಸಬೇಕೆಂದು ಸರ್ಕಾರ ಸೂಚನೆ ನೀಡಿದೆ ಎಂದು ಎಲ್ಲೆಡೆ ವ್ಯಾಪಕವಾಗಿ ಹರಡಿತ್ತು. ಒಬ್ಬರಿಂದೊಬ್ಬರಿಗೆ ಮಾಹಿತಿ ರವಾನೆಯಾಗುವ ವೇಳೆ ಹಲವು ವದಂತಿಗಳೂ ಸೇರಿಕೊಂಡಿದ್ದವು. ಇ–ಕೆವೈಸಿ ಮಾಡಿಸಲು ಡಿ.31 ಕಡೇ ದಿನ, ತಪ್ಪಿದರೆ ಸಬ್ಸಿಡಿ ಬರುವುದಿಲ್ಲ, ಗ್ಯಾಸ್ ಸಂಪರ್ಕವೇ ಕಡಿತವಾಗುತ್ತದೆ ಎಂದೆಲ್ಲಾ ಹೇಳಲಾಗುತ್ತಿತ್ತು. ಪರಿಣಾಮ ಗ್ರಾಹಕರು ತಮ್ಮ ಏಜೆನ್ಸಿಗಳತ್ತ ದೌಡಾಯಿಸಿದ್ದರು. ಶನಿವಾರವೂ ಕೂಡ ಹಲವು ಏಜೆನ್ಸಿಗಳ ಮುಂದೆ ಗ್ರಾಹಕರು ಸಾಲುಗಟ್ಟಿ ನಿಂತಿದ್ದರು.

ಇಂದು ವಾರ್ಷಿಕ ಮಹಾಸಭೆ

ಮೈಸೂರು,ಡಿ.30–ಮೈಸೂರಿನ ರಾಮಕೃಷ್ಣನಗರದಲ್ಲಿರುವ ಸಿದ್ಧಾರ್ಥ ಕ್ಷೇಮಾಭಿವೃದ್ಧಿ ಸಂಘದ ವಾರ್ಷಿಕ ಮಹಾಸಭೆಯನ್ನು ಡಿ.31ರಂದು ಬೆಳಗ್ಗೆ 10.30ಕ್ಕೆ ರಾಮಕೃಷ್ಣನಗರದ ಸೌಹಾರ್ದ ಗೃಹ ನಿರ್ಮಾಣ ಸಹಕಾರ ಸಂಘದ ಕೊಠಡಿಯಲ್ಲಿ ಕರೆಯಲಾಗಿದೆ. ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಡಾ.ಹಿರಿಯಣ್ಣ ವಹಿಸುವರು.

ಕೊಡವರ ಸಾಂಸ್ಕೃತಿಕ ವೈಭವ ಅನಾವರಣಗೊಳಿಸಿದ ವಿಶ್ವ ಕೊಡವ ಸಮ್ಮೇಳನ

ಕೊಡವ ಸಾಂಪ್ರದಾಯಿಕ ಉಡುಪಿನಲ್ಲಿ ಕಂಗೊಳಿಸಿದ ಕೊಡವರು, ಗಮನ ಸೆಳೆದ ಉಮ್ಮತ್ತಾಟ್, ಕೋಲಾಟ್, ಬೊಳಕಾಟ್, ವಿವಿಧ ಗೋಷ್ಠಿಗಳು

ಮಡಿಕೇರಿ,ಡಿ.30– ಕೊಡಗಿನ ಕೊಡವರ ವಿಶಿಷ್ಟ ಸಂಸ್ಕೃತಿ, ಸಂಪ್ರದಾಯ, ಆಚಾರ ವಿಚಾರಗಳನ್ನು ಆಧುನಿಕತೆಯ ಭರಾಟೆಯ ನಡುವೆಯೂ ಉಳಿಸಿ ಬೆಳೆಸುವುದರೊಂದಿಗೆ, ವಿಶ್ವಾದ್ಯಂತ ನೆಲೆಸಿರುವ ಕೊಡವ ಸಮುದಾಯ ಬಾಂಧವರನ್ನು ಒಗ್ಗೂಡಿಸುವ ನಿಟ್ಟಿನಲ್ಲಿ ವಿಶ್ವ ಕೊಡವ ಸಮ್ಮೇಳನದ ಎರಡನೇ ದಿನದ ಪೈಪೋಟಿ ಕಾರ್ಯಕ್ರಮ ಕೊಡವ ಸಾಂಸ್ಕೃತಿಕ ವೈಭವವನ್ನು ಅನಾವರಣಗೊಳಿಸಿತು. ಕುಪ್ಯಚಾಲೆ ತೊಟ್ಟು, ಪೀಚೆ ಕತ್ತಿ ಒಡಿಕತ್ತಿಯೊಂದಿಗೆ ಕಂಡು ಬಂದ ಕೊಡವ ಪುರುಷರು, ಆಕರ್ಷಕ ಕೊಡವ ಸಾಂಪ್ರದಾಯಿಕ ಧಿರಿಸಿನಲ್ಲಿ ಸ್ಪರ್ಧಾ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡ ಮಹಿಳೆಯರಿಂದ ನಗರದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜು ಆವರಣಕ್ಕೆ ವಿಶೇಷ ಮೆರುಗು ಮೂಡಿತು.

ಕನೆಕ್ಟಿಂಗ್ ಕೊಡವ ಸಂಸ್ಥೆಯಿಂದ ಆಯೋಜಿತ ವಿಶ್ವ ಕೊಡವ ಮೇಳದ ದ್ವಿತೀಯ ದಿನವಾದ ಶನಿವಾರ ಎಫ್‌ಎಂಕೆಎಂಸಿ ಕಾಲೇಜಿನ ಆವರಣದ ವಿವಿಧೆಡೆಗಳಲ್ಲಿ ಉಮ್ಮತ್ತಾಟ್, ಕೋಲಾಟ್, ಬೊಳಕಾಟ್ ಪೈಪೋಟಿ ಅತ್ಯಂತ ಉತ್ಸಾಹದಿಂದ ನೂರಾರು ಪ್ರೇಕ್ಷಕರ ಸಮ್ಮುಖದಲ್ಲಿ ಪ್ರದರ್ಶಿಸಲ್ಪಟ್ಟು ಗಮನ ಸೆಳೆಯಿತು. ದುಡಿಯ ನಾದಕ್ಕೆ ತಕ್ಕಂತೆ ಕೈಯಲ್ಲಿ ಬೆತ್ತವನ್ನು ಹಿಡಿದು, ಲಾಲಿತ್ಯಪೂರ್ಣವಾಗಿ ಮರದ ಸುತ್ತ ಹೆಜ್ಜೆ ಹಾಕುತ್ತಾ ಪುರುಷರು ನಡೆಸಿದ ಕೋಲಾಟ್ ಗಮನ ಸೆಳೆಯಿತ್ತಲ್ಲದೇ, ಕೊಡಗಿನ ಕೊಡವರ ಕ್ಷಾತ್ರ ತೇಜವನ್ನು ಹೊರ ಹೊಮ್ಮಿಸುವಂತೆ ಮತ್ತೊಂದು ಅಂಗಣದಲ್ಲಿ ಒಡಿ ಕತ್ತಿಯೊಂದಿಗೆ ನಡೆದ 'ಕತ್ತಿಯಾಟ್' ಅತ್ಯಂತ ಕುತೂಹಲಕಾರಿಯಾಗಿತ್ತು. ಕೈಯಲ್ಲಿ ಬಿಳಿ ಬಣ್ಣದ ಚೌರಿ ಹಿಡಿದು ವಿಶೇಷ ಗತ್ತಿನೊಂದಿಗೆ ದುಡಿಯ ತಾಳಕ್ಕೆ ತಕ್ಕಂತೆ ಹೆಜ್ಜೆ ಹಾಕುವ 'ಚೌರಿಯಾಟ್' ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಯಿತು.






ನಾಡಿನ ವಿವಿಧೆಡೆಗಳಿಂದ ಸಾಂಪ್ರದಾಯಿಕ ಉಡುಪಿನೊಂದಿಗೆ ಹರಿದು ಬಂದ ಕೊಡವ ಸಮುದಾಯ ಬಾಂಧವರು ಕಾಲೇಜು ಆವರಣದಲ್ಲಿ ಬೆಳಗ್ಗಿನಿಂದಲೇ ಸಮಾವೇಶಗೊಂಡು, ತಮ್ಮ ತಮ್ಮ ತಂಡಗಳ ಪೈಪೋಟಿಯ ಸಂದರ್ಭ ಅವರಿಗೆ ಬೆಂಬಲ ನೀಡುತ್ತಾ ಒಟ್ಟು ವಾತಾವರಣದ ಕಳೆಯನ್ನು ಹೆಚ್ಚಿಸಿದರು. ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳಿಗೆ ಜಿಲ್ಲೆ ಸೇರಿದಂತೆ ಹೊರ ಜಿಲ್ಲೆಗಳಿಂದಲೂ ನೂರಾರು ತಂಡಗಳು ಆಗಮಿಸಿ ಪ್ರದರ್ಶನ ನೀಡಿದವು.

ವಿವಿಧಗೋಷ್ಠಿಗಳು: ಕೊಡವ ಸಂಸ್ಕೃತಿ, ಪರಂಪರೆಯ ಉಳಿವಿನ ಕೇಂದ್ರ ವಿಷಯದಡಿ ವಿವಿಧ ವಿಚಾರ ಗೋಷ್ಠಿಗಳು ಸಮ್ಮೇಳನದಲ್ಲಿ ನಡೆಯಿತು. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಹೆಸರಾಂತ ಸಂಪನ್ಮೂಲ ವ್ಯಕ್ತಿಗಳು ವಿಚಾರ ಗೋಷ್ಠಿಗಳಲ್ಲಿ ಪಾಲ್ಗೊಂಡು ಕೊಡವ ಸಮುದಾಯದ ಏಳಿಗೆಗೆ ಮಾಡಬೇಕಿರುವ ಕಾರ್ಯಗಳ ಕುರಿತು ಚರ್ಚಿಸಿದರು. ಆ ಮೂಲಕ ಕೊಡವ ಸಂಸ್ಕೃತಿ, ಸಂಪ್ರದಾಯಗಳ ಸಂರಕ್ಷಣೆಗೆ ವಿಶೇಷ ಮಹತ್ವವನ್ನು ನೀಡುವಲ್ಲಿ ವಿಚಾರ ಗೋಷ್ಠಿ ಯಶಸ್ವಿಯಾಯಿತು. ಇದೇ ಸಂದರ್ಭ ಕ್ರೀಡೆ, ಕೃಷಿ, ರಕ್ಷಣಾ ವಲಯ, ಶಿಕ್ಷಣ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಅಭೂತಪೂರ್ವ ಸಾಧನೆ ಮಾಡಿದ ಕೊಡವ ಸಮುದಾಯದ ವ್ಯಕ್ತಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

ಪೊನ್ನಂಪೇಟೆಗೆ ರಾಜ್ಯಪಾಲರು ಭೇಟಿ

ಇಂದು ಗೋಣಿಕೊಪ್ಪಲಿನ ಕಾಶ್ಮೀರಿ ಯುವ ವಿನಿಮಯ ಕಾರ್ಯಕ್ರಮದಲ್ಲಿ ಭಾಗಿ



ಮಡಿಕೇರಿ,ಡಿ.30– ಗೋಣಿಕೊಪ್ಪಲಿನಲ್ಲಿ ಡಿ.31ರಂದು ಕಾಶ್ಮೀರಿ ಯುವ ವಿನಿಮಯ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಇಂದು ಜಿಲ್ಲೆಗೆ ಭೇಟಿ ನೀಡಿದ್ದಾರೆ.

ಕಣ್ಣೂರು ವಿಮಾನ ನಿಲ್ದಾಣಕ್ಕೆ ಇಂದು ಮಧ್ಯಾಹ್ನ ಆಗಮಿಸಿ, ಅಲ್ಲಿಂದ ಬಂದು ಪೊನ್ನಂಪೇಟೆ ತಾಲೂಕು ಮಾಯಮಾಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಖಾಸಗಿ ರೆಸಾರ್ಟ್‌ನಲ್ಲಿ ವಾಸ್ತವ್ಯ ಹೂಡಿದ್ದಾರೆ.

ಜಿಲ್ಲಾಧಿಕಾರಿ ವೆಂಕಟರಾಜ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಹೆಚ್ಚುವರಿ ಪೊಲೀಸ್ ಅಧೀಕ್ಷಕ ಸುಂದರ್ ರಾಜ್ ಸೇರಿದಂತೆ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು ರಾಜ್ಯಪಾಲರನ್ನು ಹೂ ಗುಚ್ಛ ನೀಡಿ ಬರಮಾಡಿಕೊಂಡರು.

ಕಾರ್ಯಕ್ರಮದಲ್ಲಿ ವಿಧಾನಸಭೆಯ ಸಭಾಧ್ಯಕ್ಷ ಯು.ಟಿ.ಖಾದರ್, ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು, ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರು ಹಾಗೂ ವಿರಾಜಪೇಟೆ ಕ್ಷೇತ್ರದ ಶಾಸಕ ಎ.ಎಸ್.ಪೊನ್ನಣ್ಣ, ಸಂಸದ ಪ್ರತಾಪ್ ಸಿಂಹ, ಶಾಸಕ ಡಾ.ಮಂತರ್‌ಗೌಡ, ವಿಧಾನ ಪರಿಷತ್ ಸದಸ್ಯ ಸುಜಾ ಕುಶಾಲಪ್ಪ, ಎಸ್.ಎಲ್.ಭೋಜೇಗೌಡ ಇತರರು ಪಾಲ್ಗೊಳ್ಳಲಿದ್ದಾರೆ.

ಸಮಾರೋಪ ಸಮಾರಂಭ: ಕೇಂದ್ರ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಗೃಹ ಸಚಿವಾಲಯ, ನೆಹರು ಯುವ ಕೇಂದ್ರ ಸಂಘಟನೆ, ಕೊಡಗು ಜಿಲ್ಲಾ ಯುವ ಒಕ್ಕೂಟ, ಕೂರ್ಗ್ ಪಬ್ಲಿಕ್ ಶಾಲೆ ಮತ್ತು ಗೋಣಿಕೊಪ್ಪ ಪದವಿ ಪೂರ್ವ ಕಾಲೇಜುಗಳ ಜಂಟಿ ಸಹಯೋಗದಲ್ಲಿ 'ಕಾಶ್ಮೀರಿ ಯುವ ವಿನಿಮಯ' ಕಾರ್ಯಕ್ರಮದ ಸಮಾರೋಪ ಸಮಾರಂಭ ಡಿ.31ರಂದು ಬೆಳಗ್ಗೆ 10 ಗಂಟೆಗೆ ಗೋಣಿಕೊಪ್ಪದ ಕೂರ್ಗ್ ಪಬ್ಲಿಕ್ ಶಾಲೆಯ ಸಭಾಂಗಣದಲ್ಲಿ ನಡೆಯಲಿದೆ.

ಇಂದಿನಿಂದ ಬೈತೂರು ಉತ್ಸವಕ್ಕೆ ಕೊಡವರಿಗೆ ಆಹ್ವಾನ

ವಿರಾಜಪೇಟೆ, ಡಿ.30– ಕೇರಳದ ಬೈತೂರಿನ ಈಶ್ವರ ದೇವಾಲಯದಲ್ಲಿ ಜನವರಿ ಮೂರನೇ ವಾರದಲ್ಲಿ ನಡೆಯಲಿರುವ ಬೈತೂರು ಉತ್ಸವಕ್ಕೆ ಕೊಡಗು ಜಿಲ್ಲೆಯ ಭಕ್ತರನ್ನು ಆಹ್ವಾನಿಸಲು ಬೈತೂರು ದೇವಾಲಯದಿಂದ ಕೋಮರತಚ್ಚನ್ ನಾಳೆ (ಭಾನುವಾರ)ಯಿಂದ ಜ.9ರವರೆಗೆ ಕೊಡಗಿನ ವಿವಿಧ ಕಡೆಗಳಿಗೆ ಕಾಲ್ನಡಿಗೆಯಲ್ಲಿ ಭೇಟಿ ನೀಡಲಿದ್ದಾರೆ ಎಂದು ಬೈತೂರು ತಕ್ಕ ಮುಖ್ಯಸ್ಥರಾದ ಮುಗ್ಗೆರ ಪೊನ್ನಪ್ಪ ತಿಳಿಸಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಕೋಮರತಚ್ಚನ್ ಡಿ.31 ರಂದು ಬೈತೂರಿನಿಂದ ಹೆಗ್ಗಳ ಭಗವತಿ, ಅಯ್ಯಪ್ಪ ದೇವಾಲಯಕ್ಕೆ ಆಗಮಿಸಿ ಅಂದು ಅಲ್ಲಿಯೆ ವಾಸ್ತವ್ಯ ಹೂಡಲಿದ್ದಾರೆ. ಜನವರಿ 1 ರಂದು ಪ್ರಾತಕಾಲ ಭಕ್ತರಿಗೆ ಆಶೀರ್ವಾದ ನೀಡಿ ಬಳಿಕ ಮುಗ್ಗೆರ ನಂದಾ ಗಣಪತಿ ಅವರ ಮನೆಗೆ ತೆರಳಲಿದ್ದಾರೆ. ನಂತರ ಕುಕ್ಲೂರು ಮಾಳೇಟಿರ ಐನ್ ಮನೆ, ಕೋಳುವಂಡ ಐನ್‌ಮನೆಗೆ ತೆರಳಿ ಈಶ್ವರ ದೇವಾಲಯದಲ್ಲಿ ತಂಗಲಿದ್ದಾರೆ.

ಜ.2ರಂದು ಪೂರ್ವಾಹ್ನ ದೇವಣಗೇರಿ ಮುಕ್ಕಾಟಿರ ಐನ್‌ಮನೆಗೆ ಭೇಟಿ ನೀಡಿ ಅಲ್ಲಿನ ಈಶ್ವರ ದೇವಾಲಯದಲ್ಲಿ ಪೂಜೆ ಸಲ್ಲಿಸಿ ಮುಗ್ಗೆರ ಐನ್‌ಮನೆಗೆ ಭೇಟಿ ನೀಡಲಿದ್ದಾರೆ. ಸಂಜೆ ಹಾಲುಗುಂದ ಭಗವತಿ ದೇವಾಲಯದಲ್ಲಿ ತಂಗಲಿದ್ದಾರೆ. ಜ.3 ರಂದು ಮೈತಾಡಿ ಭಗವತಿ ದೇವಾಲಯದಲ್ಲಿ ಪೂಜೆ ಸಲ್ಲಿಸಿ ಚಪ್ಪಂಡ ಐನ್‌ಮನೆಗೆ ತೆರಳಿ ಅಯ್ಯಪ್ಪ ದೇವಾಲಯ, ಐಚೇಟ್ಟಿರ ಐನ್‌ಮನೆ, ಬೇರೆರ ಐನ್‌ಮನೆಗೆ ತೆರಳಿ ನಂತರ ಕುಂಜಿಲಗೇರಿ ಮುಕ್ಕಾಟಿರ ಐನ್‌ಮನೆಯಲ್ಲಿ ವಾಸ್ತವ್ಯ ಹೂಡಲಿದ್ದಾರೆ.

ಜ.4 ರಂದು ಮಾತಂಡ ಐನ್‌ಮನೆಗೆ ಬೇಟಿ ನೀಡಿ ಅರಮೇರಿ ಭಗವತಿ ದೇವಾಲಯದಲ್ಲಿ ತಂಗಲಿದ್ದಾರೆ. ಜ.5 ಪೂರ್ವಾಹ್ನ ಪಾಲೆಕಂಡ ಐನ್ ಮನೆಗೆ ಭೇಟಿ ನೀಡಿ ರಾತ್ರಿ ಕೆದಮುಳ್ಳೂರು ಈಶ್ವರ ದೇವಾಲಯದಲ್ಲಿ ವಾಸ್ತವ್ಯ. ಜ.6 ರಂದು ಕದನೂರು ಭಗವತಿ ದೇವಾಲಯದಲ್ಲಿ ಪೂಜೆ ಬಳಿಕ ಮಗ್ಗುಲ ಚೋಕಂಡ ಐನ್‌ಮನೆಗೆ ಭೇಟಿ ನಂತರ ಅಯ್ಯಪ್ಪ ದೇವಾಲಯದಲ್ಲಿ ಪೂಜೆ ಸಲ್ಲಿಸಿ ಪುಲಿಯಂಡ ಐನ್‌ಮನೆಯಲ್ಲಿ ವಾಸ್ತವ್ಯ.

ಜ.7ರಂದು ಪೂರ್ವಾಹ್ನ ವಿರಾಜಪೇಟೆ ಗಣಪತಿ ದೇವಾಲಯದಲ್ಲಿ ಪೂಜೆ ಸಲ್ಲಿಸಿ ಮಡಿಕೇರಿಯ ಓಂಕಾರೇಶ್ವರ ದೇವಾಲಯಕ್ಕೆ ತೆರಳಿ ಸಂಜೆ ಕೊಡಂದೇರ ಐನ್‌ಮನೆಯಲ್ಲಿ ವಾಸ್ತವ್ಯ ಹೂಡಲಿದ್ದಾರೆ. ತಾ.8 ರಂದು ಕಾಮೇಯಂಡ ಐನ್‌ಮನೆಗೆ ಭೇಟಿ ನೀಡಿ ಬಳಿಕ ಮಾಚೇಟಿರ ಐನ್‌ಮನೆಯಲ್ಲಿ ವಾಸ್ತವ್ಯ ಜ.9 ಬಾಳುಗೋಡು ಭದ್ರಕಾಳಿ ದೇವಾಲಯದಲ್ಲಿ ಪೂಜೆ ಸಲ್ಲಿಸಿ ಮೂರಿರ ಐನ್ ಮನೆಗೆ ಭೇಟಿ ನೀಡಿ, ಅಮ್ಮಣಕುಟ್ಟಂಡ ಬೋಪಣ್ಣ ಅವರ ಮನೆಗೆ ಭೇಟಿ, ಅದೇ ದಿನ ಬೈತೂರು ದೇವಾಲಯಕ್ಕೆ ಹಿಂತಿರುಗಲಿದ್ದಾರೆ. ಹೆಚ್ಚಿನ ವಿವರಗಳಿಗೆ ಮುಗ್ಗೆರ ಪೊನ್ನಪ್ಪ 9663977304, ಟ್ರಸ್ಟಿ ಮಾಳೇಟಿರ ರತ್ನಾ ಸುಬ್ಬಯ್ಯ 9901209530 ಇವರುಗಳನ್ನು ಸಂಪರ್ಕಿಸಬಹುದು ಎಂದು ತಿಳಿಸಿದರು. ಗೋಷ್ಠಿಯಲ್ಲಿ ಟ್ರಸ್ಟಿ ಬೈತೂರು ಕೊಡವ ಭವನ ಅಧ್ಯಕ್ಷ ಮುಗ್ಗೆರ ರಂಜಿ ದೇವಯ್ಯ, ಚೇಂದಂಡ ಶಿವಕುಮಾರ್, ಮಾಳೇಟಿರ ಅಜಿತ್ ಉಪಸ್ಥಿತರಿದ್ದರು.

ಸೇತುವೆಯಿಂದ ಸ್ಕೂಟರ್ ಬಿದ್ದು ಸವಾರ ಸಾವು

ಗೋಣಿಕೊಪ್ಪ, ಡಿ.30– ನಿಯಂತ್ರಣ ತಪ್ಪಿ ಸ್ಕೂಟರ್ ಸೇತುವೆಯಿಂದ ಬಿದ್ದ ಪರಿಣಾಮ ಸವಾರ ಸಾವನ್ನಪ್ಪಿದ್ದು ಹಿಂಬದಿ ಸವಾರ ಪಾರಾಗಿದ್ದಾರೆ. ಚೆನ್ನಂಗೊಲ್ಲಿ ನಿವಾಸಿ ಪವನ್ ಕುಮಾರ್(23) ಮೃತ ದುರ್ದೈವಿ. ಹಿಂಬದಿ ಸವಾರ ಗೋಣಿಕೊಪ್ಪದ ದಿಲನ್(27) ಗಾಯಗೊಂಡು ಅಪಾಯದಿಂದ ಪಾರಾಗಿದ್ದಾರೆ.

ಗೋಣಿಕೊಪ್ಪ ಸಮೀಪದ ಸೀಗೆತೋಡು ಎಂಬಲ್ಲಿ ರಾತ್ರಿ ಘಟನೆ ನಡೆದಿದ್ದು, ಗೋಣಿಕೊಪ್ಪದಿಂದ ತೆರಳುತ್ತಿದ್ದಾಗ ನಿಯಂತ್ರಣ ತಪ್ಪಿ ಸೀಗೆತೋಡು ಸೇತುವೆಯಿಂದ ಸ್ಕೂಟರ್ ಕೆಳಗೆ ಬಿದ್ದಿದೆ ಸವಾರ ಸ್ಥಳದಲ್ಲಿಯೇ ಸಾವಿಗೀಡಾದರು. ದಿಲನ್‌ಗೆ ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಯಿತು. ಗೋಣಿಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಾಲಕರ ರಾಷ್ಟ್ರೀಯ ಹಾಕಿಯಲ್ಲಿ ಕರ್ನಾಟಕ ತಂಡಕ್ಕೆ ಜಯ

ಗೋಣಿಕೊಪ್ಪಲು: ಮಧ್ಯಪ್ರದೇಶದ ಗ್ವಾಲಿಯರ್‌ನಲ್ಲಿ ನಡೆಯುತ್ತಿರುವ 17ವರ್ಷದೊಳಗಿನ ಬಾಲಕರ ರಾಷ್ಟ್ರೀಯ ಹಾಕಿ ಪಂದ್ಯಾವಳಿಯಲ್ಲಿ ಕೊಡಗಿನ ವಿದ್ಯಾರ್ಥಿಗಳನ್ನು ಒಳಗೊಂಡ ಕರ್ನಾಟಕ ತಂಡ ಜಯ ಸಾಧಿಸಿದೆ.



ಶನಿವಾರ ನಡೆದ ಪಂದ್ಯದಲ್ಲಿ ತಮಿಳುನಾಡು ತಂಡವನ್ನು 2–0 ಗೋಲುಗಳಿಂದ ಸೋಲಿಸಿದ ಕರ್ನಾಟಕ ತಂಡ ಗೆಲುವಿನ ನಗೆ ಬೀರಿತು. ಸಂಘಟಿತ ಪ್ರಯತ್ನದೊಂದಿಗೆ ಉತ್ತಮ ಪ್ರದರ್ಶನ ನೀಡಿದ ಕರ್ನಾಟಕ ತಂಡ ಎದುರಾಳಿ ತಮಿಳುನಾಡು ತಂಡವನ್ನು ಸುಲಭವಾಗಿ ಮಣಿಸುವಲ್ಲಿ ಯಶಸ್ವಿಯಾಯಿತು. ವಿಜೇತ ತಂಡದ ಪರವಾಗಿ ಧ್ಯಾನ್ ದೇವಯ್ಯ ಮೊದಲ ಗೋಲು ಬಾರಿಸಿದರೆ, ದೀಕ್ಷಿತ್ 2ನೇ ಗೋಲು ದಾಖಲಿಸಿದರು.

ನಗರ ವಸತಿರಹಿತರಿಗೆ ಆಶ್ರಯ ಮನೆ

ಮಡಿಕೇರಿ: ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ ಯೋಜನೆಯ ನಗರ ವಸತಿ ರಹಿತರಿಗೆ ಆಶ್ರಯ ಉಪ ಘಟಕದಡಿ ಆಶ್ರಯ ಕಲ್ಪಿಸಲು 3ನೇ ವ್ಯಕ್ತಿಯ (ಎನ್‌ಜಿಒ) ಮುಖಾಂತರ ಮಡಿಕೇರಿ ನಗರಸಭಾ ವ್ಯಾಪ್ತಿಯಲ್ಲಿ ಬರುವ ವಸತಿ ರಹಿತರ (ನಗರದಲ್ಲಿ ರಾತ್ರಿ ವೇಳೆ ನಿರ್ಗತಿಕರು, ರಸ್ತೆ ಬದಿ ಅಂಗಡಿಗಳ ಜಗುಲಿ, ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ, ಸಾರ್ವಜನಿಕ ಸ್ಥಳಗಳಲ್ಲಿ ಮಲಗುವ ಮಾನಸಿಕ ಅಸ್ವಸ್ಥರು, ವೃದ್ಧರು, ಮಕ್ಕಳು, ಅಂಗವಿಕಲರು ಮತ್ತು ಇನ್ನಿತರ ವಸತಿರಹಿತರು, ಅನಾಥರುಗಳು) ಸಮೀಕ್ಷೆಯನ್ನು ಜ.3 ರವರೆಗೆ ಒಂದು ವಾರಗಳ ಕಾಲ ನಗರಸಭೆ ಹಾಗೂ ಸ್ನೇಹಾಶ್ರಯ ಯೂತ್ ಟ್ರಸ್ಟ್ ಇವರ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿದ್ದು, ಸಾರ್ವಜನಿಕರು ಅಗತ್ಯ ಮಾಹಿತಿ ಇದ್ದಲ್ಲಿ ಕಚೇರಿಯನ್ನು ಸಂಪರ್ಕಿಸುವಂತೆ ನಗರಸಭೆ ಪೌರಾಯುಕ್ತರಾದ ವಿಜಯ್ ತಿಳಿಸಿದ್ದಾರೆ.

ನಾಳೆ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ

ಮಡಿಕೇರಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಕೊಡಗು ಜಿಲ್ಲಾ ವಿಶ್ವಕರ್ಮ ಒಕ್ಕೂಟದ ಸಹಕಾರದಲ್ಲಿ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆಯು ಜ.1ರಂದು ಬೆಳಗ್ಗೆ 10.30 ಗಂಟೆಗೆ ನಗರದ ಗಾಂಧಿ ಭವನದಲ್ಲಿ ನಡೆಯಲಿದೆ. ಗಣ್ಯರು ಪಾಲ್ಗೊಳ್ಳಲಿದ್ದಾರೆ.

ದಕ್ಷಿಣ ಶಿಕ್ಷಕರ ಕ್ಷೇತ್ರದ ಅಂತಿಮ ಮತದಾರರ ಪಟ್ಟಿ ಪ್ರಕಟ

ಚಾ.ನಗರ ಜಿಲ್ಲೆಯಲ್ಲಿ 2084 ಮತದಾರರು

ಚಾಮರಾಜನಗರ, ಡಿ.30–ದಕ್ಷಿಣ ಶಿಕ್ಷಕರ ಕ್ಷೇತ್ರದ ಅಂತಿಮ ಮತದಾರರ ಪಟ್ಟಿ ಪ್ರಕಟಿಸಲಾಗಿದ್ದು, ಜಿಲ್ಲೆಯಲ್ಲಿ 2084 ಮತದಾರರು ಇದ್ದಾರೆ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ತಿಳಿಸಿದರು.



ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ಕರ್ನಾಟಕ ದಕ್ಷಿಣ ಶಿಕ್ಷಕರ ಕ್ಷೇತ್ರದ ಅಂತಿಮ ಮತದಾರರ ಪಟ್ಟಿ ಪ್ರಕಟಿಸುವ ಸಂಬಂಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕರಡು ಮತದಾರರ ಪಟ್ಟಿಯಲ್ಲಿ 1812 ಮತದಾರರಿದ್ದು, ಕರಡು ಮತದಾರರ ಪಟ್ಟಿಯ ನಂತರ 302 ಅರ್ಜಿಗಳನ್ನು ಇತ್ಯರ್ಥಗೊಳಿಸಿದ್ದು, 281 ಅರ್ಜಿಗಳನ್ನು ಅಂಗೀಕರಿಸಲಾಗಿದೆ. 9 ಅರ್ಜಿಗಳು ತಿರಸ್ಕೃತಗೊಂಡಿವೆ. ಅಂತಿಮ ಮತದಾರರ ಪಟ್ಟಿಯಲ್ಲಿ 2084 ಮತದಾರರಿದ್ದಾರೆ. ಮತದಾರರ ಪಟ್ಟಿಯನ್ನು ಆಯಾ ತಾಲೂಕು ಕಚೇರಿಗಳಲ್ಲಿ ಪ್ರಕಟಿಸಲಾಗಿದೆ ಎಂದರು.

ದಕ್ಷಿಣ ಶಿಕ್ಷಕರ ಕ್ಷೇತ್ರದ ಅಂತಿಮ ಮತದಾರರ ಪಟ್ಟಿಯನ್ನು ಶೇ.100ರಷ್ಟು ದೋಷರಹಿತ ಹಾಗೂ ಪಾರದರ್ಶಕವಾಗಿ ತಯಾರಿಸಲಾಗಿದ್ದು, ನ.23 ರಿಂದ ಡಿ.9ರವರೆಗೆ ಸ್ವೀಕರಿಸಿರುವ ಹಕ್ಕು ಹಾಗೂ ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಿ ಇತ್ಯರ್ಥ ಪಡಿಸಿ ಅಂತಿಮ ಮತದಾರರ ಪಟ್ಟಿ ತಯಾರಿಸಿ ಪ್ರಕಟಿಸಲಾಗಿದೆ ಎಂದರು.

ಅಂತಿಮ ಮತದಾರರ ಪಟ್ಟಿ ಪ್ರಕಟಿಸಲು ಗುಂಡ್ಲುಪೇಟೆ 57, ಚಾಮರಾಜನಗರ 106, ಯಳಂದೂರು 37, ಕೊಳ್ಳೇಗಾಲ 72 ಹಾಗೂ ಹನೂರು ತಾಲೂಕಿನ 30 ಅರ್ಜಿಗಳು ಸೇರಿದಂತೆ ಒಟ್ಟು 302 ಅರ್ಜಿಗಳನ್ನು ಸ್ವೀಕರಿಸಲಾಗಿತ್ತು. ಈ ಪೈಕಿ 281 ಅರ್ಜಿಗಳನ್ನು ಅಂಗೀಕರಿಸಲಾಗಿದೆ. 19 ಅರ್ಜಿ ತಿರಸ್ಕರಿಸಲಾಗಿದ್ದು, ಉಳಿದ 2 ಅರ್ಜಿಗಳನ್ನು ಮೈಸೂರು ಜಿಲ್ಲೆಗೆ ವರ್ಗಾಯಿಸಲಾಗಿದೆ ಎಂದರು.

ಕರ್ನಾಟಕ ದಕ್ಷಿಣ ಶಿಕ್ಷಕರ ಕ್ಷೇತ್ರದ ವ್ಯಾಪ್ತಿಗೆ ಮೈಸೂರು, ಮಂಡ್ಯ, ಹಾಸನ ಹಾಗೂ ಚಾಮರಾಜನಗರ ಜಿಲ್ಲೆಗಳು ಒಳಪಡಲಿದ್ದು, ಚಾಮರಾಜನಗರ ಜಿಲ್ಲೆಗೆ ಸಂಬಂಧಿಸಿದಂತೆ 2023ರ ಡಿಸೆಂಬರ್ ಅಂತ್ಯಕ್ಕೆ ಅಂತಿಮ ಮತದಾರರ ಪಟ್ಟಿಯಲ್ಲಿ ಗುಂಡ್ಲುಪೇಟೆ ತಾಲೂಕಿನಲ್ಲಿ 379, ಚಾಮರಾಜನಗರ 575, ಯಳಂದೂರು 191, ಕೊಳ್ಳೇಗಾಲ 702 ಹಾಗೂ ಹನೂರು ತಾಲೂಕಿನಲ್ಲಿ 237 ಮತದಾರರು ಸೇರಿದಂತೆ ಜಿಲ್ಲೆಯಲ್ಲಿ ಒಟ್ಟು 2084 ಮತದಾರರಿದ್ದಾರೆ ಎಂದು ತಿಳಿಸಿದರು.

ದಕ್ಷಿಣ ಶಿಕ್ಷಕರ ಕ್ಷೇತ್ರದ ಅಂತಿಮ ಮತದಾರರ ಪಟ್ಟಿಯನ್ನು ಜಿಲ್ಲಾಧಿಕಾರಿಯ ವೆಬ್‌ಸೈಟ್ http://chamrajnagar.nic.in/en/election ನಲ್ಲಿ ವಿತ್‌ಔಟ್ (without Images) ಇಮೇಜಸ್ ಪ್ರತಿಯನ್ನು ಮಾಹಿತಿಗಾಗಿ ಪ್ರಕಟಿಸಲಾಗಿದೆ ಎಂದರು.

ಸಭೆಯಲ್ಲಿ ರಾಜಕೀಯ ಪಕ್ಷಗಳ ಪ್ರತಿನಿಧಿಗಳಾದ ಎಂ.ಚಿಕ್ಕಮಹದೇವು, ಎಸ್.ಬಾಲಸುಬ್ರಮಣ್ಯ, ಎನ್.ನಾಗಯ್ಯ, ಎಸ್.ಮಹೇಶ್‌ಗೌಡ, ಬ.ಮ.ಕೃಷ್ಣಮೂರ್ತಿ, ಜಿಲ್ಲಾಧಿಕಾರಿ ಕಚೇರಿ ಚುನಾವಣಾ ಶಿರಸ್ತೇದಾರ್ ಬಸವರಾಜು, ತಾಲೂಕು ಕಚೇರಿ ಚುನಾವಣಾ ಶಿರಸ್ತೇದಾರ್ ಪ್ರಕಾಶ್ ಇತರರಿದ್ದರು.

ಪತ್ರಕರ್ತರು, ವಕೀಲರು ನಿರಂತರ ಅಧ್ಯಯನಶೀಲರಾಗಬೇಕು

ಅಭಿನಂದನಾ ಸಮಾರಂಭದಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ

ಚಾಮರಾಜನಗರ, ಡಿ.30– ಪತ್ರಕರ್ತರು ಮತ್ತು ವಕೀಲರು ನಿರಂತರವಾಗಿ ಅಧ್ಯಯನಶೀಲರಾದಾಗ ಮಾತ್ರ ತಮ್ಮ ಗುರಿ ಸಾಧಿಸಲು ಸಾಧ್ಯ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ತಿಳಿಸಿದರು.



ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಆವರಣದಲ್ಲಿ ಪತ್ರಕರ್ತರಾಗಿ ಎಲ್‌ಎಲ್‌ಬಿ ಪೂರೈಸಿ ವಕೀಲರಾದ ಗೌಡಹಳ್ಳಿ ಮಹೇಶ್, ಎಸ್.ಪ್ರತಾಪ್, ಮನು ಶ್ಯಾನುಭೋಗ್ ಅವರಿಗೆ ಶನಿವಾರ ಏರ್ಪಡಿಸಿದ್ದ ಅಭಿನಂದನಾ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು. ಸಮಾಜದ 4ನೇ ಅಂಗವಾಗಿರುವ ಪತ್ರಕರ್ತರು ನಿಂತ ನೀರಾಗಬಾರದು. ಸದಾ ಕ್ರಿಯಾಶೀಲರಾಗಿ ಕೆಲಸ ಮಾಡುವ ಮೂಲಕ ವೃತ್ತಿ ಜೊತೆಗೆ ಇತರ ಉನ್ನತ ವೃತ್ತಿಗಳ ಕಡೆಗೂ ಹೋಗಬಹುದು ಎಂದರು.

ಪತ್ರಕರ್ತರು ಮತ್ತು ವಕೀಲರು ಸಮಯಪ್ರಜ್ಞೆಯಿಂದ ಕಾನೂನು ವ್ಯಾಪ್ತಿಯೊಳಗೆ ಕಾರ್ಯ ನಿರ್ವಹಿಸಿ, ನೊಂದವರಿಗೆ ದನಿಯಾದಾಗ ಸಮಾಜ ತಮ್ಮನ್ನು ಗೌರವದಿಂದ ಕಾಣುತ್ತದೆ. ನಿಷ್ಪಕ್ಷಪಾತವಾಗಿ, ಸರಳತೆ ಮೈಗೂಡಿಸಿಕೊಳ್ಳಬೇಕು ಎಂದರು.

ಹಿರಿಯ ವಕೀಲ ಆರ್.ವಿ.ವಿರೂಪಾಕ್ಷ ಮಾತನಾಡಿ, ಪತ್ರಕರ್ತರು ಮತ್ತು ವಕೀಲರ ವೃತ್ತಿ ಬೇರೆಯಾದರೂ ಮಾಡುವ ಕೆಲಸ ಒಂದೇ ಅದು ಸಮಾಜಮುಖಿ ಕೆಲಸ. ಸಾಮಾಜಿಕ ಜವಾಬ್ದಾರಿ ಇಬ್ಬರ ಮೇಲೂ ಇದ್ದು ಕಾನೂನು ವ್ಯಾಪ್ತಿಯೊಳಗೆ ಸಮಾಜ ಕಟ್ಟುವ ಕೆಲಸ ಮಾಡಬೇಕು ಎಂದರು.

ಸಮಾಜದಲ್ಲಿ ಅರಾಜಕತೆ ಸೃಷ್ಟಿಯಾಗದಂತೆ ನೋಡಿಕೊಳ್ಳಬೇಕು. ಸಾಮಾಜಿಕ ಜವಾಬ್ದಾರಿ ಇಟ್ಟುಕೊಂಡು ಕೆಲಸ ಮಾಡಬೇಕು. ಕಾನೂನು ನಿಯಮಗಳಿಗೆ ಬದ್ಧರಾಗಿ ಕೆಲಸ ಮಾಡಬೇಕು ಎಂದರು.

ಪತ್ರಕರ್ತರು ಮತ್ತು ವಕೀಲರು ಸಮಾಜದ ಋಣ ತೀರಿಸಬೇಕು. ಎಲ್ಲದಕ್ಕೂ ರಾಜಿಯಾಗಬಾರದು. ನ್ಯಾಯಯುತವಾಗಿ ಸಮಸ್ಯೆ ಬಗೆಹರಿಸಬೇಕು. ನಾವು ಏನು ಗಳಿಸಿದ್ದೇವೆ ಎನ್ನುವುದಕ್ಕಿಂತ ನಾವು ಸಮಾಜಕ್ಕೆ ಏನು ಕೊಡುತ್ತಿದ್ದೇವೆ ಎನ್ನುವುದು ಮುಖ್ಯ. ಈ ನಿಟ್ಟಿನಲ್ಲಿ ವಕೀಲ ವೃತ್ತಿಗೆ ಕಾಲಿಡುತ್ತಿರುವ ಪತ್ರಕರ್ತರು ಕಾರ್ಯೋನ್ಮುಖರಾಗಬೇಕು ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ದೇವರಾಜು ಕಪ್ಪಸೋಗೆ, ಪತ್ರಕರ್ತರಾಗಿ ಮತ್ತೊಂದು ವೃತ್ತಿಗೆ ಹೋಗುವುದು ಅಷ್ಟು ಸುಲಭವಲ್ಲ. ಸದಾ ಒತ್ತಡದಲ್ಲಿ ಕರ್ತವ್ಯ ನಿರ್ವಹಿಸುತ್ತಾ, ವಕೀಲರಾಗಿ ಹೊರ ಹೊಮ್ಮಿರುವವರು ಬೆಂಕಿಯಲ್ಲಿ ಅರಳಿದ ಹೂಗಳು ಎಂದರು.

ಇದೇ ವೇಳೆ ಗೌಡಹಳ್ಳಿ ಮಹೇಶ್, ಎಸ್.ಪ್ರತಾಪ್, ಮನು ಶ್ಯಾನುಭೋಗ್, ಹಿರಿಯ ವಕೀಲರಾದ ಆರ್.ವಿ.ವಿರೂಪಾಕ್ಷ ಅವರನ್ನು ಸನ್ಮಾನಿಸಲಾಯಿತು. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಸಾದ್ ನಿರೂಪಿಸಿ, ಸಿದ್ದಲಿಂಗಸ್ವಾಮಿ ಸ್ವಾಗತಿಸಿದರು. ಸಂಘದ ಪದಾಧಿಕಾರಿಗಳು, ಸದಸ್ಯರು, ಹಿರಿಯ ಪತ್ರಕರ್ತರು ಉಪಸ್ಥಿತರಿದ್ದರು.



ಸಾಮಗ್ರಿ ಖರೀದಿಸುವಲ್ಲಿ ಅಕ್ರಮ, ಕಂದಾಯ ಪಾವತಿಯಲ್ಲಿ ವಂಚನೆ

ನಗರಸಭೆ ಸದಸ್ಯನ ಸದಸ್ಯತ್ವ ರದ್ದತಿಗೆ ಒತ್ತಾಯ

ಕೊಳ್ಳೇಗಾಲ, ಡಿ.30– ತಾವೇ ನಡೆಸುತ್ತಿರುವ ಅಂಗಡಿಯಲ್ಲಿ ನಗರಸಭೆಗೆ ಸಾಮಗ್ರಿ ಖರೀದಿಸುವಲ್ಲಿ ಅಕ್ರಮ ಎಸಗಿರುವ ನಗರಸಭಾ ಸದಸ್ಯ ಜಿ.ಪಿ.ಶಿವಕುಮಾರ್ ಸದಸ್ಯತ್ವ ರದ್ದಾಗಬೇಕು. ಇದಕ್ಕೆ ಸಹಕಾರ ನೀಡಿದ ಹಿಂದಿನ ಆಯುಕ್ತ ರಾಜಣ್ಣ ಸೇರಿದಂತೆ ಇತರ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಸದಸ್ಯರು ಒತ್ತಾಯಿಸಿದರು.

ಶನಿವಾರ ಪಟ್ಟಣದ ನಗರಸಭೆಯಲ್ಲಿ ಜಿಲ್ಲಾಧಿಕಾರಿ ಶಿಲ್ಪಾನಾಗ್ ಹಾಗೂ ಶಾಸಕ ಎ.ಆರ್.ಕೃಷ್ಣಮೂರ್ತಿ ಸಮ್ಮುಖದಲ್ಲಿ ಶನಿವಾರ ನಡೆದ ಸಾಮಾನ್ಯ ಸಭೆಯಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ಸದಸ್ಯರು, ಜಿ.ಪಿ.ಶಿವಕುಮಾರ್ ಅವರು ಅಕ್ರಮ ಎಸಗಿರುವ ಕುರಿತು ದಾಖಲೆಗಳನ್ನು ಪ್ರದರ್ಶಿಸಿ ತೆರಿಗೆ ವಂಚಕ ನಗರಸಭಾ ಸದಸ್ಯ ಎಂದು ಫಲಕ ಪ್ರದರ್ಶಿಸಿ ಕ್ರಮಕ್ಕೆ ಆಗ್ರಹಿಸಿದರು.

ತಮ್ಮ ಮನೆಯ 13 ವರ್ಷಗಳ ಕಂದಾಯ ಪಾವತಿಸಬೇಕಿದ್ದ ಜಿ.ಪಿ.ಶಿವಕುಮಾರ್ ಅವರು ನಗರಸಭೆಗೆ 2021, 2022, 23ನೇ ಸಾಲಿನ ಕಂದಾಯ ಪಾವತಿಸಿ 10 ವರ್ಷಗಳ ಕಂದಾಯ ಪಾವತಿಸದೇ ವಂಚಿಸಿದ್ದಾರೆ. ಇದಕ್ಕೆ ಸಹಕರಿಸಿದ ನೌಕರರ ಮೇಲೂ ಶಿಸ್ತು ಕ್ರಮವಾಗಬೇಕು ಎಂದು ಸದಸ್ಯರಾದ ರಾಮಕೃಷ್ಣ, ಎ.ಪಿ.ಶಂಕರ್, ಚಿಂತು ಪರಮೇಶ್, ನಾಸೀರ್, ಪ್ರಕಾಶ್ ಇನ್ನಿತರರು ಒತ್ತಾಯಿಸಿ, ಈ ಬಗ್ಗೆ ತನಿಖೆಯಾಗಬೇಕು ಎಂದು ಆಗ್ರಹಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿಗಳು, ಎಡಿಸಿ ನೇತೃತ್ವದಲ್ಲಿ ತನಿಖೆ ನಡೆಸಿ ಸದಸ್ಯರ ಆರೋಪ ಸಾಬೀತಾದರೆ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದರು.

14 ಮಂದಿ ವಿರುದ್ಧ ಕ್ರಮವಿಲ್ಲ: ಇದೇ ವೇಳೆ ಹಲವು ಸದಸ್ಯರು ಕಳೆದ ಮೂರ್‍ನಾಲ್ಕು ವರ್ಷಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣದಲ್ಲಿ ಸಾಕಷ್ಟು ಅವ್ಯವಹಾರ ನಡೆದಿದ್ದು, ಈ ಪ್ರಕರಣದಲ್ಲಿ ಲೂಟಿ ಮಾಡಿದ 14 ಮಂದಿ ವಿರುದ್ಧ ಕ್ರಿಮಿನಲ್ ಮೊಕದ್ದಮೆಗೆ ಡಿಎಂಎ ಸೂಚಿಸಿದ್ದರೂ, ಇನ್ನು ಏಕೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಿಲ್ಲ. ಈ ಪ್ರಕರಣದಲ್ಲಿ ಆರೋಪಿಗಳನ್ನು ರಕ್ಷಿಸಲಾಗುತ್ತಿದೆ ಎಂದು ಆರೋಪಿಸಿದರು.

ಈ ಸಂಬಂಧ ಜಿಲ್ಲಾಧಿಕಾರಿ ಕಡತ ತರಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರಾದರೂ ವ್ಯವಸ್ಥಾಪಕರು ತರುವುದಾಗಿ ಹೇಳುತ್ತಲೇ ಇದ್ದರು. ಆದರೆ ಇದಕ್ಕೊಪ್ಪದ ಸದಸ್ಯರು ತಪ್ಪಿತಸ್ಥರ ಮೇಲೆ ಕ್ರಮ ಆಗಲೇಬೇಕು ಎಂದು ಒತ್ತಾಯಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಕಡತ ಪರಿಶೀಲಿಸಿ ಕ್ರಮವಹಿಸಲಾಗುವುದು ಎಂದರು.

> ಅವರು ಖಾತೆ ಮಾಡಲ್ಲ, ಇವರು ಮಾಡಲ್ಲ ಎಂಬ ಆರೋಪ ಬೇಡ. ಹೀಗಿರುವವರು ಮಾಡಲಿಲ್ಲ ಎಂದರೆ ವಾರದೊಳಗೆ ಹೊಸ ಆಯುಕ್ತರು ಬರಲಿದ್ದಾರೆ. ಸಾರ್ವಜನಿಕರ ಕೆಲಸಗಳು ನಿಯಮಾನುಸಾರ ಆಗಲಿದೆ. ಸರ್ಕಾರದ ಸುತ್ತೋಲೆ ಸುಪ್ರಿಂ, ಅದನ್ನು ಮರೆಮಾಚುವುದು ಸರಿಯಲ್ಲ. ನಗರಸಭೆಯ ನಡಾವಳಿಗಳು ಕೇವಲ ಚರ್ಚೆಯಾಗಬಾರದು ಜನರ ಅಭಿವೃದ್ಧಿಯ ಚರ್ಚೆಗಳಿಗೆ ನ್ಯಾಯ ಸಿಗಬೇಕು, ಕಾನೂನು ಬದ್ಧ ಕೆಲಸಕ್ಕೆ ಅಡ್ಡಿ ಉಂಟು ಮಾಡಿದರೂ ಕ್ರಮ ಅನಿವಾರ್ಯ.
> – **ಎ.ಆರ್.ಕೃಷ್ಣಮೂರ್ತಿ, ಶಾಸಕ.**

> ಖಾತೆ ಮಾಡದ ಕುರಿತು ಸರ್ಕಾರದ ಹಂತದಲ್ಲಿಯೇ ಸಚಿವರು ಶೀಘ್ರ ಸಾರ್ವಜನಿಕ ಅಭಿಪ್ರಾಯ ಸಂಗ್ರಹಿಸಿ ನಿರ್ಣಯ ಕೈಗೊಳ್ಳುವ ಸಾಧ್ಯತೆ ಇದೆ. ಹಲವು ನಿಯಮ ಹಿನ್ನೆಲೆ ಕಾನೂನು ಮೀರಿ ಖಾತೆ ಮಾಡಲು ಸಾಧ್ಯವಿಲ್ಲ. ಈ ವಿಚಾರದಲ್ಲಿ ತಪ್ಪು ಕಂಡು ಬಂದರೆ ಶಿಸ್ತು ಕ್ರಮ ಕೈಗೊಳ್ಳಲಾಗುವುದು. ಕಾನೂನಿನಡಿ ಎಲ್ಲವೂ ಸರಿ ಇದ್ದರೆ ವಿಳಂಬ ಸರಿಯಲ್ಲ. ಸರ್ಕಾರಿ ಸುತ್ತೋಲೆಗಳನ್ನು ಪ್ರತಿ ಸದಸ್ಯರೆಲ್ಲರಿಗೂ ತಲುಪಿಸಿ, ನಿಯಮಾನುಸಾರ ಇರುವ ಕೆಲಸ, ಕಾರ್ಯಗಳಿಗೆ ನೌಕರರು ಸ್ಪಂದಿಸದ ದೂರು ಬಂದರೆ ಕ್ರಮ ವಹಿಸಲಾಗುವುದು.
> – **ಶಿಲ್ಪಾನಾಗ್, ಜಿಲ್ಲಾಧಿಕಾರಿ.**

> ನಗರಸಭೆ ನಡಾವಳಿಗಳನ್ನು ಸಭೆಯಲ್ಲಿ ನಮೂದಿಸಲ್ಲ. ಹಸ್ತಾಕ್ಷರಗಳಲ್ಲಿ ಬರೆಯಲ್ಲ. ಕೈಗೊಂಡ ನಿರ್ಣಯವೇ ಬೇರೆ. ಆದರೆ ದಾಖಲಾದ ನಿರ್ಣಯವೇ ಬೇರೆ ಬೇರೆಯಾಗಿರುತ್ತದೆ. ಈ ಹಿನ್ನೆಲೆ ಅನೇಕ ನ್ಯೂನತೆ ಕಂಡು ಬರುತ್ತಿದೆ.
> – **ಎ.ಪಿ.ಶಂಕರ್, ನಗರಸಭಾ ಸದಸ್ಯ.**

ಆರೋಪ, ಪ್ರತ್ಯಾರೋಪ: ಜಿಲ್ಲಾ ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿ ರೇಣುಕಾ ಅವರು ನಗರಸಭೆಯಲ್ಲಿ ಕುಳಿತು ಕೆಲಸ ಮಾಡುವುದಿಲ್ಲ. ಹೋಟೆಲ್ ಸೇರಿದಂತೆ ಇತರೆಡೆ ಕುಳಿತು ಫೈಲ್ ನೋಡಿ ಹೋಗುತ್ತಾರೆ ಎಂದು ಮಾಜಿ ಅಧ್ಯಕ್ಷ ಶಾಂತರಾಜು ಆರೋಪಿಸಿದರು.

ಈ ವೇಳೆ ಜಿಲ್ಲಾಧಿಕಾರಿಗಳು ನೀವು ನಗರ ಸಭೆಗೆ ಬರುತ್ತಿಲ್ಲ ಎಂಬ ಗಂಭೀರ ಆರೋಪವಿದೆ ಇದಕ್ಕೆ ಉತ್ತರಿಸಿ ಎಂದಾಗ ರೇಣುಕಾ ಅವರು, ನಾನು ನಗರಸಭೆಗೆ ಬರುವುದಿಲ್ಲ ಎಂಬ ಆರೋಪ ಸರಿಯಲ್ಲ. ಇದಕ್ಕೆ ಅವರು ಸಾಕ್ಷಿ ನೀಡಲಿ ಎಂದರು.

ಅಧಿಕಾರಿ ವರ್ತನೆಗೆ ಬೇಸತ್ತ ಶಾಂತರಾಜು ಅವರು ಕೆಲಸ ನಿರ್ವಹಿಸಿದ್ದಕ್ಕೆ ಸಾಕ್ಷಿ ನೀಡಲಿ ಎಂದು ಸವಾಲು ಹಾಕುತ್ತಿದ್ದಂತೆಯೇ, ತಮ್ಮ ತಪ್ಪು ಒಪ್ಪಿಕೊಳ್ಳದೇ ಸಮರ್ಥಿಸಿಕೊಂಡರು.

ಈ ವೇಳೆ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರು ರೇಣುಕಾ ಅವರಿಗೆ ನೀವು ನಗರಸಭೆ ವ್ಯಾಪ್ತಿಯಲ್ಲಿ ಕೆಲಸ ಮಾಡಿರುವ ಬಗ್ಗೆ ಮಾಹಿತಿ ನೀಡಿ, 3 ತಿಂಗಳ ಕಾಲ ನಿಮ್ಮ ಕಾರ್ಯವೈಖರಿ ಡೈರಿ ಒದಗಿಸಿ ಎಂದು ತಾಕೀತು ಮಾಡಿದರು.

ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿಸಿ: ನಗರಸಭೆ ವ್ಯಾಪ್ತಿಯಲ್ಲಿ ಕಳೆದ 40 ವರ್ಷಗಳಿಂದ ವಾಸಿಸುತ್ತಿರುವವರಿಗೆ ಕಂದಾಯ ಕಟ್ಟಿಸಿಕೊಂಡು ಇ–ಸ್ವತ್ತು ನೀಡುತ್ತಿಲ್ಲ. ಈ ಮೊದಲು ನಾವು ವಾಸಿಸುವ ಸ್ಥಳ ಗ್ರಾಪಂ ವ್ಯಾಪ್ತಿಗೆ ಸೇರಿತ್ತು. ನಂತರ ಪುರಸಭೆ ವ್ಯಾಪ್ತಿಗೆ ಬಂತು. ಈಗ ನಗರಸಭೆ ವ್ಯಾಪ್ತಿಗೆ ಬಂದ ನಂತರ ಕಾನೂನು ಜಟಿಲವಾಗಿದೆ. ಮನೆ ಇದ್ದರೂ, ಅದರ ಮಾಲೀಕ ಸಂಕಷ್ಟಗಳಿಗಾಗಿ ಬ್ಯಾಂಕ್ ಸಾಲ–ಸೌಲಭ್ಯ ಪಡೆಯಲಾಗುತ್ತಿಲ್ಲ. ಈ ಕಾನೂನು ತಿದ್ದುಪಡಿಯಾಗಬೇಕು. ಇಲ್ಲದಿದ್ದರೆ ನಗರಸಭೆಯ ವ್ಯಾಪ್ತಿಯ ನಮ್ಮನ್ನು ಗ್ರಾಪಂ ವ್ಯಾಪ್ತಿಗೆ ಸೇರಿಸಿ ಎಂದು ಖಾತೆ ತೊಡಕುಗಳ ಕುರಿತು ಬಸ್ತಿಪುರ ಶಾಂತು, ಜಯಂತ್, ಶಂಕರ್ ಇನ್ನಿತರರು ಅಸಮಾಧಾನ ಹೊರ ಹಾಕಿದರು.

ಸಭೆಯಲ್ಲಿ ಎಸಿ ಮಹೇಶ್, ಇಂಜಿನಿಯರ್ ನಾಗೇಂದ್ರ, ಪುರುಷೋತ್ತಮ್, ಚೇತನ್, ಪ್ರದೀಪ್, ಶಿವು ಇನ್ನಿತರರಿದ್ದರು.

ನಾಳೆ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ

ಚಾಮರಾಜನಗರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಸಂಸ್ಕೃತಿ ಇಲಾಖೆ ವತಿಯಿಂದ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ ಸಮಾರಂಭವನ್ನು ಜನವರಿ 1ರಂದು ಬೆಳಿಗ್ಗೆ 11 ಗಂಟೆಗೆ ನಗರದ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಆಯೋಜಿಸಲಾಗಿದೆ.

ಪಶುಸಂಗೋಪನೆ, ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಅವರು ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರು ಅಧ್ಯಕ್ಷತೆ ವಹಿಸುವರು. ಲೋಕಸಭಾ ಸದಸ್ಯರಾದ ವಿ.ಶ್ರೀನಿವಾಸ ಪ್ರಸಾದ್ ಅವರು ಘನ ಉಪಸ್ಥಿತಿ ವಹಿಸುವರು.

ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಹೆಚ್.ಎಂ. ಗಣೇಶ್‌ಪ್ರಸಾದ್, ಎಂ.ಆರ್. ಮಂಜುನಾಥ್, ಮರಿತಿಬ್ಬೇಗೌಡ, ಸಿ.ಎನ್. ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ. ಮಾದೇಗೌಡ, ನಗರಸಭಾ ಸದಸ್ಯರಾದ ಹೆಚ್.ಎಸ್. ಮಮತ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಮೈಸೂರು ಮಹಾರಾಣಿ ಕಲಾ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಡಾ. ಚಂದ್ರಕಲಾ ಮುಖ್ಯ ಭಾಷಣ ಮಾಡುವರು ಎಂದು ಪ್ರಕಟಣೆ ತಿಳಿಸಿದೆ.

ಮುಂದುವರಿದ ಅತಿಥಿ ಉಪನ್ಯಾಸಕರ ಹೋರಾಟ: ಭರವಸೆಗೆ ತಿರಸ್ಕಾರ, ಪಾದಯಾತ್ರೆಗೆ ನಿರ್ಧಾರ

ಬೆಂಗಳೂರು: ಸರ್ಕಾರ ನೀಡಿದ ಭರವಸೆಗಳನ್ನು ತಿರಸ್ಕರಿಸಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರು ಹೋರಾಟ ತೀವ್ರಗೊಳಿಸಲು ನಿರ್ಧರಿಸಿದ್ದು, ಜ.1ರಿಂದ ಪಾದಯಾತ್ರೆ ಹಮ್ಮಿಕೊಂಡಿದ್ದಾರೆ.

ಸೇವಾ ಭದ್ರತೆಗೆ ಆಗ್ರಹಿಸಿ ತುಮಕೂರಿನಿಂದ ಬೆಂಗಳೂರಿಗೆ ಪಾದಯಾತ್ರೆ ಹಮ್ಮಿಕೊಂಡಿದ್ದಾರೆ. ಜ.1ರಂದು ಸಿದ್ದಗಂಗಾ ಮಠದ ಆವರಣದಲ್ಲಿ ಸಿದ್ದಗಂಗಾ ಶ್ರೀಗಳು ಚಾಲನೆ ನೀಡಲಿದ್ದಾರೆ. ಪ್ರತಿದಿನ 20 ಕಿ.ಮೀ. ಸಾಗಿದ ನಂತರ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ದೊಡ್ಡ ಮಟ್ಟದಲ್ಲಿ ಪ್ರತಿಭಟನೆ ನಡೆಸಲು ರಾಜ್ಯ ಅತಿಥಿ ಉಪನ್ಯಾಸಕರ ಸಂಘ ನಿರ್ಧರಿಸಿದೆ.

ಉನ್ನತ ಶಿಕ್ಷಣ ಸಚಿವರು ನೀಡಿದ ನಾಲ್ಕು ಭರವಸೆಗಳು ಅತಿಥಿ ಉಪನ್ಯಾಸಕರ ಮೂಗಿಗೆ ತುಪ್ಪ ಸವರಿದಂತಿವೆ. ಸೇವಾ ಭದ್ರತೆ ಇಲ್ಲದ ಭರವಸೆಗಳಿಂದ ಯಾವ ಪ್ರಯೋಜನವೂ ಇಲ್ಲ. 60 ವರ್ಷಕ್ಕೆ ರೂ. 5 ಲಕ್ಷ ಧನಸಹಾಯದ ಭರವಸೆ ಇದೆ. ಆದರೆ, ಸಹಾಯಕ ಪ್ರಾಧ್ಯಾಪಕರ ನೇಮಕ, ವರ್ಗಾವಣೆಯಿಂದ ಕಾರ್ಯಭಾರ ಕಡಿಮೆಯಾಗುವುದು, ಪ್ರತಿವರ್ಷ ನಡೆಸುವ ಕೌನ್ಸೆಲಿಂಗ್‌ನಿಂದ ಬಹಳಷ್ಟು ಅತಿಥಿ ಉಪನ್ಯಾಸಕರು ಕೆಲಸ ಕಳೆದುಕೊಳ್ಳುತ್ತಿದ್ದಾರೆ. ಸಹಾಯಧನ ನೀಡುವ ಮೊದಲು 60 ವರ್ಷದವರೆಗೆ ಸೇವಾ ಭದ್ರತೆಯ ಭರವಸೆ ನೀಡಬೇಕು ಎಂದು ರಾಜ್ಯ ಅತಿಥಿ ಉಪನ್ಯಾಸಕರ ಸಂಘದ ಅಧ್ಯಕ್ಷ ಹನುಮಂತಗೌಡ ಕಲ್ಮನಿ ಒತ್ತಾಯಿಸಿದ್ದಾರೆ. ಸಿದ್ದರಾಮಯ್ಯ ಅವರು ವಿಧಾನಸಭೆ ವಿರೋಧ ಪಕ್ಷದ ನಾಯಕರಾಗಿದ್ದಾಗ ಅತಿಥಿ ಉಪನ್ಯಾಸಕರನ್ನು ಕಾಯಂ ಮಾಡುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿದ್ದರು. ಈಗ ಅವರೇ ಮುಖ್ಯಮಂತ್ರಿಯಾಗಿದ್ದಾರೆ. ಕಾಯಂ ಮಾಡಲು ಏಕೆ ಮೀನಮೇಷ ಎಂದು ಕಲ್ಮನಿ ಪ್ರಶ್ನಿಸಿದರು.

ವಾರ್ಷಿಕ ರೂ. 5 ಲಕ್ಷಗಳವರೆಗಿನ ಆರೋಗ್ಯವಿಮೆ ಸೌಲಭ್ಯ ಕಲ್ಪಿಸಲಾಗುತ್ತಿದೆ. ಅದಕ್ಕೆ ಪ್ರತಿ ತಿಂಗಳು ಅತಿಥಿ ಉಪನ್ಯಾಸಕರ ಗೌರವಧನದಲ್ಲಿ ರೂ. 400 ಕಡಿತ ಮಾಡಲಾಗುತ್ತದೆ. 10 ತಿಂಗಳು ಕೆಲಸ ಇನ್ನೂ 2 ತಿಂಗಳು ಯಾರು ಕಟ್ಟುತ್ತಾರೆ? ತಿಂಗಳಿಗೆ ಒಂದು ರಜೆ ಸೌಲಭ್ಯ ಕಲ್ಪಿಸಲಾಗಿದೆ. ಅದರಲ್ಲೂ ಸ್ಪಷ್ಟತೆ ಇಲ್ಲ. ಬಹಳಷ್ಟು ಉಪನ್ಯಾಸಕರು ಮನೆ ಬಾಡಿಗೆ ಕಟ್ಟಲಾಗದೆ, ಮಕ್ಕಳ ಶಾಲಾ ಶುಲ್ಕ ಭರಿಸಲಾಗದೆ ಪರಿತಪಿಸುತ್ತಿದ್ದಾರೆ. ಇದಕ್ಕೆಲ್ಲ ಪರಿಹಾರ ಸೇವಾಭದ್ರತೆ ಎಂದು ಸಂಘಟನೆಯ ಮುಖಂಡರು ಒತ್ತಾಯಿಸಿದ್ದಾರೆ.



ವಿಶ್ವಮಾನವ, ರಾಷ್ಟ್ರಕವಿ ಕುವೆಂಪು ಅವರ 119ನೇ ಜಯಂತಿ ಅಂಗವಾಗಿ ಜೆಡಿಎಸ್ ಪಕ್ಷದ ಮುಖಂಡ ಎಚ್.ಕೆ.ರಮೇಶ್, ಕುವೆಂಪು ಪುತ್ಥಳಿಗೆ ಮಾಲಾರ್ಪಣೆ ಮಾಡಿದರು. ಈ ವೇಳೆ ಫಾಲ್ಸನ್ ಬೋರೇಗೌಡ, ಪಿ.ಮಂಜುನಾಥ್, ಆರ್.ಮುದ್ದುರಾಜ್ ಇತರರು ಉಪಸ್ಥಿತರಿದ್ದರು.

ಭಗವದ್ಗೀತೆ ತತ್ವ ಅಳವಡಿಸಿಕೊಂಡರೆ ರಾಮರಾಜ್ಯ ನಿರ್ಮಾಣ

ವಾಗ್ಮಿ ಚಕ್ರವರ್ತಿ ಸೂಲಿಬೆಲೆ ಅಭಿಮತ





ಮೈಸೂರು,ಡಿ.30(ಎಂಟಿವೈ)– ಪ್ರತಿಯೊಬ್ಬರೂ ಭಗವದ್ಗೀತೆಯಲ್ಲಿರುವ ತತ್ವ–ಉಪದೇಶವನ್ನು ಜೀವನದಲ್ಲಿ ಅಳವಡಿಸಿಕೊಂಡರೆ ರಾಮರಾಜ್ಯ ನಿರ್ಮಾಣ ಸಾಧ್ಯ ಎಂದು ವಾಗ್ಮಿ ಚಕ್ರವರ್ತಿ ಸೂಲಿಬೆಲೆ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ವಿಶ್ವೇಶ್ವರನಗರದಲ್ಲಿರುವ ಮಹರ್ಷಿಶ್ರೀ ಪಬ್ಲಿಕ್ ಶಾಲೆಯಲ್ಲಿ ಶನಿವಾರ ಗೀತ ಜಯಂತಿ ಅಂಗವಾಗಿ ಮೈಸೂರು ಧಾರ್ಮಿಕ ಪ್ರತಿಷ್ಠಾನ, ಸಂಸ್ಕೃತ ಭಾರತೀ ಸಂಸ್ಥೆ ಸಹಯೋಗದಲ್ಲಿ ಆಯೋಜಿಸಿದ್ದ ಭಗವದ್ಗೀತೆ ಸಮರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೆಲವರು ಭಗವದ್ಗೀತೆ ಏಕೆ ಬೇಕು? ಸಂಸ್ಕೃತದಲ್ಲಿರುವ ಅದನ್ನು ಓದಿದರೆ ಅರ್ಥವಾಗುತ್ತದೆಯೇ? ಶ್ಲೋಕಗಳ ಕಂಠಪಾಠದಿಂದ ಏನು ಪ್ರಯೋಜನ? ಎಂಬ ಪ್ರಶ್ನೆಗಳನ್ನು ಕೇಳುತ್ತಾರೆ. ಚಿಕ್ಕ ವಯಸ್ಸಿನಲ್ಲಿ ಓದಿದ ಭಗವದ್ಗೀತೆ ಭವಿಷ್ಯದಲ್ಲಿ ಪ್ರಯೋಜನಕ್ಕೆ ಬರಲಿದೆ. ಇದುವೇ ಜೀವನ ಕಟ್ಟಿಕೊಳ್ಳಲು ನೆರವಾಗಲಿದೆ. ಸಮಾಜದಲ್ಲಿ ರಾಮರಾಜ್ಯ ನಿರ್ಮಾಣವಾಗಲಿದೆ. ಶ್ರೀ ಗೀತಾ ಅಧ್ಯಯನ ಶ್ರೇಷ್ಠ ಕಾಯಕ. ಅದು ಅದ್ಭುತ ಫಲವನ್ನೇ ಕೊಡುತ್ತದೆ. ಗೀತೆಯ ಪ್ರಖರತೆ ಜೀವನ ವಿಡೀ ತೇಜಸ್ ನೀಡಲಿದೆ. ಸಮಸ್ಯೆಗಳು ಸೃಷ್ಟಿಯಾದಾಗ ಅದನ್ನು ಎದುರಿಸಲು ಭಗವದ್ಗೀತೆ ಉಪಯೋಗಕ್ಕೆ ಬರಲಿದೆ. ವ್ಯಕ್ತಿಯ ಏಳಿಗೆಗೆ ಬೇಕಾದುದ್ದನ್ನು ಭಗವದ್ಗೀತೆ ಕೊಡುತ್ತದೆ. ಅಲ್ಲದೆ, ಜೀವನದ ದಾರಿಯನ್ನೂ ತೋರಿಸುತ್ತದೆ. ಬದುಕೆಂಬ ಪರೀಕ್ಷೆಯಲ್ಲೂ ಜಯ ತಂದುಕೊಡುವ ಶಕ್ತಿ ಭಗವದ್ಗೀತೆಗೆ ಇದೆ ಎಂದು ವಿವರಿಸಿದರು.

> ಇಂಗ್ಲಿಷ್ ಭಾಷೆಯಲ್ಲಿ ದೇವಾರಾಧನೆ ಮಾಡಲು ಸಾಧ್ಯವಿಲ್ಲ. ಅದಕ್ಕಾಗಿ ಮಕ್ಕಳು ಸಂಸ್ಕೃತ ಭಾಷೆಯನ್ನು ಕಲಿಯಬೇಕು. ಪ್ರಸ್ತುತ ಮೊಬೈಲ್ ಹಾವಳಿ ದೊಡ್ಡ ಸಮಸ್ಯೆಯಾಗಿ ಕಾಡುತ್ತಿದೆ. ಯುವ ಜನರು ಸೇರಿದಂತೆ ಬಹುತೇಕರು ಮೊಬೈಲ್‌ನಲ್ಲಿಯೇ ಮುಳುಗಿ ಹೋಗಿದ್ದಾರೆ. ಇದರಿಂದ ಓದುವ ಹವ್ಯಾಸ ಕಡಿಮೆಯಾಗಿದೆ. ಆದ್ದರಿಂದ ಮಕ್ಕಳು ಸೇರಿದಂತೆ ಎಲ್ಲರೂ ಓದುವ ಸಮಯದಲ್ಲಿ ಮೊಬೈಲ್‌ನಿಂದ ದೂರ ಇರಲು ಸಂಕಲ್ಪ ಮಾಡಬೇಕು.
>
> – **ಚಕ್ರವರ್ತಿ ಸೂಲಿಬೆಲೆ,** ವಾಗ್ಮಿ

ಮೈಸೂರಿನ ಇಸ್ಕಾನ್ ಸಂಸ್ಥೆಯ ಉಪಾಧ್ಯಕ್ಷ ಕಾರುಣ್ಯ ಸಾಗರ್ ದಾಸ್ ಮಾತನಾಡಿ, ಭಗವದ್ಗೀತೆ ಓದಿ ಅದರಲ್ಲಿ ತತ್ವ–ಉಪದೇಶವನ್ನು ಪ್ರಾಯೋಗಿಕವಾಗಿ ಜೀವನದಲ್ಲಿ ಮೈಗೂಡಿಸಿಕೊಳ್ಳಬೇಕು. ಇದರಿಂದ ಉತ್ತಮ ವ್ಯಕ್ತಿಗಳು ರೂಪಗೊಳ್ಳಲು ಸಾಧ್ಯವಾಗಲಿದೆ ಎಂದರು.

ಕಾರ್ಯಕ್ರಮದಲ್ಲಿ 30 ಶಾಲೆಯ 3500 ಮಕ್ಕಳು, 2 ಸಾವಿರ ಮಾತೆಯರು ಸಾಮೂಹಿಕವಾಗಿ ಭಗವದ್ಗೀತೆಯ 4 ಮತ್ತು 12 ಅಧ್ಯಾಯವನ್ನು ಪಠಣ ಮಾಡಿ, ಗಮನ ಸೆಳೆದರು.

ಕಾರ್ಯಕ್ರಮದಲ್ಲಿ ಮಹರ್ಷಿ ಶಾಲೆಯ ಅಧ್ಯಕ್ಷರಾದ ಭವಾನಿ ಶಂಕರ್, ಪ್ರತಿಷ್ಠಾನ ಅಧ್ಯಕ್ಷ ಚರಣ್, ಸಂಸ್ಥೆಯ ಪದಾಧಿಕಾರಿಗಳಾದ ಜಿ.ಎಸ್.ಗಣೇಶ್, ಕೋಕಿಲಾ, ರೇಖಾ, ಶರಣ್ ಇನ್ನಿತರರು ಉಪಸ್ಥಿತರಿದ್ದರು.

ಅಯೋಧ್ಯ ರಾಮ ಮಂದಿರದ ಭಾವಚಿತ್ರವುಳ್ಳ ಕ್ಯಾಲೆಂಡರ್ ಬಿಡುಗಡೆ



ಮೈಸೂರು, ಡಿ. 30– ಮೈಸೂರಿನ ಕೆಎಂಪಿಕೆ ಟ್ರಸ್ಟ್ ಹೊರತಂದಿರುವ ಅಯೋಧ್ಯ ರಾಮ ಮಂದಿರ ಭಾವಚಿತ್ರವಿರುವ 2024ರ ಕ್ಯಾಲೆಂಡರನ್ನು ಅವಧೂತ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರು ಬಿಡುಗಡೆ ಮಾಡಿದರು.

ಇದೇ ವೇಳೆ ಅವಧೂತ ದತ್ತಪೀಠದ ಕಿರಿಯ ಶ್ರೀಗಳಾದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಶುಭ ಹಾರೈಸಿದರು.

ಅಲ್ಲದೆ ಅಯೋಧ್ಯೆಯಲ್ಲಿ ಜನವರಿ 22ರಂದು ರಾಮಮಂದಿರ ಉದ್ಘಾಟನೆ ಸಂದರ್ಭ ಕುರಿತು ಅವರು ಮಾತನಾಡಿದರು. ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ಉದ್ಘಾಟನೆ ಇಡೀ ನಾಡಿನ ಜನರ ದಶಕಗಳ ಕನಸು, ಅದು ನನಸಾಗುವ ಶುಭದಿನ ಸಮೀಪಿಸುತ್ತಿದೆ ಎಂದು ಹೇಳಿದರು. ಶ್ರೀ ರಾಮಮಂದಿರ ಉದ್ಘಾಟನೆ, ಶ್ರೀ ರಾಮನ ಮೂರ್ತಿ ಪ್ರತಿಷ್ಠಾಪನೆ ಪುರಸ್ಕರಿಸಿ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಅವಧೂತ ದತ್ತಪೀಠದಲ್ಲಿ ಹಲವು ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ ಎಂದು ತಿಳಿಸಿದರು.

ಶತಶ್ಲೋಕಿ ರಾಮಾಯಣ ಪಾರಾಯಣ, ರಾಮತಾರಕ ಹೋಮ. ರಾಮರಥೋತ್ಸವ ಆಂಜನೇಯಸ್ವಾಮಿಗೆ ವಿಶೇಷ ಅರ್ಚನೆ, ಧ್ವಜಾರೋಹಣ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಭಾರತದಲ್ಲಿ ನಮ್ಮ 80 ಆಶ್ರಮಗಳು ಇವೆ ಅಲ್ಲೂ ಕೂಡ ಈ ಎಲ್ಲಾ ಕಾರ್ಯಕ್ರಮಗಳನ್ನು ಮಾಡುವಂತೆ ತಿಳಿಸಿದ್ದೇವೆ. ಮೈಸೂರಿನ ಜನತೆ ಕೂಡ ಅವರವರ ಮನೆಯ ಮೇಲೆ ರಾಮಧ್ವಜ ಹಾರಿಸಬೇಕೆಂದು ಶ್ರೀದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಸಲಹೆ ನೀಡಿದರು.

ನಿಮ್ಮ ಮನೆಗಳ ಸಮೀಪದಲ್ಲಿ ಇರುವ ರಾಮ ಮಂದಿರಗಳಿಗೆ ಭೇಟಿ ನೀಡಿ ಶ್ರೀರಾಮನ ದರ್ಶನ ಮಾಡಬೇಕು. ಎಲ್ಲರೂ ರಾಮಸ್ಮರಣೆ ಮಾಡಬೇಕು. ಎಲ್ಲರಲ್ಲೂ ರಾಮ ಭಕ್ತಿ ಹೆಚ್ಚಾಗಲಿ ಎಂದು ಶ್ರೀಗಳು ಆಶಿಸಿದರು. ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್, ನಗರಪಾಲಿಕೆ ಮಾಜಿ ಸದಸ್ಯ ಎಂ.ಡಿ. ಪಾರ್ಥಸಾರಥಿ, ಅಪೂರ್ವ ಸುರೇಶ್, ಅಜಯ್ ಶಾಸ್ತ್ರಿ, ವಿಕಾಸ್ ಶಾಸ್ತ್ರಿ, ಜೀವಧಾರ ಗಿರೀಶ್, ಆನಂದ, ತೇಜಸ್ ಕೌಶಿಕ್, ಗಗನ್, ಮೋಹನ್ ಮತ್ತಿತರರು ಹಾಜರಿದ್ದರು.

ಮಹರ್ಷಿ ಪತಂಜಲಿ ಅಷ್ಟಾಂಗ ಯೋಗ ಸೂತ್ರಾವಳಿ ಆಧಾರಿತ ಕ್ಯಾಲೆಂಡರ್ ಬಿಡುಗಡೆ



ಮೈಸೂರು, ಡಿ.30(ಎಂಟಿವೈ)– ಹಿಮಾಲಯ ಪ್ರತಿಷ್ಠಾನ ಹೊರ ತಂದಿರುವ ಮಹರ್ಷಿ ಪತಂಜಲಿ ಅಷ್ಟಾಂಗ ಯೋಗ ಸೂತ್ರಾವಳಿ ಆಧಾರಿತ ನೂತನ ವರ್ಷದ ಯೋಗ ಕ್ಯಾಲೆಂಡರ್ ಬಿಡುಗಡೆ ಸಮಾರಂಭ ಜಿಲ್ಲಾ ಪತ್ರಕರ್ತರ ಭವನದಲ್ಲಿ ಇಂದು ಜರುಗಿತ್ತು.

ಕಾಯಕ್ರಮದಲ್ಲಿ ಸಮಾಜ ಸೇವಕ ಡಾ.ರಘುರಾಂ ವಾಜಪೇಯಿ, ಜಿಎಸ್‌ಎಸ್ ಫೌಂಡೇಷನ್ ಸಂಸ್ಥಾಪಕ ಶ್ರೀಹರಿ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಿದರು.

ಈ ವೇಳೆ ರಘುರಾಂ ವಾಜಪೇಯಿ ಮಾತನಾಡಿ, ಮೈಸೂರು ಯೋಗ ಕಾಶಿ ಹೆಗ್ಗಳಿಕೆಗೆ ಪಾತ್ರವಾಗಿದೆ. ದೇಶ–ವಿದೇಶದಲ್ಲಿ ಯೋಗ ಪಸರಿಸಲು ಅನೇಕರ ಕೊಡುಗೆ ಇದೆ. ಮೈಸೂರಿಗೆ ದೊಡ್ಡ ಯೋಗ ಪರಂಪರೆ ಇದೆ ಆರೋಗ್ಯ ಕಾಪಾಡಿಕೊಳ್ಳಲು ಯೋಗ ಬಹುಮುಖ್ಯ ಪಾತ್ರ ವಹಿಸುತ್ತದೆ. ಅಷ್ಟಾಂಗ ಸೂತ್ರಾವಳಿಯುಳ್ಳ ಕ್ಯಾಲೆಂಡರ್ ಉಪಯುಕ್ತವಾಗಿದೆ ಎಂದರು

ಸಂಸ್ಕೃತ ವಿದುಷಿ ಡಾ.ಕೆ. ಲೀಲಾ ಪ್ರಕಾಶ್ ಮಾತನಾಡಿ, ಯೋಗ ಎಂದರೆ ಸಮನ್ವಯ ಎಂದರ್ಥ. ದೈಹಿಕ ಹಾಗೂ ಮಾನಸಿಕ ಆರೋಗ್ಯಕ್ಕೆ ಶಿಸ್ತು ಅಗತ್ಯ ಇದಕ್ಕೆ ಯೋಗ ನೆರವಾಗಲಿದೆ. ಯೋಗಾಭ್ಯಾಸ ಮಾಡುವುದರಿಂದ ಅನಾರೋಗ್ಯ ಸಮಸ್ಯೆಯಿಂದ ಪಾರಾಗಬಹುದಾಗಿದೆ. ಅನೇಕ ಆರೋಗ್ಯ ಸಮಸ್ಯೆಯನ್ನು ಯೋಗ ನಿವಾರಿಸುತ್ತದೆ. ಈ ಹಿನ್ನೆಲೆಯಲ್ಲಿ ಎಲ್ಲರೂ ಯೋಗಾಭ್ಯಾಸ ಮಾಡಬೇಕು ಎಂದರು.

ಕಾರ್ಯಕ್ರಮದಲ್ಲಿ ನಾಟ್ಯ ಕಲಾವಿದರಾದ ಎಂ.ಕೆ. ಶೋಭ, ಯೋಗಾಚಾರ್ಯ ಪುರುಷೋತ್ತಮ್ ಪರವಾಗಿ ಅವರ ತಾಯಿ ಹಾಗೂ ಯೋಗಾಚಾರ್ಯ ಎಂ. ಮಲ್ಲೇಶ್ ಅವರನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ಕರ್ನಾಟಕ ಕಾವಲು ಪಡೆಯ ರಾಜ್ಯಾಧ್ಯಕ್ಷ ಎಂ. ಮೋಹನ್ ಕುಮಾರ್ ಗೌಡ, ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹಿಮಾಲಯ ಪ್ರತಿಷ್ಠಾನದ ಸಂಸ್ಥಾಪಕ ಎನ್.ಅನಂತ, ಎನ್. ಶ್ರೀಧರ್, ರಮೇಶ್ ಶೆಟ್ಟಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ನಾಳೆ ಭೀಮಾ ಕೋರೆಗಾಂವ್ ವಿಜಯೋತ್ಸವ



ಮೈಸೂರು,ಡಿ.30(ಎಂಟಿವೈ)– ಮೈಸೂರಿನ ಅಶೋಕಪುರಂ ಸಮೀಪದ ಜಯನಗರ ರೈಲ್ವೆ ಗೇಟ್ ಬಳಿ ಜ.1ರಂದು ಸಂಜೆ 6ಕ್ಕೆ ಜೈ ಭೀಮಾ ಕೊರೆಗಾಂವ್ ವಿಜಯೋತ್ಸವ ಸಮಿತಿಯಿಂದ 206ನೇ ಭೀಮಾ ಕೋರೆಗಾಂವ್ ಸಂಭ್ರಮಾಚರಣೆ, ವಾರ್ಷಿಕೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಮಿತಿಯ ಕಾನೂನು ಸಲಹೆಗಾರ ಎಸ್.ಉಮೇಶ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭೀಮಾ ಕೊರೆಗಾಂವ್ ವಿಜಯೋತ್ಸವ ಕಾರ್ಯಕ್ರಮದಲ್ಲಿ ಚಾಮರಾಜನಗರದ ನಳಂದ ಬೌದ್ಧ ವಿಶ್ವವಿದ್ಯಾಲಯದ ಭೋದಿ ದತ್ತ ಬಂತೇಜಿ ಸಾನ್ನಿಧ್ಯ ವಹಿಸಲಿದ್ದು, ಪ್ರಗತಿಪರ ಚಿಂತಕ ನಿಕೇತ್ ರಾಜ್ ಮೌರ್ಯ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಗಾಂಧಿನಗರದ ಉರಿಲಿಂಗ ಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಅಧ್ಯಕ್ಷತೆ ವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಕ್ರಿಶ್ಚಿಯನ್ ಧರ್ಮ ಗುರು ಸೆಲ್ವಕುಮಾರ್, ಮುಸ್ಲಿಂ ಧರ್ಮ ಗುರು ರುಹುಲ್ಲಾ ಶಾಕಾದ್ರಿ, ಮಾಜಿ ಮೇಯರ್ ಪುರುಷೋತ್ತಮ್ ಭಾಗವಹಿಸುವರು. ಅಕ್ಕ ಐಎಎಸ್ ಅಕಾಡೆಮಿ ನಿರ್ದೇಶಕ ಶಿವಕುಮಾರ್ ಮುಖ್ಯ ಭಾಷಣ ಮಾಡಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಭೀಮಾ ಕೊರೆಗಾಂವ್ ವಿಜಯೋತ್ಸವ ಸಮಿತಿ ಕಾರ್ಯದರ್ಶಿ ಜಿ.ರವಿಕುಮಾರ್, ಮಾಧ್ಯಮ ಸಲಹೆಗಾರ ಮಲೆಯೂರು ಸೋಮಯ್ಯ, ಸದಸ್ಯ ಜೈ ಶಂಕರ್, ಸಂಚಾಲಕ ಪ್ರದೀಪ್ ಇದ್ದರು.

ಜ.6, 7ರಂದು 'ಅಭಿಜಾತೆ' ವಿಪ್ರ ಮಹಿಳಾ ಸಮ್ಮೇಳನ



ಮೈಸೂರು, ಡಿ30(ಎಂಟಿವೈ)– ಬೆಂಗಳೂರಿನ ಶೃಂಗೇರಿ ಶಂಕರ ಮಠ ಆವರಣದಲ್ಲಿ ಜ.6ರಿಂದ 7ರವರೆಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವತಿಯಿಂದ 'ಅಭಿಜಾತೆ' ರಾಜ್ಯಮಟ್ಟದ ತೃತೀಯ ವಿಪ್ರ ಮಹಿಳಾ ಸಮ್ಮೇಳನ ನಡೆಯಲಿದೆ ಎಂದು ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಪ್ರ ಮಹಿಳೆಯರು ಎದುರಿಸುತ್ತಿರುವ ಅನೇಕ ಸವಾಲುಗಳ ಬಗ್ಗೆ ಚರ್ಚಿಸಲು ಈ ಸಮ್ಮೇಳನ ಆಯೋಜಿಸಲಾಗಿದೆ. ವಿಪ್ರ ಮಹಿಳೆಯರಿಗೆ ಸೂಕ್ತ ವೇದಿಕೆ ನಿರ್ಮಿಸಿ, ಅವರಲ್ಲಿರುವ ಪ್ರತಿಭೆ ಅನಾವರಣ ಗೊಳಿಸುವ ನಿಟ್ಟಿನಲ್ಲಿ ಮಹಿಳಾ ಸಮ್ಮೇಳನ ಸಹಕಾರಿಯಾಗಲಿದೆ. ಸಂಘಟನಾ ಶಕ್ತಿ ಹಾಗೂ ಸಾಮಾಜಿಕ ಬದ್ಧತೆಗೆ ಸ್ಫೂರ್ತಿ ತುಂಬುವ ಉದ್ದೇಶದಿಂದ ಸಮ್ಮೇಳನ ನಡೆಯುತ್ತಿದೆ ಎಂದರು.

ಸಮ್ಮೇಳನವನ್ನು ಜ.6ರಂದು ಬೆಳಿಗ್ಗೆ 8ಕ್ಕೆ ಕೇಂದ್ರದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಉದ್ಘಾಟಿಸಲಿದ್ದಾರೆ. ಶೃಂಗೇರಿ ಮಠದ ಆಡಳಿತಾಧಿಕಾರಿ ವಿ.ಆರ್.ಗೌರಿಶಂಕರ್ ಸ್ಮರಣ ಸಂಚಿಕೆ ಬಿಡುಗಡೆ ಮಾಡಲಿದ್ದಾರೆ. ಸಂಸದ ಎಲ್.ಎಸ್.ತೇಜಸ್ವಿ ಸೂರ್ಯ ಮಳಿಗೆಗಳನ್ನು ಉದ್ಘಾಟನೆ ಮಾಡುವರು. ವಿವಿಧ ವೇದಿಕೆಗಳಲ್ಲಿ ವಿಚಾರಗೋಷ್ಠಿ, ಸಾಂಸ್ಕೃತಿಕ ಕಾರ್ಯಕ್ರಮ, ಶೋಭಾ ಯಾತ್ರೆಗಳು ನಡೆಯಲಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘ ಪ್ರಕಟಿಸಿರುವ 2024ನೇ ಸಾಲಿನ ಕ್ಯಾಲೆಂಡರ್ ಅನ್ನು ಬಿಡುಗಡೆ ಮಾಡಲಾಯಿತು. ಈ ಸಂದರ್ಭದಲ್ಲಿ ಮಹಿಳಾ ಘಟಕದ ಉಪಾಧ್ಯಕ್ಷ ಲಕ್ಷ್ಮಿ ದೇವಿ, ಬ್ರಾಹ್ಮಣ ಸಂಘದ ಸದಸ್ಯರಾದ ಹರೀಶ್, ಬಾಲಕೃಷ್ಣ, ಗೋಪಾಲರಾವ್, ಸುಚೆಂದ್ರ, ವಿಕ್ರಂ ಅಯ್ಯಂಗಾರ್, ಅಜಯ್ ಶಾಸ್ತ್ರಿ ಹಾಗೂ ಇನ್ನಿತರರು ಇದ್ದರು.

ಆಟೋ ಡಿಕ್ಕಿ: ಗೃಹಿಣಿ ಸಾವು

ಮೈಸೂರು, ಡಿ. 30– ಪ್ಯಾಸೆಂಜರ್ ಆಟೋ ಡಿಕ್ಕಿ ಹೊಡೆದ ಪರಿಣಾಮ ರಸ್ತೆ ದಾಟುತ್ತಿದ್ದ ಗೃಹಿಣಿ ಸಾವನ್ನಪ್ಪಿದ ಘಟನೆ ಮೈಸೂರು–ನಂಜನಗೂಡು ರಸ್ತೆಯಲ್ಲಿ ಗುಂಡೂರಾವ್‌ನಗರದ ಬಳಿ ಸಂಭವಿಸಿದೆ. ಮೈಸೂರು ತಾಲೂಕು ಮಂಡಕಳ್ಳಿ ಗ್ರಾಮದ ಪುಟ್ಟಬಸಮ್ಮ(52) ಅಪಘಾತದಲ್ಲಿ ಸಾವನ್ನಪ್ಪಿದವರಾಗಿದ್ದು, ಇವರು ಡಿ. 29ರಂದು ಮಧ್ಯಾಹ್ನ 12.45ರ ಸುಮಾರಿನಲ್ಲಿ ಗುಂಡೂರಾವ್‌ನಗರದ ಬಳಿ ರಸ್ತೆ ದಾಟುತ್ತಿದ್ದಾಗ ಪ್ಯಾಸೆಂಜರ್ ಆಟೋ (ಕೆಎ 09–ಎಎ 3441) ಡಿಕ್ಕಿ ಹೊಡೆದ ಪರಿಣಾಮ ಮೃತಪಟ್ಟಿದ್ದಾರೆ. ಈ ಸಂಬಂಧ ಕೆ.ಆರ್. ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಇಂಡಿಯನ್ ಯೋಗ ಥೆರಪಿಸ್ಟ್ ಅಸೋಸಿಯೇಷನ್ ವತಿಯಿಂದ ಉತ್ತರ ಪ್ರದೇಶದ ಕಾನ್ಪುರದಲ್ಲಿ ಇತ್ತೀಚೆಗೆ ನಡೆದ ಇಂಟರ್ ನ್ಯಾಷನಲ್ ಯೋಗ ಪ್ರೈಮ್ ಅವಾರ್ಡ್ ಸಮಾರಂಭದಲ್ಲಿ 25 ವರ್ಷಗಳಿಂದ ಯೋಗ ಸೇವೆಯಲ್ಲಿರುವ ಮೈಸೂರಿನ ಡಾ.ಕೃಷ್ಣವೇಣಿ ಶ್ರೀಧರ್ ಅವರಿಗೆ 'ಸ್ವಾಮಿ ಶಿವಾನಂದ ಸರಸ್ವತಿ ಯೋಗ ಸಮ್ಮಾನ್' ಪ್ರಶಸ್ತಿ ಪ್ರದಾನ ಮಾಡಿ, ಗೌರವಿಸಲಾಯಿತು.

ಒಂದನೇ ಪುಟದಿಂದ

ವಿದ್ಯಾರ್ಥಿಗಳು ಜಲಸಮಾಧಿ

ತೀತಿಮಾಡ ಸದನ್, ತೀತಿಮಾಡ ಸುಗುಣ ಸಹಾಯದಿಂದ ಮೃತದೇಹಗಳನ್ನು ಮೇಲೆತ್ತಿದ್ದಾರೆ. ಮಹಜರು ನಡೆಸಿದ ಬಳಿಕ ಮರಣೋತ್ತರ ಪರೀಕ್ಷೆಗಾಗಿ ಮೃತದೇಹಗಳನ್ನು ಗೋಣಿಕೊಪ್ಪ ಸರಕಾರಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ.

ಘಟನಾ ಸ್ಥಳಕ್ಕೆ ಗೋಣಿಕೊಪ್ಪ ಠಾಣಾಧಿಕಾರಿ ಬಿ.ಎಸ್. ರೂಪಾದೇವಿ, ಪೊನ್ನಂಪೇಟೆ ಠಾಣಾಧಿಕಾರಿ ನವೀನ್, ಶ್ರೀಮಂಗಲ ಠಾಣಾಧಿಕಾರಿ ಶಿವಾನಂದ್ ಮತ್ತು 3 ಠಾಣೆಗಳ ಸಿಬ್ಬಂದಿ ಪರಿಶೀಲನೆ ನಡೆಸಿದರು. ಘಟನೆ ಕುರಿತು ಪೊನ್ನಂಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗಿದೆ.

ಸಂಕ್ರಾಂತಿ ವೇಳೆಗೆ ನಿಗಮ ಮಂಡಳಿಗೆ ನೇಮಕಾತಿ

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಕ್ಷದ ಕಾರ್ಯಕರ್ತರಿಗೆ ಸೂಕ್ತ ಸ್ಥಾನಮಾನದ ವ್ಯವಸ್ಥೆ ಮಾಡ ಲಾಗುವುದು. ಈ ಕುರಿತು ಎಲ್ಲಾ ನಾಯಕರು ಒಂದೆಡೆ ಕುಳಿತು ಚರ್ಚೆ ಮಾಡುತ್ತೇವೆ. ನೇಮಕಾತಿ ಪಟ್ಟಿ ಒಂದು ಹಂತಕ್ಕೆ ಬಂದಿದೆ, ಪಕ್ಷದ ಕೇಂದ್ರ ನಾಯಕರು ಸಹ ಕೆಲ ವರಿಗೆ ಅಧಿಕಾರ ನೀಡುವ ವಾಗ್ದಾನ ಮಾಡಿದ್ದಾರೆ, ಸಂಕ್ರಾಂತಿ ವೇಳೆಗೆ ನೇಮಕ ಆಗುವ ನಿರೀಕ್ಷೆ ಇದೆ ಎಂದರು. ಜನ ಸಾಮಾನ್ಯರು

ತಮ್ಮ ಕಷ್ಟಗಳನ್ನು ಹೇಳಿಕೊಂಡು ಮನೆ ಬಾಗಿಲಿಗೆ ಬರುತ್ತಿದ್ದಾರೆ. ಅವರ ಕಷ್ಟಗಳನ್ನು ಕೇಳಲು ನಾವೇ ಅವರ ಬಳಿ ಹೋಗಬೇಕು, ಅವರ ಒತ್ತಡ ಕಡಿಮೆ ಮಾಡುವ ಉದ್ದೇಶದಿಂದ 'ಬಾಗಿಲಿಗೆ ಬಂತು ಸರಕಾರ, ಸೇವೆಗೆ ಇರಲಿ ಸಹಕಾರ' ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ಮುಂದಿನ ತಿಂಗಳು ದಿನಕ್ಕೆ ಎರಡು ಅಥವಾ ಮೂರು ವಿಧಾನಸಭಾ ಕ್ಷೇತ್ರಗಳಂತೆ ಬೆಂಗಳೂರಿನ 28 ಕ್ಷೇತ್ರಗಳ ಜನರ ಅಹವಾಲು ಸ್ವೀಕರಿಸಿ, ಸಮಸ್ಯೆಗಳಿಗೆ ಪರಿಹಾರ ನೀಡುವ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ದೆಹಲಿ ಹಾಗೂ ಇತರೆಡೆ ಪ್ರವಾಸ ವೇಳೆ ಕಾರ್ಯಕ್ರಮಕ್ಕೆ ಬಿಡುವು ನೀಡಲಾಗುವುದು.

ಅಹವಾಲು ಸ್ವೀಕಾರ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಸ್ಥಳೀಯ ಶಾಸಕರು ಹಾಗೂ ಸಂಸದರಿಗೆ ಆಹ್ವಾನ ನೀಡುತ್ತೇವೆ ಎಂದರು. ಲೋಕಸಭೆ ಚುನಾವಣೆ ಸಿದ್ಧತೆ ಕುರಿತು ಚರ್ಚಿಸಲು ಜನವರಿ 10ರಂದು ಪಕ್ಷದ ನಾಯಕರು, ಶಾಸಕರು, ಎಐಸಿಸಿ ನಾಯಕರ ಜತೆ ಸಭೆ ಮಾಡುತ್ತೇವೆ. ಲೋಕಸಭೆ ಚುನಾವಣೆಗೆ ಸಂಬಂಧಿಸಿದಂತೆ ಪಕ್ಷದ ಸಭೆ ಇದೆ. ಅಭ್ಯರ್ಥಿ ಕುರಿತು ಕೆಲವು ಸಚಿವರು ವರದಿ ನೀಡಿದ್ದಾರೆ. ಅದರ ಸಮೀಕ್ಷೆ ನಡೆಸಬೇಕಿದೆ. ಈ ವಿಚಾರ ಚರ್ಚಿಸಲು ಜನವರಿ 4ರಂದು ದೆಹಲಿಗೆ ತೆರಳುತ್ತಿದ್ದೇವೆ. ಸಚಿವ ಮಧು ಬಂಗಾರಪ್ಪ ವಿರುದ್ಧದ ಕೋರ್ಟ್ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿ, ವ್ಯಾಪಾರ–ವ್ಯವಹಾರದಲ್ಲಿ ಹೆಚ್ಚುಕಮ್ಮಿ ಆಗುತ್ತದೆ. ಪ್ರಕರಣ ಏನೆಂಬ ಬಗ್ಗೆ ಗಮನ ಹರಿಸುತ್ತೇವೆ ಎಂದರು. ಅಲ್ಪಸಂಖ್ಯಾತರಿಗೆ ಸಾವಿರ ಕೋಟಿ ರೂ. ಕ್ರಿಯಾಯೋಜನೆ ನೀಡುವುದರಲ್ಲಿ ತಪ್ಪೇನಿದೆ, 224 ಕ್ಷೇತ್ರಗಳಿಗೆ ಅನುದಾನ ಹಂಚಿದರೆ ಎಷ್ಟು ಸಿಗುತ್ತದೆ. ಈ ಸಮುದಾಯವರು ಹೆಚ್ಚಾಗಿ ನಗರ ಪ್ರದೇಶಗಳಲ್ಲಿ ವಾಸವಿದ್ದಾರೆ. ಮುಖ್ಯಮಂತ್ರಿ ಉತ್ತಮ ನಿರ್ಧಾರ ಕೈಗೊಂಡಿದ್ದಾರೆ ಎಂದರು. ಬಿಜೆಪಿ ಓಲೈಕೆ ರಾಜಕಾರಣದ ಬಗ್ಗೆ ಟೀಕೆ ಮಾಡುತ್ತಿರಲಿ. ನಾವು ಬಡವರ ಪರ ಕೆಲಸ ಮಾಡುತ್ತಿರುತ್ತೇವೆ. ಚಂದ್ರಬಾಬು ನಾಯ್ಡು ಅವರೊಂದಿಗಿನದು ಸೌಜನ್ಯದ ಭೇಟಿ ಎಂದರು.

ಬಿಜೆಪಿಯಿಂದ ಶ್ರೀರಾಮನ ವರ್ಣಚಿತ್ರ, ಮಂತ್ರಾಕ್ಷತೆ ಮೂಲಕ ಚುನಾವಣಾ ಪ್ರಚಾರ: ಕಾಂಗ್ರೆಸ್ ಆರೋಪ



ಮೈಸೂರು, ಡಿ.30(ಎಂಟಿವೈ)– ಮುಂಬರುವ ಲೋಕಸಭಾ ಚುನಾವಣೆಗಾಗಿ ಬಿಜೆಪಿಯವರು ಈಗಾಗಲೇ ಶ್ರೀರಾಮನ ವರ್ಣಚಿತ್ರ, ಮಂತ್ರಾಕ್ಷತೆ ಹಿಡಿದು ಮತ ಯಾಚನೆ ಆರಂಭಿಸಿದ್ದಾರೆ ಎಂದು ಮೈಸೂರು ನಗರ ಕಾಂಗ್ರೆಸ್ ಪರಿಶಿಷ್ಟ ಜಾತಿ ವಿಭಾಗದ ಮಾಧ್ಯಮ ವಕ್ತಾರ ಬಸವರಾಜು ಮಗಧ ಆರೋಪಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಲೋಕಸಭೆ ಚುನಾವಣೆ ಇನ್ನು 5–6 ತಿಂಗಳು ಇದೆಯಾದರೂ, ಈಗಾಗಲೇ ಬಿಜೆಪಿಗರು ಧರ್ಮದ ಹೆಸರು ಹಾಗೂ ಧಾರ್ಮಿಕ ಭಾವನೆಯೊಂದಿಗೆ ಪ್ರಚಾರ ಆರಂಭಿಸಿದ್ದಾರೆ. ಆಯೋಧ್ಯೆ, ಶ್ರೀರಾಮ ಮಂದಿರ, ಶ್ರೀರಾಮನ ಚಿತ್ರ ಹಾಗೂ ಮಂತ್ರಾಕ್ಷತೆ ನೀಡುವ ಮೂಲಕ ಬಿಜೆಪಿ ಪರ ಮತಯಾಚನೆಯಲ್ಲಿ ತೊಡಗಿದ್ದಾರೆ. ಆದರೆ ಕಾಂಗ್ರೆಸ್ ನುಡಿದಂತೆ ನಡೆದಿರುವ ಸರ್ಕಾರದ ಯೋಜನೆ, ಅಭಿವೃದ್ಧಿ ಕಾರ್ಯ ತಿಳಿಸುವ ಕೆಲಸ ಮಾಡಲಿದೆ. ಕಾಂಗ್ರೆಸ್‌ನ ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರನ್ನು ಪ್ರಧಾನಿ ಅಭ್ಯರ್ಥಿಯನ್ನಾಗಿಸಲು ವಿರೋಧ ಪಕ್ಷಗಳ ಮೈತ್ರಿ ಕೂಟ ಮುಂದಾಗಿದೆ. ಇದಕ್ಕೆ ತಮ್ಮ ಬೆಂಬಲವಿದೆ ಎಂದರು.

ಬಿಜೆಪಿಯವರು ಕೊವಿಡ್ ವೇಳೆ 45 ರೂ., ಮಾಸ್ಕ್‌ಗೆ 450 ರೂ., ಬಿಲ್ ಮಾಡಿರುವುದು, ಬೆಂಗಳೂರಲ್ಲಿ ಕೊರೊನಾ ಸೋಂಕಿತರಿಗೆ ಹಾಸಿಗೆಯನ್ನು ಬಾಡಿಗೆ ಪಡೆದಿರುವುದು ಸೇರಿದಂತೆ ವಿವಿಧ ರೂಪದಲ್ಲಿ ಬಿ.ಎಸ್.ಯಡಿಯೂರಪ್ಪ ನೇತೃತ್ವದ ಸರ್ಕಾರದಲ್ಲಿ ಸುಮಾರು 40 ಸಾವಿರ ಕೋಟಿ ಅವ್ಯವಹಾರ ನಡೆದಿದೆ ಎಂದು ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್ ಆರೋಪಿಸಿದ್ದಾರೆ. ಈ ಕುರಿತು ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಕಾಂಗ್ರೆಸ್ ಶೋಷಿತರು, ದಲಿತರು, ಹಿಂದುಳಿದವರು ಹಾಗೂ ದುರ್ಬಲರ ಪರ ಇರುವುದನ್ನು ಮತದಾರರಿಗೆ ಮನವರಿಕೆ ಮಾಡಿಕೊಡಲಾಗುವುದು. ಸಂವಿಧಾನ ಉಳಿವಿಗಾಗಿ ಕಾಂಗ್ರೆಸ್ ಪಕ್ಷವನ್ನು ಕೇಂದ್ರದಲ್ಲಿ ಅಧಿಕಾರಕ್ಕೆ ತರಬೇಕೆಂದು ಮನವರಿಕೆ ಮಾಡಿಕೊಡುವುದಾಗಿ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಅಧ್ಯಕ್ಷ ಕೆ.ರಮೇಶ್, ಪದಾಧಿಕಾರಿಗಳಾದ ರಾಕೇಶ್, ಜಗದೀಶ್, ಶೇಖರ್, ಸುಶೀಲಾ ದೇವರಾಜು, ವನಜಾಕ್ಷಿ ಇದ್ದರು.

ನೇರ ಪಾವತಿ ಪೌರಕಾರ್ಮಿಕರ ಖಾಯಂಗೆ ಒತ್ತಾಯ

ಮೈಸೂರು,ಡಿ.30(ಎಂಟಿವೈ)– ರಾಜ್ಯದ ವಿವಿಧ ಸ್ಥಳೀಯ ಸಂಸ್ಥೆಗಳಲ್ಲಿ ನೇರ ಪಾವತಿ ಆಧಾರದಲ್ಲಿ ಸೇವೆ ಸಲ್ಲಿಸುತ್ತಿರುವ ಪೌರ ಕಾರ್ಮಿಕರನ್ನು ಖಾಯಂ ಮಾಡುವುದರೊಂದಿಗೆ, ಮರಣ ಹೊಂದಿದರೆ ಕಾರ್ಮಿಕರ ಕುಟುಂಬದ ಸದಸ್ಯರಿಗೆ 10 ಲಕ್ಷ ರೂ. ಪರಿಹಾರ ನೀಡುವುದೂ ಸೇರಿದಂತೆ ವಿವಿಧ ಬೇಡಿಕೆ ಈಡೇರಿಸುವಂತೆ ಮ್ಯಾನ್ಯುವಲ್ ಸ್ಕ್ಯಾವೆಂಜರ್ಸ್ ಮೇಲುಸ್ತುವಾರಿ ಸಮಿತಿಯ ಮಾಜಿ ಸದಸ್ಯ ಎಂ.ವಿ.ವೆಂಕಟೇಶ್ ಮನವಿ ಮಾಡಿದ್ದಾರೆ.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೇರ ಪಾವತಿ ವ್ಯವಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿರುವ ಪೌರಕಾರ್ಮಿಕರಿಗೆ ಯಾವುದೇ ಸೌಲಭ್ಯ ದೊರೆಯುತ್ತಿಲ್ಲ. ಕಳೆದ ಬಿಜೆಪಿ ಸರ್ಕಾರ ಗುತ್ತಿಗೆ ಆಧಾರದಲ್ಲಿ ಸೇವೆ ಸಲ್ಲಿಸುತ್ತಿದ್ದ ಪೌರಕಾರ್ಮಿಕರನ್ನು ಖಾಯಂ ಮಾಡಲು ಆದೇಶ ಹೊರಡಿಸಿತ್ತು. ರಾಜ್ಯದಾದ್ಯಂತ ವಿವಿಧ ಸ್ಥಳೀಯ ಸಂಸ್ಥೆಗಳಲ್ಲಿ ಇಂದಿಗೂ ನೇರ ಪಾವತಿ ವ್ಯವಸ್ಥೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ವ್ಯವಸ್ಥೆಯಲ್ಲಿ ಕೆಲಸ ಮಡುವವರಿಗೆ ಯಾವುದೇ ಸೌಲಭ್ಯ ಸಿಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಖಾಯಂ ನೌಕರರಿಗೆ ನೀಡುವ ವಿವಿಧ ಸೌಲಭ್ಯವನ್ನು ನೇರಪಾವತಿ ವ್ಯವಸ್ಥೆಯಲ್ಲಿ ಕೆಲಸ ಮಾಡುವವರಿಗೂ ನೀಡಬೇಕು. ಎಲ್ಲರನ್ನು ಖಾಯಂ ಮಾಡಬೇಕು ಎಂದು ಆಗ್ರಹಿಸಿದರು.

ರಾಜ್ಯಾದ್ಯಂತ ನೇರ ಪಾವತಿಯಲ್ಲಿ ಸೇವೆ ಸಲ್ಲಿಸುತ್ತಿರುವ ಪೌರಕಾರ್ಮಿಕರು ಮರಣ ಹೊಂದಿದರೆ ಅವರ ಕುಟುಂಬಸ್ಥರಿಗೆ ಉದ್ಯೋಗ ಹಾಗೂ ಹತ್ತು ಲಕ್ಷ ಪರಿಹಾರ ನೀಡಬೇಕು. ರಾಜ್ಯಾದ್ಯಂತಹ ನಿವೃತ್ತಿ ಹೊಂದಿದ ಪೌರಕಾರ್ಮಿಕರಿಗೆ ಸರ್ಕಾರ ಅಥವಾ ಸ್ಥಳೀಯ ಸಂಸ್ಥೆ ವತಿಯಿಂದ ಪ್ರತಿ ತಿಂಗಳಿಗೆ 10 ಸಾವಿರ ರೂ., ಪಿಂಚಣಿ ರೂಪದಲ್ಲಿ ನೀಡಬೇಕು. ಮೈಸೂರು ನಗರ ಪಾಲಿಕೆಯಲ್ಲಿ ಸುಮಾರು ಐದಾರು ವರ್ಷಗಳಿಂದ ಸೇವೆ ಸಲ್ಲಿಸಿರುವವರಲ್ಲಿ ಕೈಬಿಟ್ಟಿರುವ 78 ಪೌರಕಾರ್ಮಿಕರಿಗೆ ನ್ಯಾಯ ಒದಗಿಸಬೇಕು. ಪೌರಕಾರ್ಮಿಕರ ಅವಲಂಬಿತರ ಕಲ್ಯಾಣಕ್ಕಾಗಿ ಪೌರಕಾರ್ಮಿಕ ಮಂಡಲಿ ರಚನೆ ಮಾಡಬೇಕು. ಕಸ ಸಾಗಾಣಿಕೆ ವಾಹನ ಚಾಲಕರು, ಲೋಡರ್ಸ್, ಕ್ಲೀನರ್ಸ್‌ಗಳಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು. ಐಪಿಡಿ ಸಾಲಪ್ಪ ವರದಿ ಅನುಷ್ಠಾನಗೊಳಿಸಬೇಕು. ರಾಜ್ಯಾದ್ಯಂತ ನಗರ ಪಾಲಿಕೆಗಳಲ್ಲಿರುವ 544 ಒಳಚರಂಡಿ ಕಾರ್ಮಿಕರನ್ನು ಖಾಯಂ ಮಾಡಬೇಕು. ಇಲ್ಲದಿದ್ದರೆ ಮೈಸೂರಿನ ಮುಖ್ಯಮಂತ್ರಿ ನಿವಾಸದ ಮುಂದೆ ಪ್ರತಿಭಟಿಸುವುದಾಗಿ ತಿಳಿಸಿದರು.

● ಎಸ್.ಟಿ.ರವಿಕುಮಾರ್

ದೊಡ್ಡ ಗಡಿಯಾರ ಸಂರಕ್ಷಣೆ





“ನಾಲ್ವಡಿ ಕೃಷ್ಣರಾಜ ಒಡೆಯರ್ ಆಳ್ವಿಕೆಯ 25ನೇ ವರ್ಷದ ನೆನಪಿಗಾಗಿ ರಂಗಾಚಾರ್ಲು ಪುರಭವನದ ಮುಂದೆ 75 ಅಡಿ ಎತ್ತರದ ಈ ದೊಡ್ಡ ಗಡಿಯಾರವನ್ನು ಸ್ಥಾಪಿಸಲು ಮಹಾ ರಾಜರು ನಿರ್ಧರಿಸಿದ್ದರು. ನಾಲ್ವಡಿಯವರ ಆಳ್ವಿಕೆಯ 25ನೇ ವರ್ಷದ ಸವಿನೆನಪಿನ ಸಿಲ್ವರ್ ಜ್ಯೂಬಿಲಿ ಕ್ಲಾಕ್ ಟವರ್ ನಿರ್ಮಾಣಕ್ಕೆ ಅರಮನೆ ಸಿಬ್ಬಂದಿಯೂ ಕೂಡ ಸ್ವಯಂ ಪ್ರೇರಿತರಾಗಿ ದೇಣಿಗೆ ನೀಡಿ ದ್ದರು. 1927ರ ಆಗಸ್ಟ್ 8ರಂದು ಈ ಪಾರಂಪರಿಕ ಸಿಲ್ವರ್ ಜ್ಯೂಬಿಲಿ ಕ್ಲಾಕ್ ಟವರ್ ಕಾರ್ಯಾರಂಭವಾಯಿತು. ಖ್ಯಾತ ವಾಸ್ತುಶಿಲ್ಪಿಗಳ ಸಹಕಾರದೊಂದಿಗೆ ನಿರ್ಮಿಸಲಾದ 75 ಅಡಿ ಎತ್ತರದ ಈ ಕ್ಲಾಕ್ ಟವರ್‌ನ ನಾಲ್ಕು ಕಡೆಯೂ ವೃತ್ತಾಕಾರದ ಗಡಿಯಾರವಿದ್ದು, 94 ವರ್ಷಗಳ ಹಿಂದೆಯೇ ಕನ್ನಡ ಅಂಕಿಗಳೊಂದಿಗೆ ನಮ್ಮ ನಾಡಿನ ಸಂಸ್ಕೃತಿ ಹಾಗೂ ಭಾಷಾಭಿಮಾನವನ್ನು ಬಿಂಬಿಸುವಂತೆ ಈ ದೊಡ್ಡ ಗಡಿಯಾರವನ್ನು ನಿರ್ಮಿಸಲಾಗಿತ್ತು. ಪ್ರತಿ ಗಂಟೆಗೊಮ್ಮೆ ಈ ಗಡಿಯಾರ ಗಂಟೆ ಬಾರಿಸುತ್ತಿದ್ದು, ಅದರ ಶಬ್ದ ಆಗ 5 ಕಿ.ಮೀ. ಸುತ್ತಳತೆಯಲ್ಲಿ ಕೇಳಿಸುತ್ತಿತ್ತು. ಕಾಲ ಕ್ರಮೇಣ ಈ ಗಡಿಯಾರವು ದುರಸ್ತಿಗೊಳಗಾಗಿದ್ದು, 1990ರ ನಂತರ ಗಡಿಯಾರ ತನ್ನ ಶಬ್ದವನ್ನು ನಿಲ್ಲಿಸಿ ತಾದರೂ, ಸಮಯವನ್ನು ಮಾತ್ರ ಸರಿಯಾಗಿ ತೋರಿಸುತ್ತಿತ್ತು.

ಮೈಸೂರಿನ ಹೃದಯ ಭಾಗದಲ್ಲಿರುವ ಐತಿಹಾಸಿಕ ದೊಡ್ಡ ಗಡಿಯಾರದ ಸಂರಕ್ಷಣಾ ಕಾಮಗಾರಿ ಕೊನೆಗೂ ಆರಂಭವಾಗಿದೆ. ರಂಗಾಚಾರ್ಲು ಪುರಭವನದ ಎದುರು 75 ಅಡಿ ಎತ್ತರದ ಆಕರ್ಷಕ ಈ ದೊಡ್ಡ ಗಡಿಯಾರದ ಮೇಲ್ಭಾಗದಲ್ಲಿ ಬಿರುಕು ಬಿಟ್ಟಿತ್ತು. ಒಳಭಾಗ ಶಿಥಿಲಾವಸ್ಥೆ ತಲುಪಿತ್ತು. ಅದನ್ನು ಹಾಗೆಯೇ ಬಿಟ್ಟರೆ ಈ ಗಡಿಯಾರ ಕುಸಿದು ಬೀಳಬಹುದು ಎಂಬ ಆತಂಕ ನಾಗರಿಕರನ್ನು ಅದರಲ್ಲೂ ಪಾರಂಪರಿಕ ಪ್ರಿಯರನ್ನು ಕಾಡುತ್ತಿತ್ತು.

ಈಗ ಮೈಸೂರು ಮಹಾನಗರ ಪಾಲಿಕೆಯ 42 ಲಕ್ಷ ರೂ. ಅನುದಾನದಲ್ಲಿ ಈ ಗಡಿಯಾರದ ಸಂರಕ್ಷಣಾ ಕಾರ್ಯ ಆರಂಭಿಸಲಾಗಿದೆ. ಪುರಾತತ್ವ, ಸಂಗ್ರಹಾಲಯಗಳು ಹಾಗೂ ಪರಂಪರೆ ಇಲಾಖೆಯು ನುರಿತ ಪಾರಂಪರಿಕ ಕಟ್ಟಡ ನಿರ್ಮಾಣ ಸಂಸ್ಥೆಗೆ ದೊಡ್ಡ ಗಡಿಯಾರದ ಸಂರಕ್ಷಣಾ ಕಾಮಗಾರಿಯನ್ನು ವಹಿಸಿದೆ. 1927ರಲ್ಲಿ ನಿರ್ಮಾಣಗೊಂಡ ಈ ದೊಡ್ಡ ಗೋಪುರದ ಮೂಲ ರೂಪ, ವಿನ್ಯಾಸಕ್ಕೆ ಯಾವುದೇ ರೀತಿ ಧಕ್ಕೆ ಬಾರದಂತೆ ಹಾಗೂ ಆಗ ಬಳಸಿದ್ದ ವಸ್ತುಗಳನ್ನೇ ಬಳಸಿ ಈ ಪಾರಂಪರಿಕ ದೊಡ್ಡ ಗಡಿಯಾರವನ್ನು ಸಂರಕ್ಷಿಸುವ ಮಹತ್ಕಾರ್ಯ ಆರಂಭಗೊಂಡಿದೆ. ಈ ಕಾಮಗಾರಿಯ ಗುತ್ತಿಗೆ ಪಡೆದಿರುವ ರಾಮಚಂದ್ರೇಗೌಡ ಎಂಬುವರು ಕಾಮಗಾರಿ ನಡೆಸಲು ಅನುವಾಗುವಂತೆ ಗಡಿಯಾರದ ಸುತ್ತ ಕಬ್ಬಿಣದ ಕಾಲಾವಧಿ ನಿರ್ಮಿಸಿರುವುದಲ್ಲದೆ, ಅದರ ಸುತ್ತ ಸುರಕ್ಷತಾ ಬಲೆ ಅಳವಡಿಸುತ್ತಿದ್ದಾರೆ. 75 ಅಡಿ ಎತ್ತರದ ಈ ಗಡಿಯಾರದ ಸಂರಕ್ಷಣಾ ಕಾಮಗಾರಿ ನಡೆಯುವ ವೇಳೆ ಯಾವುದೇ ರೀತಿಯ ಅನಾಹುತ ಸಂಭವಿಸದಂತೆ ಹಾಗೂ ಕಾಮಗಾರಿ ನಡೆಯುವ ವೇಳೆ ಕಟ್ಟಡದ ತ್ಯಾಜ್ಯ ರಸ್ತೆಯಲ್ಲಿ ಸಂಚರಿಸುವ ವಾಹನಗಳು ಹಾಗೂ ಪಾದಚಾರಿಗಳ ಮೇಲೆ ಬೀಳದೇ ಇರಲು ಈ ಸುರಕ್ಷತಾ ಕ್ರಮವನ್ನು ಕೈಗೊಳ್ಳಲಾಗಿದೆ.

ಶಿಥಿಲಾವಸ್ಥೆ ತಲುಪಿರುವ ದೊಡ್ಡ ಗಡಿಯಾರದ ಪ್ಲಾಸ್ಟಿಂಗ್ ತೆರವುಗೊಳಿಸಿ, ಮೂಲ ಲೈಮ್ ಮಾರ್ಟರ್ ಹಾಗೂ ತಂತ್ರಜ್ಞಾನ ಅಳವಡಿಸಿಕೊಂಡು ಈ ಕ್ಲಾಕ್ ಟವರ್‌ನ ಮೂಲ ಆಕಾರಕ್ಕೆ ಧಕ್ಕೆ ಆಗದಂತೆ ನಿಗಾ ವಹಿಸಲಾಗುತ್ತದೆ. ಗಡಿಯಾರದ ಒಳಗೆ ಮರಗೆಲಸ, ಆಂತರಿಕ ನೆಲ ಹಾಗೂ ಮೆಟ್ಟಿಲುಗಳ ಕೆಲಸವನ್ನು ನಿರ್ವಹಿಸುವಾಗ ಕಟ್ಟಡದ ಪಾರಂಪರಿಕತೆಗೆ ಯಾವುದೇ ರೀತಿಯ ಧಕ್ಕೆ ಬಾರದಂತೆ ಎಚ್ಚರ ವಹಿಸಬೇಕು ಎಂದು ಇಲಾಖೆಯು ಗುತ್ತಿಗೆದಾರರಿಗೆ ಸ್ಪಷ್ಟವಾಗಿ ತಿಳಿಸಲಾಗಿದೆ.

ಕ್ಲಾಕ್ ಟವರ್‌ನ ಕಿಟಕಿ, ಗಾಜುಗಳು, ಫ್ರೇಂ, ಶಟ್ಟರ್‌ಗಳು, ಪ್ಲಾಟ್‌ಫಾರಂ ಮೇಲಿನ ಕಲ್ಲಿನ ನೆಲಹಾಸು, ಪ್ಯಾರಾಪೆಟ್ ಹ್ಯಾಂಡ್ ರೇಲ್ಸ್ ಮತ್ತು ಬಾಲುಸ್ಟರಗಳನ್ನು ನಿಗದಿಪಡಿಸಿರುವ ಸಲಕರಣೆಗಳನ್ನೇ ಬಳಸಿಕೊಂಡು ರಾಸಾಯನಿಕ ರಹಿತವಾಗಿ ಪಾರಂಪರಿಕ ಸ್ಮಾರಕಕ್ಕೆ ಹೊಂದುವಂತಹ ಪದಾರ್ಥಗಳನ್ನು ಬಳಸಿಕೊಂಡು ಸಂರಕ್ಷಣಾ ಕಾಮಗಾರಿ ನಡೆಸಬೇಕು. ಮರದ ಭಾಗಗಳು, ಗಡಿಯಾರದ ಡಯಲ್, ಗಾಜುಗಳ ದುರಸ್ತಿ, ಘಂಟೆಯ ಸ್ವಚ್ಛತೆ, ಪ್ಲಾಸ್ಟರ್ ಕೆಲಸಗಳನ್ನು ಮಾಡುವಾಗ ಮೂಲ ವಿನ್ಯಾಸಕ್ಕೆ ಎಳ್ಳಷ್ಟೂ ವ್ಯತ್ಯಾಸವಿರದಂತೆ ಎಚ್ಚರ ವಹಿಸಬೇಕು. ಕಟ್ಟಡದ ಅಡಿಪಾಯದಲ್ಲಿ ಉಂಟಾಗಿರುವ ರಂಧ್ರಗಳನ್ನು ವೈಜ್ಞಾನಿಕವಾಗಿ ಮುಚ್ಚಿ, ಈ ಸ್ಮಾರಕವು ಗಟ್ಟಿಮುಟ್ಟಾಗಿ ನಿಲ್ಲುವಂತೆ ಮಾಡಬೇಕು ಎಂದು ಇಲಾಖೆಯು ಗುತ್ತಿಗೆದಾರರಿಗೆ ನೀಡಿರುವ ಕಾರ್ಯಾದೇಶದಲ್ಲಿ ಸ್ಪಷ್ಟವಾಗಿ ತಿಳಿಸಿದೆ.

ಗಡಿಯಾರದ ದುರಸ್ತಿ ಮತ್ತು ಕಟ್ಟಡದ ಸಂರಕ್ಷಣಾ ಕಾಮಗಾರಿಗೆ 5 ತಿಂಗಳ ಗಡುವು ನೀಡಲಾಗಿದ್ದು, ಅದರಂತೆ ಈ ಕಾಮಗಾರಿಯು 2024ರ ಮೇ ಅಂತ್ಯಕ್ಕೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಪಾರಂಪರಿಕ ಕಟ್ಟಡಗಳ ಸಂರಕ್ಷಣೆ ಕಾರ್ಯದಲ್ಲಿ ಕೌಶಲ್ಯ ಹೊಂದಿರುವ ರಾಮಚಂದ್ರೇಗೌಡರ ಕೆಲಸವನ್ನು ಪುರಾತತ್ವ ಇಲಾಖೆಯ ಇಂಜಿನಿಯರಿಂಗ್‌ಗಳು ಮೇಲ್ವಿಚಾರಣೆ ನಡೆಸುವರು ಎಂದು ಈ ಇಲಾಖೆಯ ಆಯುಕ್ತ ಆರ್.ದೇವರಾಜು ತಿಳಿಸಿದ್ದಾರೆ.


ಈ ದೊಡ್ಡ ಗಡಿಯಾರ ಶಿಥಿಲಾವಸ್ಥೆಗೊಂಡಿರುವುದನ್ನು ಪರಿಶೀಲಿಸಿದ್ದ ಮೈಸೂರು ನಗರ ಪಾಲಿಕೆಯ ಹಿಂದಿನ ಆಯುಕ್ತ ಗುರುದತ್ತ ಹೆಗ್ಡೆ ಅವರು ಈ ಸ್ಮಾರಕವನ್ನು ಸಂರಕ್ಷಿಸದೆ ಕಡೆಗಣಿಸಿದರೆ ಅದು ಕುಸಿದು ಬೀಳುವ ಅಪಾಯವಿದೆ ಎಂದು ಹಿರಿಯ ಅಧಿಕಾರಿಗಳಿಗೆ ತಿಳಿಸಿ, ಆಗ 35 ಲಕ್ಷ ರೂ. ವೆಚ್ಚದಲ್ಲಿ ಕಾಮಗಾರಿ ನಡೆಸಲು ಯೋಜನೆ ರೂಪಿಸಿದ್ದರು. ಶಿವಕುಮಾರ್ ಮೈಸೂರಿನ ಮೇಯರ್ ಆಗಿದ್ದ ವೇಳೆ ಪಾಲಿಕೆಯ ಆಯುಕ್ತರು ಮತ್ತು ಪಾರಂಪರಿಕ ಇಲಾಖೆಯ ಅಧಿಕಾರಿಗಳು ಹಾಗೂ ತಜ್ಞರು ಭೇಟಿ ನೀಡಿ ಪರಿಶೀಲಿಸಿದ್ದಲ್ಲದೇ ಪಾರಂಪರಿಕ ಶೈಲಿಗೆ ಕಿಂಚಿತ್ತೂ ಧಕ್ಕೆ ಬಾರದಂತೆ ಸಂರಕ್ಷಣಾ ಕಾಮಗಾರಿ ಕೈಗೊಳ್ಳಲು ನಿರ್ಧರಿಸಿದ್ದರು. ಇದೀಗ ಈ ಕಾಮಗಾರಿ 42 ಲಕ್ಷ ರೂ. ವೆಚ್ಚದಲ್ಲಿ ನಡೆಯುತ್ತಿದೆ. ಪಾರಂಪರಿಕ ತಜ್ಞ ಪ್ರೊ. ಎನ್.ಎಸ್. ರಂಗರಾಜು ಅವರು ಹಲವು ಬಾರಿ ದೊಡ್ಡ ಗಡಿಯಾರಕ್ಕೆ ಭೇಟಿ ನೀಡಿ ಸಂರಕ್ಷಣೆ ವಿಚಾರದಲ್ಲಿ ಸಲಹೆ ಹಾಗೂ ಮಾರ್ಗದರ್ಶನಗಳನ್ನು ನೀಡಿದ್ದಲ್ಲದೆ, ಅಧಿಕಾರಿಗಳೊಂದಿಗೆ ನಿರಂತರವಾಗಿ ಸಭೆಗಳನ್ನು ನಡೆಸಿ, ಈ ಗಡಿಯಾರದ ಸಂರಕ್ಷಣಾ ಕಾಮಗಾರಿ ಆರಂಭವಾಗಲು ಕಾರಣಕರ್ತರಾಗಿಯೂ ಇದ್ದರು.

ಇತಿಹಾಸ: ನಾಲ್ವಡಿ ಕೃಷ್ಣರಾಜ ಒಡೆಯರ್ ಆಳ್ವಿಕೆಯ 25ನೇ ವರ್ಷದ ನೆನಪಿಗಾಗಿ ರಂಗಾಚಾರ್ಲು ಪುರಭವನದ ಮುಂದೆ 75 ಅಡಿ ಎತ್ತರದ ಈ ದೊಡ್ಡ ಗಡಿಯಾರವನ್ನು ಸ್ಥಾಪಿಸಲು ಮಹಾರಾಜರು ನಿರ್ಧರಿಸಿದ್ದರು. ನಾಲ್ವಡಿಯವರ ಆಳ್ವಿಕೆಯ 25ನೇ ವರ್ಷದ ಸವಿನೆನಪಿನ ಸಿಲ್ವರ್ ಜ್ಯೂಬಿಲಿ ಕ್ಲಾಕ್ ಟವರ್ ನಿರ್ಮಾಣಕ್ಕೆ ಅರಮನೆ ಸಿಬ್ಬಂದಿಯೂ ಕೂಡ ಸ್ವಯಂ ಪ್ರೇರಿತರಾಗಿ ದೇಣಿಗೆ ನೀಡಿದ್ದರು. 1927ರ ಆಗಸ್ಟ್ 8ರಂದು ಈ ಪಾರಂಪರಿಕ ಸಿಲ್ವರ್ ಜ್ಯೂಬಿಲಿ ಕ್ಲಾಕ್ ಟವರ್ ಕಾರ್ಯಾರಂಭವಾಯಿತು. ಖ್ಯಾತ ವಾಸ್ತುಶಿಲ್ಪಿಗಳ ಸಹಕಾರದೊಂದಿಗೆ ನಿರ್ಮಿಸಲಾದ 75 ಅಡಿ ಎತ್ತರದ ಈ ಕ್ಲಾಕ್ ಟವರ್‌ನ ನಾಲ್ಕು ಕಡೆಯೂ ವೃತ್ತಾಕಾರದ ಗಡಿಯಾರವಿದ್ದು, 94 ವರ್ಷಗಳ ಹಿಂದೆಯೇ ಕನ್ನಡ ಅಂಕಿಗಳೊಂದಿಗೆ ನಮ್ಮ ನಾಡಿನ ಸಂಸ್ಕೃತಿ ಹಾಗೂ ಭಾಷಾಭಿಮಾನವನ್ನು ಬಿಂಬಿಸುವಂತೆ ಈ ದೊಡ್ಡ ಗಡಿಯಾರವನ್ನು ನಿರ್ಮಿಸಲಾಗಿತ್ತು. ಪ್ರತಿ ಗಂಟೆಗೊಮ್ಮೆ ಈ ಗಡಿಯಾರ ಗಂಟೆ ಬಾರಿಸುತ್ತಿದ್ದು, ಅದರ ಶಬ್ದ ಆಗ 5 ಕಿ.ಮೀ. ಸುತ್ತಳತೆಯಲ್ಲಿ ಕೇಳಿಸುತ್ತಿತ್ತು. ಕಾಲ ಕ್ರಮೇಣ ಈ ಗಡಿಯಾರವು ದುರಸ್ತಿಗೊಳಗಾಗಿದ್ದು, 1990ರ ನಂತರ ಗಡಿಯಾರ ತನ್ನ ಶಬ್ದವನ್ನು ನಿಲ್ಲಿಸಿತಾದರೂ, ಸಮಯವನ್ನು ಮಾತ್ರ ಸರಿಯಾಗಿ ತೋರಿಸುತ್ತಿತ್ತು. ಈ ಮಧ್ಯೆ ಗಡಿಯಾರ ಆಗಿಂದಾಗ್ಗೆ ಕೆಟ್ಟು ನಿಲ್ಲುತ್ತಿತ್ತು. ಆ ಸಂದರ್ಭದಲ್ಲಿ ತಾತ್ಕಾಲಿಕವಾಗಿ ರಿಪೇರಿ ಕೆಲಸಗಳನ್ನು ಮಾಡಲಾಗುತ್ತಿತ್ತು. ಆದರೆ ಇದೀಗ ಈ ಗಡಿಯಾರವನ್ನು ಶಾಶ್ವತವಾಗಿ ಸಂರಕ್ಷಿಸುವ ಕಾಮಗಾರಿ ಕೈಗೊಳ್ಳಲಾಗಿದೆ.

ಮಕ್ಕಳ ಚಿತ್ರಕಥೆ

‘ಇದು ಹೇಗೆ ಸಾಧ್ಯವಾಯಿತು...?’

–ಹೆಚ್.ಜಿ.ಎನ್.ಪ್ರಸಾದ್, ಮೊ:9845376199




1890 ನೇ ಇಸವಿಯಲ್ಲಿ ಅಮೆರಿಕದ "ಬಿಷಪ್‌ರೈಟ್" ಎಂಬ ಧರ್ಮ ಪ್ರಚಾರಕರೊಬ್ಬರು ಉಪನ್ಯಾಸ ಕೊಡುತ್ತಿದ್ದರು.




ಆಗ ಸಭಿಕರಲ್ಲೊಬ್ಬರು "ಮನುಷ್ಯ ಆಕಾಶದಲ್ಲಿ ಹಾರಲು ಸಾಧ್ಯವೇ...?" ಎಂದು ಪ್ರಶ್ನಿಸಿದರು.




ಪ್ರಶ್ನಿಸಿದಾತನನ್ನು ದುರುಗುಟ್ಟಿ ನೋಡಿದ ಉಪನ್ಯಾಸಕರು, "ಮನುಷ್ಯ ಹಾರಬೇಕೆಂದು ದೇವರ ಇಚ್ಛೆಯಾಗಿದ್ದರೆ...ಅವನು ಮನುಷ್ಯರಿಗೆ ರೆಕ್ಕೆಗಳನ್ನು ನೀಡುತ್ತಿದ್ದ... ಮನುಷ್ಯ ಹಾರಲು ಸಾಧ್ಯವಿಲ್ಲ... ಇದು ನನ್ನ ದೃಢವಾದ ನಂಬಿಕೆ...!!!". ಎಂದರು.



ಆ ಬಿಷಪ್‌ರೈಟ್‌ಗೆ ಇಬ್ಬರು ಮಕ್ಕಳು "ಆರ್ವಿಲ್‌ರೈಟ್" ಮತ್ತು "ವಿಲ್ಬರ್‌ರೈಟ್". ಇವರು ಹೆಚ್ಚೇನು ವಿದ್ಯಾವಂತರೇನೂ ಆಗಿರಲಿಲ್ಲ. ಬಿಡಿಭಾಗಗಳನ್ನು ತಂದು ಜೋಡಿಸಿದ ಸೈಕಲ್‌ಗಳನ್ನು ಮಾರಾಟ ಮಾಡುವುದು ಅವರ ವೃತ್ತಿಯಾಗಿತ್ತು.



ಇದಾದ ಹದಿಮೂರು ವರ್ಷಗಳ ನಂತರ ಇಬ್ಬರು ಸಹೋದರರು ಮೊಟ್ಟ ಮೊದಲ ವಿಮಾನಯಾನವನ್ನು ಅಮೆರಿಕಾದ "ಕಿಟ್ಟಿ ಹಾಕ್" ಎಂಬಲ್ಲಿ ಯಶಸ್ವಿಯಾಗಿ ಹಾರಾಟ ನಡೆಸಿದರು.



ರೈಟ್ ಸಹೋದರರನ್ನು ಯಾರೋ "ಇದು ಹೇಗೆ ಸಾಧ್ಯವಾಯಿತು...?" ಎಂದು ಪ್ರಶ್ನಿಸಿದಾಗ "ಮನುಷ್ಯ ಪ್ರಯತ್ನಪಟ್ಟರೆ ಆಕಾಶದಲ್ಲಿ ಹಾರಬಲ್ಲ ಎಂಬುದು ನನ್ನ ಧೃಡವಾದ ನಂಬಿಕೆಯಾಗಿತ್ತು. ಆ ಕನಸಿನ ಸಾಕಾರತೆಯಲ್ಲಿ ಧೃಡವಾದ ನಂಬಿಕೆಯನ್ನಿಟ್ಟುಕೊಂಡಿದ್ದೆ...!!!" ಎಂದು ಹೇಳಿದರು.

ನೀತಿ :– ಯಾರು ಏನೇ ಹೇಳಲಿ, ನಮ್ಮಲ್ಲಿ "ಧೃಡವಾದ ನಂಬಿಕೆ" ಹಾಗು "ಪ್ರಾಮಾಣಿಕ ಪ್ರಯತ್ನ" ಇದ್ದರೆ ಅಸಾಧ್ಯವಾದುದೂ ಕೂಡ ಸಾಧ್ಯವಾಗುತ್ತದೆ."



ವಾರಭವಿಷ್ಯ

31.12.2023 ರಿಂದ 6.1.2024

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ಧನುಸ್ಸು, ಚಂದ್ರ–ಕಟಕ, ಸಿಂಹ, ಕನ್ಯಾ ತುಲಾ, ಕುಜ–ಧನುಸ್ಸು, ಬುಧ–ವೃಶ್ಚಿಕ, ಗುರು–ಮೇಷ, ಶುಕ್ರ–ವೃಶ್ಚಿಕ, ಶನಿ–ಕುಂಭ, ರಾಹು–ಮೀನ, ಮತ್ತು ಕೇತು– ಕನ್ಯಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720





ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ಹಣಕಾಸಿನ ವಿಷಯಗಳು ತೃಪ್ತಿಕರವಾಗಿರುತ್ತದೆ. ಹೊಸ ವಾಹನ ಖರೀದಿಯ ಕನಸು ನನಸಾಗಬಹುದು. ವಿದ್ಯಾರ್ಥಿಗಳ ವಿದೇಶ ಪ್ರಯಾಣ ಪ್ರಯತ್ನಗಳು ಫಲ ನೀಡುತ್ತವೆ. ವ್ಯಾಪಾರ ವಿಸ್ತರಣೆಯ ಯೋಜನೆಗಳು ಹೆಚ್ಚು ಅನುಕೂಲಕರವಾಗಿರುತ್ತದೆ. ಸ್ಥಿರಾಸ್ತಿ ವಿವಾದಕ್ಕೆ ಸಂಬಂಧಿಸಿದಂತೆ ಸಂಬಂಧಿಕರಿಂದ ಅಸಮಾಧಾನ ಉಂಟಾಗುತ್ತದೆ. ಸಣ್ಣ–ಪುಟ್ಟ ಆರೋಗ್ಯ ಸಮಸ್ಯೆಗಳು ಕಂಡು ಬರುವುದು.

ಶ್ರೀ ಹನುಮಾನ್ ಚಾಲೀಸ ಪಠಿಸಿ. ಶುಭ ಸಂಖ್ಯೆ–6.



ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಪ್ರಮುಖ ವಿಷಯಗಳಲ್ಲಿ ಇತರರನ್ನು ಅವಲಂಭಿಸದೆ ಸ್ವಂತ ಆಲೋಚನೆಗಳನ್ನು ಮಾಡುವುದು ಉತ್ತಮ. ಶತ್ರು ಸಮಸ್ಯೆಗಳಿಂದ ಜಾಣ್ಮೆಯಿಂದ ಹೊರ ಬರುತ್ತೀರಿ. ಯೋಜಿತ ಕಾರ್ಯಗಳು ಯೋಜಿತ ಸಮಯಕ್ಕೆ ಪೂರ್ಣಗೊಳ್ಳುವುದು. ಉದ್ಯೋಗದಲ್ಲಿ ಅಧಿಕಾರಿಗಳ ಬೆಂಬಲದಿಂದ ಬಡ್ತಿ ದೊರೆಯುವುದು. ವಾಹನ ವಿತರಕರು ವಿಶೇಷ ಲಾಭವನ್ನು ಹೊಂದುತ್ತಾರೆ. ದೂರ ಪ್ರಯಾಣದಿಂದ ದೇಹ ಬಳಲುವುದು.

ಶ್ರೀ ಚಾಮುಂಡೇಶ್ವರಿ ಪೂಜೆ. ಶುಭ ಸಂಖ್ಯೆ–2.



ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ದೈನಂದಿನ ಕೆಲಸ ಕಾರ್ಯಗಳು ಸುಲಲಿತವಾಗಿ ಸಾಗುವುದು. ವ್ಯಾಪಾರ–ವ್ಯವಹಾರಗಳು ಹೆಚ್ಚಿನ ಆದಾಯವನ್ನು ತರುವುದು. ಪರೀಕ್ಷೆ, ಸಂದರ್ಶನಗಳಲ್ಲಿ ವಿಜಯವನ್ನು ಹೊಂದುವಿರಿ. ದೈವ ಕಾರ್ಯಗಳಲ್ಲಿ ಭಾಗವಹಿಸುವುದರಿಂದ ಆತ್ಮ ತೃಪ್ತಿ. ಮಾತೃಶ್ರೀಯವರ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ. ಗುಪ್ತ ಶತ್ರುಗಳಿಂದ ಹೊಡೆತ ಬೀಳುವ ಸಂಭವ.

ಶ್ರೀ ಅಷ್ಟಾಕ್ಷರಿ ಮಂತ್ರ ಜಪಿಸಿ. ಶುಭ ಸಂಖ್ಯೆ–7.



ಕಟಕ (ಹೀ.ಹು.ಹೆ.ಹೊ.ಡ.ಡಿ.ಡು)

ವಾರದಾರಂಭಕ್ಕೆ ಸಣ್ಣ ಪುಟ್ಟ ವಿಘ್ನಗಳು ಎದುರಾಗುವುದು, ತಟಸ್ಥರಾಗಿದ್ದು ಆಗಬಹುದಾದ ವಿವಾದಗಳಿಂದ ಮುಕ್ತರಾಗಲು ಪ್ರಯತ್ನಿಸಿ ಹೊಂದಿಕೊಂಡು ಬಾಳುವುದು ಜೀವನ. ಕಷ್ಟ ಸಾಧ್ಯವಾದ ಜವಾಬ್ದಾರಿಗಳನ್ನು ಸ್ವೀಕರಿಸದಿರಿ. ವಾರದ ಉತ್ತರಾರ್ಧದಲ್ಲಿ ಕೈಗೆತ್ತಿಕೊಂಡ ಕೆಲಸಗಳು ದಡ ಮುಟ್ಟುವುದು. ನಿಮಗೆ ಹಿರಿಯರ ಮಾರ್ಗದರ್ಶನ ಹಾಗೂ ಆಶೀರ್ವಾದಗಳ ಅಗತ್ಯ ಇದೆ.

ಶ್ರೀ ಲಕ್ಷ್ಮೀ ಅಷ್ಟಕ ಪಠಿಸಿ. ಶುಭ ಸಂಖ್ಯೆ–3.



ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಗ್ರಹಬಲಗಳು ಶುಭವಿರುವ ಪರಿಣಾಮ ಸಂದರ್ಭೋಚಿತ ಮಾತು ಮತ್ತು ನಡವಳಿಕೆಗಳಿಂದ ಧನ ಲಾಭವೂ, ಕಾರ್ಯ ಸಾಧನೆಯೂ ಆಗುವುದು. ವಧು–ವರ ಅನ್ವೇಷಣೆ ಸಫಲವಾಗುವುದು. ಸಮಾಜದಲ್ಲಿ ಪ್ರೀತಿ ಗೌರವಗಳಿಗೆ ಪಾತ್ರರಾಗುವಿರಿ. ದಾಯಾದಿ ಕಲಹಗಳು ವಿಕೋಪಕ್ಕೆ ಹೋದೀತು. ಕರುಳು ಸಂಬಂಧಿ ಕಾಯಿಲೆ ಕಾಡುವ ಸಾಧ್ಯತೆ ಇರುತ್ತದೆ.

ಶ್ರೀ ಸೂರ್ಯ ಉಪಾಸನೆ. ಶುಭ ಸಂಖ್ಯೆ–2.



ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ಕೌಟುಂಬಿಕ, ಸಾಮಾಜಿಕ ಆಗುಹೋಗುಗಳು ನಿಮ್ಮ ಆಶಯದಂತೆ ಸಾಗುವುದು. ನೆರೆಹೊರೆಯಲ್ಲಿ ಸೌಹಾರ್ದತೆಯಿಂದ ಇರಲು ಪ್ರಯತ್ನಿಸಿ. ಕೆಲವೊಮ್ಮೆ ದ್ವಂದ್ವ ನಿಲುವುಗಳಿಂದ ಸಂಬಂಧಗಳಲ್ಲಿ ಬಿರುಕು, ಅಪನಂಬಿಕೆಗಳು ಉಂಟಾಗುವುದು. ವಾರ ಮಧ್ಯೆ ಕೈ ಮೀರಿದ ಖರ್ಚುಗಳಿಂದ ಜೇಬು ಖಾಲಿ. ರಾಹು–ಕೇತುಗಳು ಶುಭರಿಲ್ಲ. ನಶಾ ಪದಾರ್ಥಗಳಿಂದ ಅನರ್ಥಗಳು ಉಂಟಾದೀತು. ಹೊಸ ವರ್ಷಾಚರಣೆ ಸಂಯಮ ಮೀರದಿರಲಿ. ಶ್ರೀ ಸತ್ಯನಾರಾಯಣ ದರ್ಶನ. ಶುಭ ಸಂಖ್ಯೆ–9.



ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ದೀರ್ಘಕಾಲೀಕ ಸಮಸ್ಯೆಗಳಿಗೆ ಪರಿಹಾರ ದೊರಕುವುದು. ನಿರುದ್ಯೋಗಿಗಳ ಪ್ರಯತ್ನಗಳಿಗೆ ನೂತನ ಅವಕಾಶಗಳು ಒದಗಿ ಬರುತ್ತದೆ. ಆತ್ಮೀಯರೊಂದಿಗೆ ಮನೆಯಲ್ಲಿ ಸಂತೋಷದಿಂದ ಕಳೆಯುತ್ತೀರಿ. ನಿಮ್ಮ ನಿರ್ಧಾರಗಳನ್ನು ಕುಟುಂಬದವರು ಸ್ವಾಗತಿಸುವರು. ಆಧ್ಯಾತ್ಮಿಕ ಸೇವಾ ಕಾರ್ಯಗಳಲ್ಲಿ ಭಾಗವಹಿಸುವಿರಿ. ವಾರದ ಕಡೆಗೆ ಆರೋಗ್ಯದಲ್ಲಿ ಏರು–ಪೇರು ಉಂಟಾದೀತು, ಮನೆಯ ಔಷಧಿಯಿಂದಲೇ ಗುಣಮುಖರಾಗುವಿರಿ.

ಶ್ರೀ ಶಕ್ತಿ ದೇವತಾ ಆರಾಧನೆ. ಶುಭ ಸಂಖ್ಯೆ–1.



ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು

ವಾರದಾರಂಭಕ್ಕೆ ಆರ್ಥಿಕ ಸಂಕಷ್ಟಗಳು ಎದುರಾದರೂ ಸರಿ ಸಮಯಕ್ಕೆ ಆತ್ಮೀಯರ ಸಹಕಾರ ದೊರಕುವುದು. ಬಂಧುಗಳೊಡನೆ ವಾದ–ವಿವಾದಗಳು ಉಂಟಾಗುತ್ತವೆ. ಕೋಪದಿಂದ ವಿಕೋಪವಾದೀತು. ಸ್ಥಿರಾಸ್ತಿ ವಿವಾದಗಳು ಬಗೆಹರಿಯದೆ ಮನಸ್ಸಿಗೆ ಬೇಸರ ಉಂಟಾಗುವುದು. ವಾರಾಂತ್ಯಕ್ಕೆ ನಿಮ್ಮ ಶ್ರಮ ಪೂರ್ವಕ ಕಾರ್ಯಗಳು ಉತ್ತಮ ಫಲಿತಾಂಶವನ್ನು ನೀಡಲಿದೆ. ಹೊಸ ವರ್ಷಾಚರಣೆ ದೈವ ಸನ್ನಿಧಿಯಲ್ಲಿ ಕಳೆಯಿರಿ.

ಶ್ರೀ ಲಕ್ಷ್ಮೀನೃಸಿಂಹ ಕರಾವಲಂಬನ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–4.



ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಈ ವಾರದಲ್ಲಿ ನಿಮ್ಮ ಮನೆಯಲ್ಲಿ ಹಾಗೂ ಹೊರಗೆ ಅನುಕೂಲಕರ ವಾತಾವರಣ ಇರುತ್ತದೆ. ದೀರ್ಘ ಕಾಲದ ಸಮಸ್ಯೆಗಳು ಪರಿಹಾರದ ಹಂತಕ್ಕೆ ಬಂದು ತಲುಪುತ್ತದೆ. ಭೂಮಿ ಸಂಬಂಧಿತ ಮಾರಾಟ ವ್ಯವಹಾರಗಳು ಲಾಭದಾಯಕವಾಗಿರುತ್ತದೆ. ಸುಭೋಜನ ಮತ್ತು ಮನೋರಂಜನೆಗಳಿಂದ ಮನಸ್ಸು ಪ್ರಫುಲ್ಲವಾಗಿರುತ್ತದೆ. ವಾರದ ಕಡೆಗೆ ಸಹೋದರರೊಂದಿಗೆ ಸಣ್ಣ ವಿವಾದಗಳು ಉಂಟಾಗಬಹುದು.

ಶ್ರೀ ಶಿವ ಪಂಚಾಕ್ಷರಿ ಮಂತ್ರ ಜಪಿಸಿ. ಶುಭ ಸಂಖ್ಯೆ–8.



ಮಕರ (ಬೊ.ಜ.ಜಿ.ಖಿ.ಖು.ಖೆ.ಖೊ.ಗ.ಗಿ.)

ಧೈರ್ಯವಂತರಿಗೆ ದೈವ ಸಹಾಯ ಎಂಬಂತೆ, ಸವಾಲುಗಳು ಒಂದರ ಮೇಲೊಂದರಂತೆ ಬಂದರೂ ನೀವು ಚಾಣಾಕ್ಷತನದಿಂದ ಎದುರಿಸಿ ಜಯಿಸುವಿರಿ. ವ್ಯಾಪಾರ–ವಹಿವಾಟುಗಳು ನಿರೀಕ್ಷಿತ ಮಟ್ಟ ತಲುಪದಿದ್ದರೂ ಲಾಭ–ನಷ್ಟಗಳು ಸಮನಾಗಿ ನಡೆಯುವುದು. ಹೆಂಡತಿ–ಮಕ್ಕಳ ಜೊತೆ ಸಂಯಮದಿಂದ ವರ್ತಿಸಿ, ಅನ್ಯಥಾ ಮನಃಶಾಂತಿಗಾಗಿ ಪರದಾಡಬೇಕಾದೀತು. ಆರೋಗ್ಯ ಅಷ್ಟಕ್ಕಷ್ಟೆ.

ಶ್ರೀ ಶನಿ ಚಾಲೀಸ ಪಠಿಸಿ. ಶುಭ ಸಂಖ್ಯೆ–4.



ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

'ಧರ್ಮೋ ರಕ್ಷತಿ ರಕ್ಷಿತಃ' ಎಂಬಂತೆ ಧರ್ಮ ಮಾರ್ಗವನ್ನು ಬಿಡದಿರಿ. ಜನ್ಮ ರಾಶಿಸ್ಥಿತ ಶನಿದೇವನಿಂದ ನಿಮ್ಮವರಿಂದಲೇ ತೊಂದರೆಗಳು ಎದುರಾಗಬಹುದು. ಕೂಡಿಟ್ಟ ಆಪದ್ಧನ ಅಪವ್ಯಯವಾಗುವುದು. ವಾರಮಧ್ಯೆ ಚಂದ್ರ ಗ್ರಹ ನಿಮ್ಮ ರಕ್ಷಣೆಗೆ ಬರುವನು. ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುವುದು ಹಾಗೂ ಉತ್ತಮ ಭೋಜನ, ಶಯನ ಸುಖಗಳನ್ನು ಅನುಭವಿಸುವಿರಿ. ರೇಸು, ಕಾರ್ಡ್‌ನಿಂದ ದೂರವಿದ್ದರೆ ಒಳಿತು.

ಶ್ರೀ ಹರಿನಾಮ ಸ್ಮರಣೆ. ಶುಭ ಸಂಖ್ಯೆ–5.



ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ಈ ಸಪ್ತಾಹದಲ್ಲಿ ಜಾಣ್ಮೆಯಿಂದ ವ್ಯವಹಾರಗಳನ್ನು ಕುದುರಿಸಿಕೊಳ್ಳುವಿರಿ. ವಿಭಿನ್ನ ಮಾರ್ಗದಲ್ಲಿ ನಡೆದು ಶತ್ರುಗಳ ಮೇಲೆ ಗೆಲುವು ಸಾಧನೆ. ಗುರುಕೃಪೆಯಿಂದ ತರ್ಕಪೂರ್ಣ ಯೋಜನೆಗಳಿಂದ ಪ್ರಯೋಜನ ಉಂಟು. ಪುತ್ರ, ಪುತ್ರಿಯರ ಸಾಧನೆಯಿಂದ ಹೆಮ್ಮೆ. ದಾನ–ಧರ್ಮ ಬುದ್ಧಿಯಿಂದ ಜನ ಮನ್ನಣೆಯನ್ನೂ ಗಳಿಸುವಿರಿ. ಜನ್ಮಸ್ಥ ರಾಹು ಕುಕೃತ್ಯಗಳಿಗೆ ಉತ್ತೇಜನ ನೀಡುವನು.

ಶ್ರೀ ರಾಘವೇಂದ್ರಸ್ವಾಮಿ ಉಪಾಸನೆ. ಶುಭ ಸಂಖ್ಯೆ–9.

ಕೋಟೆಯಲ್ಲಿ 6 ಉಪ ವಿದ್ಯುತ್ ವಿತರಣಾ ಘಟಕ ಸ್ಥಾಪನೆ

ಗೊಲ್ಲನಬೀಡುವಿನಲ್ಲಿ ಉಪ ವಿದ್ಯುತ್ ಕೇಂದ್ರ ಕಾಮಗಾರಿಗೆ ಚಾಲನೆ



ಹೆಚ್.ಡಿ.ಕೋಟೆ, ಡಿ.30– ತಾಲೂಕಿನಲ್ಲಿರುವ ವಿದ್ಯುತ್ ಸಮಸ್ಯೆಯನ್ನು ನಿವಾರಿಸುವ ಸಲುವಾಗಿ ಒಟ್ಟು ಆರು ಉಪ ವಿದ್ಯುತ್ ವಿತರಣಾ ಘಟಕಗಳನ್ನು ಸ್ಥಾಪಿಸಲಾಗುವುದು ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದ್ದಾರೆ.

ತಾಲೂಕಿನ ಗೊಲ್ಲನಬೀಡು ಗ್ರಾಮದಲ್ಲಿ 9 ಕೋಟಿ ರೂ. ವೆಚ್ಚದ 66/11 ಕೆ.ವಿ. ಉಪ ವಿದ್ಯುತ್ ಕೇಂದ್ರ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಗೊಲ್ಲನಬೀಡು ಗ್ರಾಮದಲ್ಲಿ ಉಪ ವಿದ್ಯುತ್ ಘಟಕವನ್ನು ಸ್ಥಾಪಿಸುವಂತೆ ಕಳೆದ ಇಪ್ಪತ್ತು ವರ್ಷಗಳಿಂದ ಬೇಡಿಕೆ ಇತ್ತು ಇಂದು ಆ ಬೇಡಿಕೆ ಈಡೇರಿದೆ. ಇದರಿಂದ ಮುಂದಿನ ದಿನಗಳಲ್ಲಿ ಈ ಭಾಗದಲ್ಲಿ ವಿದ್ಯುತ್ ಸಮಸ್ಯೆ ನಿವಾರಣೆಯಾಗಲಿದೆ ಎಂದರು.

ಈ ಭಾಗದ ಗ್ರಾಮಗಳಾದ ಹಾಲನ ಹಳ್ಳಿ, ಕ್ಯಾತನಹಳ್ಳಿ, ಜಿ.ಬಿ. ಸರಗೂರು, ಗಂಗಡ ಹೊಸಹಳ್ಳಿ, ಸಿಂಡೇನಹಳ್ಳಿ, ಗೊಲ್ಲನಬೀಡು, ಮಸಣಕುಪ್ಪೆ, ಗದ್ದೆ ಹುಂಡಿ ಸೇರಿದಂತೆ 70ಕ್ಕೂ ಹೆಚ್ಚು ಗ್ರಾಮಗಳಿಗೆ ಇದರಿಂದ ಅನುಕೂಲವಾಗಲಿದೆ ಎಂದು ತಿಳಿಸಿದರು.

ಕಾರ್ಯನಿರ್ವಾಹಕ ಇಂಜಿನಿಯರ್ ಮಾದೇಶ್ ಮಾತನಾಡಿ, 66/11 ಕೆ.ವಿ.ಯ ನಾಲ್ಕು ವಿದ್ಯುತ್ ಉಪಕೇಂದ್ರವನ್ನು ಗೊಲ್ಲನಬೀಡು ಗ್ರಾಮದಲ್ಲಿ ಸ್ಥಾಪಿಸಲಾಗುತ್ತಿದೆ. ಮುಂದಿನ ಒಂಭತ್ತು ತಿಂಗಳಲ್ಲಿ ಉತ್ತಮ ಕಾಮಗಾರಿ ಮೂಲಕ ಮುಗಿಯಲಿದೆ. ಇದರಿಂದ ಹಂಪಾಪುರ ಹೋಬಳಿಯ ಹಲವು ಗ್ರಾಮಗಳಿಗೆ ವಿದ್ಯುತ್ ಅಡೆತಡೆಗೆ ಪೂರ್ಣವಿರಾಮ ಹಾಕಿದಂತಾಗುತ್ತದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್ ವಾಡೇಶ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಸಂದೀಪ್, ಸಹಾಯಕ ಇಂಜಿನಿಯರ್ ಜಶ್ವಂತ್, ಎಇಇ ಚಂದ್ರುಕುಮಾರ್, ತಾಲೂಕು ದಂಡಾಧಿಕಾರಿ ಶ್ರೀನಿವಾಸ್, ಗ್ರಾ.ಪಂ.ಅಧ್ಯಕ್ಷ ಶಿವರಾಜು, ಮೈಮುಲ್ ನಿರ್ದೇಶಕ ಈರೇಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಏಜಾಜ್ ಪಾಷ, ಮರಿದೇವಯ್ಯ, ಚಾಮರಾಜು, ಎಇಇ ನಾಗರಾಜು, ರೇಷ್ಮೆ ಇಲಾಖೆಯ ಸಹಾಯಕ ನಿರ್ದೇಶಕ ಮಂಜುನಾಥ್, ಬಿಇಓ ಮಾರಯ್ಯ, ಆರ್.ಐ. ಯೋಗೇಂದ್ರಕುಮಾರ್, ಸಂಜೀವ್ ಕುವಾರ್, ಗ್ರಾಮ ಲೆಕ್ಕಾಧಿಕಾರಿ ಎಂ. ದೀಪಕ್‌ಕುಮಾರ್, ಜಗನ್ನಾಥ್, ಬೋರಯ್ಯ, ಬಿಂದುಶ್ರೀ, ಸುದರ್ಶನ್, ಮಂಜುನಾಥಶೆಟ್ಟಿ, ರಾಜು, ಚಿಕ್ಕ ಬೈರಾಸ್ ಮಂಜು, ಶಿಂಡೇನ ಹಳ್ಳಿ ಗಿರೀಶ್, ಕ್ಯಾತನಹಳ್ಳಿ ನಾಗರಾಜು, ರಾಜ ನಾಯಕ, ಕ್ಯಾತನಹಳ್ಳಿ ಮಂಜು, ಮರಿ ದೇವಯ್ಯ, ಕಾರ್ ಕೃಷ್ಣಮೂರ್ತಿ ಇದ್ದರು.

> ಈ ಭಾಗದ ಗ್ರಾಮಗಳಿಗೆ ಅತಿ ಹೆಚ್ಚು ವಿದ್ಯುತ್ ಸಮಸ್ಯೆ ಉಂಟಾಗುತ್ತಿತ್ತು. ಆದರೆ ಈ ಯೋಜನೆ ಪ್ರಾರಂಭವಾಗುವುದರಿಂದ ನಿರಂತರ ವಿದ್ಯುತ್ ಪೂರೈಕೆ ಜೊತೆಗೆ ಗ್ರಾಹಕರ ಬೇಡಿಕೆಗೆ ತಕ್ಕಂತೆ ವಿದ್ಯುತ್ ಸಂಪರ್ಕವನ್ನು ನೀಡಬಹುದು.
> - ಅನಿಲ್ ಚಿಕ್ಕಮಾದು, ಶಾಸಕ

ಗ್ರಾಮಗಳಲ್ಲಿಯೇ ಇ–ಕೆವೈಸಿ ಮಾಡಿಸಿಕೊಳ್ಳಿ

ಗೊಂದಲ ಬೇಡ, ಅಂತಿಮ ದಿನಾಂಕ ನಿಗದಿಮಾಡಿಲ್ಲ



ತಿ.ನರಸೀಪುರ, ಡಿ.30 – ಪಂಚಾಯ್ತಿ ವ್ಯಾಪ್ತಿಯಲ್ಲೇ ಆಧಾರ್ ಇ–ಕೆವೈಸಿ ಮಾಡಿಕೊಡಲಾಗುತ್ತಿದ್ದು ಗ್ರಾಹಕರು ಗೊಂದಲಕ್ಕೆ ಒಳಗಾಗದೇ ತಮ್ಮ ಗ್ರಾಮಗಳಲ್ಲಿಯೇ ಇ–ಕೆವೈಸಿ ಪೂರ್ಣಗೊಳಿಸಿ ಕೊಳ್ಳುವಂತೆ ಎಸ್ ಆರ್ ಗ್ಯಾಸ್‌ನ ಷಹನಾಜ್ ರಿಯಾಜ್ ತಿಳಿಸಿದ್ದಾರೆ.

ಈ ಸಂಬಂಧಪತ್ರಿಕಾ ಹೇಳಿಕೆ ನೀಡಿರುವ ಅವರು, ಇ–ಕೈವೈಸಿ ಮಾಡಿಸಲು ಕೊನೆಯ ದಿನಾಂಕ ನಿಗದಿಪಡಿಸಿಲ್ಲ. ಪ್ರಕ್ರಿಯೆಯು ನಿರಂತರವಾಗಿದ್ದು, ಗ್ರಾಹಕರು ಗೊಂದಲಕ್ಕೆ ಒಳಗಾಗುವುದು ಬೇಡ, ಇದಕ್ಕಾಗಿಯೇ ದೂರದ ಗ್ರಾಮಗಳಿಂದ ತಮ್ಮ ಕೆಲಸ ಕಾರ್ಯಗಳನ್ನು ಬಿಟ್ಟು ಏಜೆನ್ಸಿ ಮುಂದೆ ದಿನವಿಡೀ ಸುತಿ ಸಾಲಿನಲ್ಲಿ ನಿಲ್ಲದೇ ಗ್ರಾಮಗಳಲ್ಲಿಯೇ ಇ–ಕೆವೈಸಿ ಮಾಡಿಸಿ ಕೊಳ್ಳುವಂತೆ ಮನವಿ ಮಾಡಿದ್ದಾರೆ. ಪ್ರಸಕ್ತ ಸಂದರ್ಭದಲ್ಲಿ ಕೊರೊನಾ ಸಹ ವ್ಯಾಪಿಸುತ್ತಿದೆ. ಇಂತಹ ಸಂದರ್ಭದಲ್ಲಿ ಗ್ರಾಹಕರಿಗೆ ಯಾವುದೇ ತೊಂದರೆ ಉಂಟಾಗಬಾರದೆಂಬ ದೃಷ್ಟಿಯಿಂದ ಗ್ರಾಮಗಳಲ್ಲಿಯೇ ಆಧಾರ್ ಇ–ಕೆವೈಸಿ ಮಾಡಿಸಲು ನಾಳೆಯಿಂದಲೇ ವ್ಯವಸ್ಥೆ ಮಾಡಲಾಗುತ್ತದೆ. ಯಾರೋ ಸಾಮಾಜಿಕ ಜಾಲತಾಣದಲ್ಲಿ ಡಿ.30 ಕ್ಕೆ ಕೊನೆ ದಿನಾಂಕ ಎಂದು ಮಾಹಿತಿ ಹರಿಬಿಟ್ಟಿದ್ದು, ಈ ಬಗ್ಗೆ ನಮಗೆ ಕಂಪನಿ ಕಡೆಯಿಂದ ಯಾವುದೇ ಮಾಹಿತಿ ಬಂದಿಲ್ಲ, ಹಾಗಾಗಿ ಗ್ರಾಹಕರು ಊಹಾಪೋಹಗಳಿಗೆ ಕಿವಿಗೊಡದೇ ಯಾವುದೇ ಗೊಂದಲಕ್ಕೊಳಗಾಗದೇ ತಮ್ಮ ತಮ್ಮ ಗ್ರಾಮಗಳಿಗೆ ಬರುವ ನಮ್ಮ ಏಜೆನ್ಸಿಯ ಸಿಬ್ಬಂದಿಯಿಂದ ಇ–ಕೆವೈಸಿ ಮಾಡಿಸಿಕೊಳ್ಳುವಂತೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಂಜನಗೂಡು ನಗರಸಭೆ ಉಪಚುನಾವಣೆ

ಬಿಜೆಪಿ ಅಭ್ಯರ್ಥಿ ಮಹೇಶ್ ಅತ್ತಿಖಾನೆ ಜಯಭೇರಿ



ನಂಜನಗೂಡು, ಡಿ.30– ನಗರಸಭೆಯ 20ನೇ ವಾರ್ಡಿನ ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಮಹೇಶ್ ಅತ್ತಿಖಾನೆ ಜಯಭೇರಿ ಬಾರಿಸುವ ಮೂಲಕ ನಗರಸಭೆಯ ಸದಸ್ಯರಾಗಿ ಆಯ್ಕೆಗೊಂಡಿದ್ದಾರೆ.

ಈ ಹಿಂದೆ 20ನೇ ವಾರ್ಡ್‌ನ ಸದಸ್ಯರಾಗಿದ್ದ ದೊರೆಸ್ವಾಮಿ ಅವರು ರಾಜೀನಾಮೆ ನೀಡಿ ಕಾಂಗ್ರೆಸ್ ಪಕ್ಷ ಸೇರ್ಪಡೆಗೊಂಡಿದ್ದರು. ತೆರವಾದ ಸ್ಥಾನಕ್ಕೆ ಡಿ.27 ರಂದು ಚುನಾವಣೆ ನಡೆಸಲಾಗಿತ್ತು. ಬಿಜೆಪಿ ಪಕ್ಷದಿಂದ ಮಹೇಶ್ ಅತ್ತಿಖಾನೆ, ಕಾಂಗ್ರೆಸ್ ಪಕ್ಷದಿಂದ ದೊರೆಸ್ವಾಮಿ, ಜೆಡಿಎಸ್ ಪಕ್ಷದಿಂದ ಸುಬ್ರಮಣ್ಯ, ಆಮ್ ಆದ್ಮಿ ಪಕ್ಷದಿಂದ ಜಯಲಕ್ಷ್ಮಿ ಸ್ಪರ್ಧಿಸಿದ್ದರು. 568 ಮತದಾರರು ತಮ್ಮ ಹಕ್ಕು ಚಲಾಯಿಸಿದ್ದರು.

ಬಿಜೆಪಿ ಪಕ್ಷದ ಮಹೇಶ್ ಅತ್ತಿಖಾನೆ 231 ಮತಗಳನ್ನು ಪಡೆದು ವಿಜಯಿಶಾಲಿಯಾದರೆ. ಕಾಂಗ್ರೆಸ್ ಪಕ್ಷದ ದೊರೆಸ್ವಾಮಿ 186 ಮತಗಳನ್ನು ಪಡೆದು ಸೋಲು ಅನುಭವಿಸಿದರು. ಜೆಡಿಎಸ್ ಪಕ್ಷದ ಸುಬ್ರಮಣ್ಯ 144 ಮತ, ಆಮ್ ಆದ್ಮಿ ಪಕ್ಷದ ಜಯಲಕ್ಷ್ಮಿ 5 ಮತಗಳನ್ನು ಪಡೆದರು. 2 ಮತಗಳು ನೋಟಾಕ್ಕೆ ಚಲಾವಣೆಯಾಗಿದ್ದವು.

ನೂತನ ಸದಸ್ಯರಿಗೆ ಚುನಾವಣಾಧಿಕಾರಿಯಾಗಿದ್ದ ನೀರಾವರಿ ಇಲಾಖೆಯ ಎಇಇ ಕೃಷ್ಣ ಅವರು ಪ್ರಮಾಣಪತ್ರ ವಿತರಿಸಿದರು.

ನೂತನ ಸದಸ್ಯ ಮಹೇಶ್ ಅತ್ತಿಖಾನೆ ಮಾತನಾಡಿ, ನನ್ನ ಗೆಲುವು ಬಿಜೆಪಿ ಪಕ್ಷದ ಕಾರ್ಯಕರ್ತರ, ಮುಖಂಡರ ಹಾಗೂ ಪ್ರಜ್ಞಾವಂತ ಮತದಾರರ ಗೆಲುವು. ಬಿಜೆಪಿ ಪಕ್ಷ ನಂಜನಗೂಡಿನಲ್ಲಿ ಬಲವಾಗಿದೆ ಎಂಬುದಕ್ಕೆ ಈ ಚುನಾವಣೆ ಉದಾಹರಣೆಯಾಗಿದೆ. ಜೊತೆಗೆ ಲೋಕಸಭೆ ಚುನಾವಣೆಗೂ ಕೂಡ ಈ ಚುನಾವಣೆ ದಿಕ್ಸೂಚಿಯಾಗಲಿದೆ ಎಂದರು.

ನನ್ನ ಗೆಲುವಿಗೆ ಹಗಲಿರುಳು ಶ್ರಮಿಸಿದ ಮಾಜಿ ಶಾಸಕ ಬಿ.ಹರ್ಷವರ್ಧನ್, ಸಂಸದ ವಿ.ಶ್ರೀನಿವಾಸ ಪ್ರಸಾದ್, ಶಾಸಕ ಶ್ರೀವತ್ಸ, ಮಾಜಿ ಶಾಸಕ ನಿರಂಜನ್, ಎಸ್.ಮಹದೇವಯ್ಯ ಅವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ ಎಂದರು.

ಇದೇ ಸಂದರ್ಭದಲ್ಲಿ ಬಿಜೆಪಿ ನಗರಾಧ್ಯಕ್ಷ ಶ್ರೀನಿವಾಸರೆಡ್ಡಿ, ನಗರಸಭಾ ಸದಸ್ಯರಾದ ಮಹದೇವಪ್ರಸಾದ್, ಮುಖಂಡರಾದ ವಿನಯ್‌ಕುಮಾರ್, ಬಾಲಚಂದ್ರ, ಎನ್.ಸಿ. ಬಸವಣ್ಣ, ಅನಂತ್, ಸಂಜಯ್‌ಶರ್ಮ, ಶ್ರೀಕಂಠ, ಮಹೇಶ್ ಎಪಿಎಂಸಿ ಮಾಜಿ ಸದಸ್ಯ ಗುರುಸ್ವಾಮಿ ಸೇರಿದಂತೆ ಹಲವಾರು ಪ್ರಮುಖರು ಇದ್ದರು.

ಮೂಗೂರು ಬಂಡಿ ಎತ್ತುಗಳಿಗೆ ಪೂಜೆ



ಮೂಗೂರು, ಡಿ.30– ಜನವರಿಯಲ್ಲಿ ಮೂಗೂರು ಗ್ರಾಮದಲ್ಲಿ ನಡೆಯಲಿರುವ ಶ್ರೀ ತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವದ ಅಂಗವಾಗಿ ಜರುಗಲಿರುವ ಮೂಗೂರು ಬಂಡಿಯ ಎತ್ತುಗಳಿಗೆ ಗ್ರಾಮಸ್ಥರು ಸೇರಿದಂತೆ ಬಂಡಿ ಹಟ್ಟಿ ಮನೆತನದವರು ದೇವಾಲಯದ ಆವರಣದಲ್ಲಿ ಪೂಜೆ ಸಲ್ಲಿಸುವುದರ ಮೂಲಕ ಅದ್ದೂರಿ ಸ್ವಾಗತ ನೀಡಿದರು.

ಮೂಗೂರು ಬಂಡಿ ಎಂದು ಖ್ಯಾತಿ ಪಡೆದ ಶ್ರೀ ತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವದ ಬಂಡಿಗೆ ಪ್ರತಿ ವರ್ಷದಂತೆ ಈ ಬಾರಿಯೂ ಬಂಡಿ ಅಟ್ಟಿ ಮನೆತನದವರು ಪಾಂಡವಪುರದ ಬೆಲ್ಲದ ಕೆರೆ ಗ್ರಾಮದಿಂದ 1ಲಕ್ಷದ 85 ಸಾವಿರ ರೂ.ಗಳಿಗೆ ಜೋಡಿ ಎತ್ತುಗಳನ್ನು ಖರೀದಿಸಿ ತಂದು ಮೆರವಣಿಗೆ ಮಾಡುವ ಮೂಲಕ ಎಲ್ಲರ ಗಮನ ಸೆಳೆದರು.

ವಿಶೇಷಚೇತನರಿಗೆ ವಿಶ್ರಾಂತಿ ಕೊಠಡಿ ನಿರ್ಮಾಣ



ಸರಗೂರು, ಡಿ.30– ವಿಶೇಷಚೇತನರಿಗೆ ಸರಗೂರು ಮತ್ತು ಹೆಚ್.ಡಿ.ಕೋಟೆ ತಾಲೂಕಿನಲ್ಲಿ 25 ಲಕ್ಷ ವೆಚ್ಚದಲ್ಲಿ ವಿಶ್ರಾಂತಿ ಕೊಠಡಿಯನ್ನು ನಿರ್ಮಿಸಿಕೊಡಲಾಗುವುದು ಎಂದು ಶಾಸಕ ಅನಿಲ್ ಚಿಕ್ಕಮಾದು ಭರವಸೆ ನೀಡಿದರು.

ಸರಗೂರು ಪಟ್ಟಣದ ಜಯ ಚಾಮರಾಜೇಂದ್ರ ಕ್ರೀಡಾಂಗಣದ ಆವರಣದಲ್ಲಿ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್, ಶ್ರೀ ಚಿಕ್ಕದೇವಮ್ಮ ಮತ್ತು ಜೀವನ ಜ್ಯೋತಿ ವಿಶೇಷಚೇತನರ ಕ್ಷೇಮಾಭಿವೃದ್ಧಿ ಒಕ್ಕೂಟಗಳು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಹಾಗೂ ತಾಲೂಕಿನ ವಿವಿಧ ಸಂಘ ಸಂಸ್ಥೆಗಳ ಸಹಯೋಗ ದೊಂದಿಗೆ ನಡೆದ ಅಂತಾರಾಷ್ಟ್ರೀಯ ವಿಶೇಷಚೇತನ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ವಿಶೇಷ ಚೇತನರಿಗೆ ಚಲನವಲನಕ್ಕೆ ಅನುಕೂಲವಾಗುವಂತೆ ರೋಪ್ ವೇ ನಿರ್ಮಾಣ ಮಾಡುವಂತೆ ಎಲ್ಲಾ ಅಧಿಕಾರಿ ವರ್ಗದವರಿಗೆ ಸೂಚಿಸುತ್ತೇನೆ ಎಂದರು.

ವಿಶೇಷಚೇತನರಿಗೆ ಸರಗೂರು ಮತ್ತು ಹೆಚ್.ಡಿ.ಕೋಟೆ ತಾಲೂಕಿನಲ್ಲಿ 25 ಲಕ್ಷ ವೆಚ್ಚದಲ್ಲಿ ವಿಶ್ರಾಂತಿ ಕೊಠಡಿಯನ್ನು ನಿರ್ಮಿಸಿ ಕೊಡುವುದಾಗಿ ಭರವಸೆ ನೀಡಿದ ಅವರು, ಸರಗೂರು ಅಭಿವೃದ್ಧಿ ಕಾರ್ಯಗಳಿಗೆ ಮಾನ್ಯ ಮುಖ್ಯಮಂತ್ರಿಗಳನ್ನು ಆಹ್ವಾನಿಸಿ ಮತ್ತಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಲು ಮನವಿ ಮಾಡುತ್ತೇನೆ ಎಂದು ತಿಳಿಸಿದರು.

ಭಾರತ ಮತ್ತು ಅಂತಾರಾಷ್ಟ್ರೀಯ ಕ್ರೀಡಾಪಟುವಾದ ಪ್ರಕಾಶ ಜಯರಾಮಯ್ಯ ಗೌರವ ಸಮರ್ಪಣೆಯನ್ನು ಸ್ವೀಕರಿಸಿ ಮಾತನಾಡಿ, ಅಂಗವಿಕಲತೆ ಒಂದು ಶಾಪವಲ್ಲ. ಅದು ವರ ಎಂಬ ಭಾವನೆ ನಮಗೆ ಇದ್ದರೆ ಏನಾದರೂ ಸಾಧಿಸಬಹುದು ಎಂಬುದಕ್ಕೆ ನಾನೇ ಉದಾಹರಣೆ. 2010ರಲ್ಲಿ ಕ್ರಿಕೆಟ್‌ಗೆ ಪಾದಾರ್ಪಣೆ ಮಾಡಿದ ನಂತರ 3 ಅಂತಾರಾಷ್ಟ್ರೀಯ ಟಿ20 ಕಪ್‌ಅನ್ನು ಪಡೆದುಕೊಂಡಿದ್ದೇನೆ. ಕಾರಣ ನನಗೆ ಅವಕಾಶ ಸಿಕ್ಕಿದಕ್ಕೆ ಸಾಧನೆ ಮಾಡಲಾಯಿತು. ಅದೇ ರೀತಿ ಅಂಗವಿಕಲರ ಮೇಲೆ ಅನುಕಂಪ ತೋರಿಸಬೇಡಿ. ಅವಕಾಶವನ್ನು ನೀಡಿ ಎಂದು ತಿಳಿಸಿದರು.

ತಹಸೀಲ್ದಾರ್ ರುಕೀಯ ಬೇಗಂ, ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ ಮಾತನಾಡಿದರು.

ಸ್ವಾಮಿ ವಿವೇಕಾನಂದ ಯೂತ್‌ಮೂವ್‌ಮೆಂಟ್‌ನ ಆರೋಗ್ಯ ಕ್ಷೇತ್ರದ ಮುಖ್ಯಸ್ಥರಾದ ಡಾ.ಕುಮಾರ್ ಜಿ.ಎಸ್ ಮಾತನಾಡಿ, ವಿಶೇಷಚೇತನರ ಅಭಿವೃದ್ಧಿ ಕೇವಲ ಒಬ್ಬವ್ಯಕ್ತಿ ಮತ್ತು ಒಂದು ಸಂಸ್ಥೆಯಿಂದ ಮಾತ್ರ ಸಾಧ್ಯವಿಲ್ಲ ಎಂದರು.

ಶಾಲಾ ವಿದ್ಯಾರ್ಥಿಗಳಿಗೆ ಉಚಿತ ಆಟೋ ಸೇವೆ



ತಿ.ನರಸೀಪುರ, ಡಿ.30– ಪ್ರತಿನಿತ್ಯ ಸರ್ಕಾರಿ ಶಾಲೆಗೆ ನಡೆದುಕೊಂಡೇ ಹೋಗುತ್ತಿದ್ದ ಗ್ರಾಮೀಣ ಪ್ರದೇಶಗಳ ವಿದ್ಯಾರ್ಥಿಗಳ ಬವಣೆಯನ್ನು ಕಣ್ಣಾರೆ ಕಂಡ ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ವೈದ್ಯರ ಜಿಲ್ಲಾಧ್ಯಕ್ಷ ಡಾ.ಬಿ. ಪ್ರದೀಪ್ ಅವರು ತಾಲೂಕಿನ ಹಳೇ ಕೆಂಪಯ್ಯನಹುಂಡಿ ಗ್ರಾಮದ ಸರ್ಕಾರಿ ಶಾಲೆಯ ಮಕ್ಕಳಿಗೆ ಉಚಿತವಾಗಿ ಆಟೋ ಸಂಚಾರ ಸೇವೆಯನ್ನು ಕಲ್ಪಿಸಿದ್ದಾರೆ.

ಶಾಲೆ ಆರಂಭಗೊಳ್ಳುವ ಬೆಳಗ್ಗೆ ಹಾಗೂ ಶಾಲೆಯ ಮುಗಿದ ನಂತರ ಸಂಜೆಯ ವೇಳೆಯಲ್ಲಿ ಹತ್ತಾರು ಮಕ್ಕಳನ್ನು ಮನೆಗೆ ಉಚಿತವಾಗಿ ಆಟೋದಲ್ಲಿ ಕರೆದೊಯ್ಯುವ ವೆಚ್ಚವನ್ನು ವೈಯಕ್ತಿಕವಾಗಿ ಭರಿಸುವ ಮೂಲಕ ಮಕ್ಕಳು ಮತ್ತು ಪೋಷಕರ ಮೆಚ್ಚುಗೆ ಗಳಿಸಿದ್ದಾರೆ

ಹಳೇ ಕೆಂಪಯ್ಯನಹುಂಡಿ ಗ್ರಾಮದಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಪ್ರೌಢಶಾಲೆಗೆ ಹೊಸ ಕೆಂಪಯ್ಯನ ಹುಂಡಿ ಸೇರಿದಂತೆ ಇಂಡವಾಳು ಮತ್ತು ರಾಯರಹುಂಡಿ ಗ್ರಾಮಗಳಿಂದ ಇಪ್ಪತ್ತಕ್ಕೂ ಹೆಚ್ಚು ವಿದ್ಯಾರ್ಥಿಗಳು ಸೈಕಲ್ ಅಥವಾ ಯಾವುದೇ ವಾಹನವಿಲ್ಲದೆ ನಡೆದುಕೊಂಡೇ ಹೋಗಿ ಬರುತ್ತಿದ್ದರು. ವಾಹನಗಳ ದಟ್ಟಣೆಯಿರುವ ಹೈವೇ ರಸ್ತೆಯಲ್ಲಿ ಶಾಲಾ ಮಕ್ಕಳ ಕಾಲ್ನಡಿಗೆ ಅಪಾಯ ಎಂಬುದನ್ನು ಅರಿತು ವೈಯುಕ್ತಿಕವಾಗಿ ಆಟೋ ಸೌಲಭ್ಯವನ್ನು ಪ್ರದೀಪ್ ಅವರು ಸೇವಾ ಮನೋಭಾವನೆಯಿಂದ ಕಲ್ಪಿಸಿಕೊಟ್ಟಿದ್ದಾರೆ.

ತಾಲೂಕಿನ ಹೊಸ ಕೆಂಪಯ್ಯನಹುಂಡಿ ಗ್ರಾಮದಲ್ಲಿ ಶಾಲಾ ಮಕ್ಕಳ ಉಚಿತ ಆಟೋ ಸಂಚಾರ ಸೇವೆಗೆ ಚಾಲನೆ ನೀಡಿದ ಡಾ.ಬಿ.ಪ್ರದೀಪ್ ಮಾತನಾಡಿ, ಹೈವೇಯಲ್ಲಿ ಸರ್ಕಾರಿ ಶಾಲಾ ಮಕ್ಕಳ ಓಡಾಟವನ್ನು ನೋಡುತ್ತಿದ್ದೆ. ಬೇಸಿಗೆ ಬಿಸಿಲು ಮತ್ತು ಹೆದ್ದಾರಿಯಲ್ಲಿ ಓಡಾಡುವುದು ಸರಿಯಲ್ಲವೆಂದು ಸ್ಥಳೀಯರ ಹಾಗೂ ಪೋಷಕರ ಅನುಮತಿ ಪಡೆದು ಅಳಿಲು ಸೇವೆಯನ್ನು ಈ ಭಾಗದ ಜನರಿಗೆ ಸಲ್ಲಿಸಬೇಕೆಂಬ ಉದ್ದೇಶದಿಂದ ಆಟೋ ಸಂಚಾರದ ನೆರವನ್ನು ನೀಡಿದ್ದೇನೆ ಎಂದು ತಿಳಿಸಿದರು.

ಗ್ರಾಪಂ ಸದಸ್ಯ ಇಂಡವಾಳು ನಾಗರಾಜು, ಮಾಜಿ ಸದಸ್ಯ ಹೊನ್ನಯ್ಯ, ಮುಖಂಡರಾದ ರಾಜೇಂದ್ರ, ಗುಂಡಶೆಟ್ಟಿ, ರಾಮ, ಕೃಷ್ಣ ಹಾಗೂ ಗ್ರಾಮಸ್ಥರು ಹಾಜರಿದ್ದರು

ಗ್ರಾಮೀಣ ಭಾಗದ ಜನರ ಸಮಸ್ಯೆ ಶೀಘ್ರದಲ್ಲೇ ಪರಿಹಾರ



ಮಲ್ಲುಂಡಿ, ಡಿ.30– ಗ್ರಾಮೀಣ ಭಾಗದ ಜನರ ಸಮಸ್ಯೆಗಳನ್ನು ಶೀಘ್ರದಲ್ಲೇ ಪರಿಹರಿಸುವಂತೆ ಶಾಸಕ ದರ್ಶನ್ ಧ್ರುವನಾರಾಯಣ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಸಮೀಪದ ದೇವರಾಯಶೆಟ್ಟಿ ಪುರ ಗ್ರಾಪಂ ವ್ಯಾಪ್ತಿಗೆ ಬರುವ ದೇವರಾಯಶೆಟ್ಟಿಪುರ, ಕೊತ್ತನಹಳ್ಳಿ, ಇಂದಿರಾನಗರ, ಹೊಸವೀಡು, ಹೊಸವೀಡು ಹುಂಡಿ ಗ್ರಾಮಗಳಲ್ಲಿ ಜನಸಂಪರ್ಕ ಸಭೆ ನಡೆಸಿ ಮಾತನಾಡಿದ ಅವರು, ನನ್ನ ತಂದೆ ದಿ.ಆರ್.ಧ್ರುವನಾರಾಯಣ್ ಅವರ ಅವಧಿಯಲ್ಲಿ ಪಂಚಾಯತಿ ವ್ಯಾಪ್ತಿಗೆ ಬರುವ ಗ್ರಾಮಗಳಿಗೆ ಹೆಚ್ಚಿನ ಅನುದಾನ ನೀಡಿ ಅಭಿವೃದ್ಧಿಪಡಿಸಿದ್ದಾರೆ. ನಾನು ಕೂಡ ಅವರ ಹಾದಿಯಲ್ಲೇ ಸಾಗಿ ಗ್ರಾಮೀಣ ಭಾಗದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ. ಹಾಗೆಯೇ ಮುಂದಿನ ದಿನಗಳಲ್ಲಿ ಸರ್ಕಾರದಿಂದ ಹೆಚ್ಚಿನ ಅನುದಾನ ತಂದು ಗ್ರಾಮಗಳ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತೇನೆ. ಗ್ರಾಮೀಣ ಭಾಗದಲ್ಲಿ ಆಗಬೇಕಾಗಿರುವ ಕಾಮಗಾರಿಗಳನ್ನು ಹಂತ ಹಂತವಾಗಿ ಅಭಿವೃದ್ಧಿ ಪಡಿಸಲಾಗುವುದು ಎಂದರು,

ಅರಣ್ಯ ಸಚಿವರ ಸಭೆ:– ಈ ಭಾಗದಲ್ಲಿ ಕಾಡು ಪ್ರಾಣಿಗಳ ಹಾವಳಿ ಹೆಚ್ಚಾಗಿದ್ದು ಹುಲಿ ಆನೆ ಚಿರತೆಗಳಿಂದ ರೈತರ ಸಾಕು ಪ್ರಾಣಿಗಳು ಹಾಗೂ ರೈತ ಮಹಿಳೆಯನ್ನು ಬಲಿ ತೆಗೆದುಕೊಂಡಿದ್ದು, ಇದರ ಬಗ್ಗೆ ಸಚಿವರ ಜೊತೆ ಚರ್ಚೆ ಮಾಡಲಾಗಿದೆ. ಅವರು ಈ ಭಾಗದಲ್ಲೇ ಒಂದು ಸಭೆ ಮಾಡಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿ ಮುಂದಿನ ವಾರ ಸಭೆ ನಡೆಸಲು ಅರಣ್ಯ ಸಚಿವರು ಹೇಳಿರುವುದಾಗಿ ಹೇಳಿದರು.

ಇದೇ ವೇಳೆ ಗ್ರಾಮದ ಜನರು ತಮ್ಮ ಗ್ರಾಮದ ವಿವಿಧ ಸಮಸ್ಯೆಗಳ ಬಗ್ಗೆ ಶಾಸಕರ ಬಳಿ ಅಹವಾಲು ಸಲ್ಲಿಸಿದರು.

ರೈತರ ಜಮೀನಿನ ಸಾಗುವಳಿ ಪತ್ರ ವಿತರಣೆ, ಶಾಲೆ ಕೊಠಡಿಗಳ ನಿರ್ಮಾಣ ಸಿ ಸಿ ರಸ್ತೆ, ಗ್ರಾಮಗಳಿಗೆ ಬಸ್ಸಿನ ಸೌಲಭ್ಯ, ಕಾಡು ಪ್ರಾಣಿಗಳ ಹಾವಳಿ ತಪ್ಪಿಸಲು ರೈಲ್ವೆ ಕಂಬಿ, ಮುಂತಾದ ಬೇಡಿಕೆಗಳನ್ನು ಶಾಸಕರ ಮುಂದಿಟ್ಟರು.

ಬಳಿಕ ಶಾಸಕರು ಕೆಲವು ಸಮಸ್ಯೆಗಳನ್ನು ಸ್ಥಳದಲ್ಲೇ ಇದ್ದ ಅಧಿಕಾರಿಗಳಿಂದ ಪರಿಹಾರ ಸೂಚಿಸಿ ಇನ್ನೂ ಕೆಲವು ಸಮಸ್ಯೆಗಳನ್ನು ಪರಿಶೀಲಿಸಿ ಹಂತ ಹಂತವಾಗಿ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದರು.

ನಗರದಲ್ಲಿ ನಡೆದ 20 ನೇ ವಾರ್ಡಿನ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪರಾಭವಗೊಂಡಿದ್ದು ಮತದಾರರ ತೀರ್ಪಿಗೆ ತಲೆ ಬಾಗುತ್ತೇವೆ. ಮುಂದಿನ ದಿನಗಳಲ್ಲಿ ಕ್ಷೇತ್ರದಲ್ಲಿ ಕಾಂಗ್ರೆಸ್ ಸಂಘಟನೆಗೆ ಹೆಚ್ಚು ಒತ್ತು ನೀಡಲಾಗುವುದು ಎಂದು ತಿಳಿಸಿದರು.

ಕಾನೂನು ಸುವ್ಯವಸ್ಥೆ: ಇತ್ತೀಚಿನ ದಿನದಲ್ಲಿ ನಡೆದ ಅಂಧಕಾಸುರನ ಪ್ರಕರಣದ ಬಗ್ಗೆ ಮಾಹಿತಿ ಪಡೆದು ಪೊಲೀಸ್ ಅಧಿಕಾರಿಗಳ ಜೊತೆ ಮಾತನಾಡಿ ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು ಎಂದು ಸೂಚನೆ ನೀಡಿದ್ದೇನೆ. ಕೆಲವರು ನನ್ನ ಬಗ್ಗೆ ಅಪಪ್ರಚಾರ ಮಾಡುತ್ತಿದ್ದಾರೆ. ಅದು ಸರಿಯಲ್ಲ. ನನ್ನ ಕ್ಷೇತ್ರ ನಂಜನಗೂಡು ಶಾಂತಿಯ ತೋಟವಾಗಿದೆ. ನಾನು ಕಾನೂನು ಸುವ್ಯವಸ್ಥೆ ಕಾಪಾಡಲು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ ಎಂದು ಹೇಳಿದರು.

ಈಗಾಗಲೇ ರಾಜ್ಯದಲ್ಲಿ ಕೊವೀಡ್ ಹೆಚ್ಚಾಗುತ್ತಿದ್ದು ಕ್ಷೇತ್ರದಲ್ಲಿ ಜನತೆ ಮುಂಜಾಗ್ರತೆಯಿಂದ ಇರಬೇಕು. 60 ವರ್ಷದ ಮೇಲ್ಪಟ್ಟವರು ಮಾಸ್ಕ್ ಧರಿಸಿ ಪ್ರತಿಯೊಬ್ಬರು ತಮ್ಮ ಆರೋಗ್ಯದ ಕಡೆ ಗಮನ ಹರಿಸಿ ಎಂದು ಕರೆ ನೀಡಿದರು.

ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ಗ್ರಾಪಂ ಅಧ್ಯಕ್ಷೆ ಶಿಲ್ಪ ಸುರೇಶ್, ಹುಲ್ಲಹಳ್ಳಿ ಬ್ಲಾಕ್ ಅಧ್ಯಕ್ಷ ಶ್ರೀಕಂಠನಾಯಕ, ಎಸ್ಟಿ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ದೊರೆಸ್ವಾಮಿ ನಾಯಕ,ಉಪಾಧ್ಯಕ್ಷ ಬಿ ಟಿ ಕುಮಾರ್, ಎಸ್ಸಿ ಮೋರ್ಚಾ ಜಿಲ್ಲಾ ಉಪಾಧ್ಯಕ್ಷ ಮಹದೇವ್ರ, ಮಾಜಿ ಗ್ರಾಪಂ ಅಧ್ಯಕ್ಷ ಮಹದೇವಸ್ವಾಮಿ, ಮುಖಂಡರುಗಳಾದ ಜಯರಾಂ, ಬಸವಣ್ಣ ಸೇರಿದಂತೆ ತಾಲ್ಲೂಕು ಮಟ್ಟದ ಅಧಿಕಾರಿಗಳು ಹಾಜರಿದ್ದರು

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಡೆವಿಲ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಅನಿಮಲ್ (ಹಿಂ)	2 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಾಟೇರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಾಟೇರ (ಕ)	4 ಪ್ರದರ್ಶನಗಳು
ರಾಜಕಮಲ್	
ಕಾಟೇರ (ಕ)	4 ಪ್ರದರ್ಶನಗಳು
ಸಂಗಂ	
ಸಲಾರ್ (ಕ) 3 ಪ್ರದರ್ಶನಗಳು ಸಲಾರ್ (ಹಿಂ)	1 ಪ್ರದರ್ಶನಗಳು
ಲಿಡೋ	
ಕೈವಾ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸಲಾರ್ (ಹಿಂ)	4 ಪ್ರದರ್ಶನಗಳು
ಪ್ರಭಾ	
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	**ಸಲಾರ್– 1 (ತೆ):** ಬೆ.9.15ಕ್ಕೆ, ಮ.3.50ಕ್ಕೆ, ರಾ.10.20ಕ್ಕೆ, **ಡಂಕಿ (ಹಿಂ):** ಮ.12.50ಕ್ಕೆ, ರಾ.7.14ಕ್ಕೆ.
ಸ್ಕ್ರೀನ್ 2	**ಸಲಾರ್–1 (ಕ):** ಬೆ.9ಕ್ಕೆ, ಸಂ.6.50ಕ್ಕೆ, **ಅನಿಮಲ್ (ಹಿಂ):** ಮ.12.20ಕ್ಕೆ, **ಸ್ಯಾಮ್ ಬಹದ್ದೂರ್ (ಹಿಂ):** ಸಂ.4.05ಕ್ಕೆ, **ನೆರು (ಮ):** ರಾ.10.15ಕ್ಕೆ,
ಸ್ಕ್ರೀನ್ 3	**ಸಲಾರ್–1 (ತೆ):** ಬೆ.7ಕ್ಕೆ, **ಡಂಕಿ (ಹಿಂ):** ಬೆ.10.30ಕ್ಕೆ, **ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ):** ಮ.1.45ಕ್ಕೆ, ಸಂ.4.50ಕ್ಕೆ, ರಾ.7.15ಕ್ಕೆ, **ಸಲಾರ್ (ಕ):** ರಾ.9.55ಕ್ಕೆ.
ಸ್ಕ್ರೀನ್ 4	**ಸಲಾರ್–1(ತೆ):** ಬೆ.7.15ಕ್ಕೆ, ಮ.12.30ಕ್ಕೆ, ರಾ.7ಕ್ಕೆ, **ಡಂಕಿ (ಹಿಂ):** ಮ.3.55ಕ್ಕೆ, ರಾ.10.25ಕ್ಕೆ

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	**ಡಂಕಿ (ಹಿಂ):** ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	**ಸಲಾರ್ –1 (ತೆ):** ಬೆ.8.10ಕ್ಕೆ, ಬೆ.11.45ಕ್ಕೆ, ಮ.3.20ಕ್ಕೆ, ಸಂ.6.55ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 3	**ಡಂಕಿ (ಹಿಂ):** ಬೆ.11.30ಕ್ಕೆ, ಸಂ.6.25ಕ್ಕೆ, **ಸಲಾರ್–1 (ಹಿಂ):** ಮ.2.50ಕ್ಕೆ, **ಸಲಾರ್ –1 (ಕ):** ರಾ.9.45ಕ್ಕೆ.
ಸ್ಕ್ರೀನ್ 4	**ಸಲಾರ್–1 (ತೆ):** ಬೆ.8.40ಕ್ಕೆ, **ಸಲಾರ್–1 (ಕ):** ಮ.12.15ಕ್ಕೆ, ಸಂ.6.35ಕ್ಕೆ, **ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ):** ಮ.3.50ಕ್ಕೆ, ರಾ.10.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	**ಪಾರ್ಕಿಂಗ್ (ಕ):** ಬೆ.10.35ಕ್ಕೆ, **ಸಪ್ತ ಸಾಗರದಾಚೆ ಎಲ್ಲೋ 2 (ಕ):** ಮ.1.10ಕ್ಕೆ, **ಬ್ಯಾಡ್ ಮ್ಯಾನರ್ಸ್ (ಕ):** ಸಂ.4ಕ್ಕೆ, **ಅರ್ಧಂಬರ್ಧ ಪ್ರೇಮ ಕಥೆ (ಕ):** ಸಂ.6.35ಕ್ಕೆ, **ಅನ್ನಪೂರ್ಣಿ (ತ):** ರಾ.9.15ಕ್ಕೆ
ಸ್ಕ್ರೀನ್ 2	**ಅನಿಮಲ್ (ಹಿಂ):** ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, **ಸ್ಯಾಮ್ ಬಹದ್ದೂರ್ (ಹಿಂ):** ಮ.1.45ಕ್ಕೆ.
ಸ್ಕ್ರೀನ್ 3	**ಸ್ಯಾಮ್ ಬಹದ್ದೂರ್ (ಹಿಂ):** ಬೆ.10.10ಕ್ಕೆ, ಸಂ.4.50ಕ್ಕೆ, **ಅನಿಮಲ್ (ಹಿಂ):** ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	**ಸಪ್ತ ಸಾಗರದಾಚೆ ಎಲ್ಲೋ 2 (ಕ):** ಬೆ.10.45ಕ್ಕೆ, **ಅನಿಮಲ್ (ಹಿಂ):** ಮ.2.40ಕ್ಕೆ, **ನೆಪೋಲಿಯನ್ (ಇಂ):** ಸಂ.6.25ಕ್ಕೆ, **ಸ್ಯಾಮ್ ಬಹದ್ದೂರ್ (ಹಿಂ):** ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ): ಬೆ.9.35ಕ್ಕೆ, ಮ.3.55ಕ್ಕೆ, ರಾ.10ಕ್ಕೆ, **ಡಂಕಿ (ಹಿಂ):** ಬೆ.9ಕ್ಕೆ, ಬೆ.11.40ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ಸಂ.6.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, **ನೆರು (ಮ):** ರಾ.10.10ಕ್ಕೆ, **ಸಲಾರ್ –1 (ಮ):** ಸಂ.6.35ಕ್ಕೆ, **ಸಲಾರ್–1 (ಹಿಂ):** ಮ.2.50ಕ್ಕೆ, ಸಂ.5.55ಕ್ಕೆ, ರಾ.10ಕ್ಕೆ, **ಸಲಾರ್–1 (ಕ):** ಬೆ.8.05ಕ್ಕೆ, ಬೆ.11.15ಕ್ಕೆ, ಮ.3ಕ್ಕೆ, ಸಂ.6.25ಕ್ಕೆ, **ಸಲಾರ್– 1(ತೆ):** ಬೆ.7.10ಕ್ಕೆ, ಬೆ.7.40ಕ್ಕೆ, ಬೆ.8.10ಕ್ಕೆ, ರಾ.10.45ಕ್ಕೆ, ಬೆ.11.45ಕ್ಕೆ, ಮ.12.20ಕ್ಕೆ, ಮ.3.20ಕ್ಕೆ, ಮ.2.20ಕ್ಕೆ, ಸಂ.6.55ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕೋಟೆ, ಸರಗೂರಲ್ಲಿ ಸಮಾಜ ರಕ್ಷಣಾ ಸೇನೆ ಅಸ್ತಿತ್ವಕ್ಕೆ



ಹೆಚ್.ಡಿ.ಕೋಟೆ, ಡಿ.30– ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಆದಿವಾಸಿಗಳಿದ್ದು, ಅವರಿಗೆ ಸರ್ಕಾರದ ಸವಲತ್ತುಗಳನ್ನು ಸರಿಯಾದ ರೀತಿಯಲ್ಲಿ ತಲುಪಿಸಲು ಕೋಟೆ, ಸರಗೂರು ತಾಲೂಕಲ್ಲಿ ಸಮಾಜ ರಕ್ಷಣಾ ಸೇನೆಯ ಶಾಖೆ ಆರಂಭಿಸಲಾಗಿದೆ ಎಂದು ಸಮಾಜ ರಕ್ಷಣಾ ಸೇನೆಯ ರಾಜ್ಯಾಧ್ಯಕ್ಷ ಆನಂದ್ ಎಂ. ಕಲ್ಕಿ ತಿಳಿಸಿದರು.

ಪಟ್ಟಣದ ಹ್ಯಾಂಡ್‌ಪೋಸ್ಟ್ ವೃತ್ತದ ಬಳಿ ನೂತನವಾಗಿ ಸಮಾಜ ರಕ್ಷಣಾ ಸೇನೆ ತಾಲೂಕು ಶಾಖೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಸಹ ಸರ್ಕಾರದ ಸವಲತ್ತುಗಳು ತಲುಪಬೇಕು. ಅದನ್ನು ಮನಗಂಡು ನಾವು ಸಂಘಟನೆಯನ್ನು ಸ್ಥಾಪಿಸಿದ್ದೇವೆ, ಅದರಂತೆ ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕಿನ ಆದಿವಾಸಿಗಳಿಗೆ ಸವಲತ್ತು ದೊರಕಿಸಿ ಕೊಡುವ ನಿಟ್ಟಿನಲ್ಲಿ ಕೆಲಸ ಮಾಡುತ್ತೇವೆ ಎಂದರು.

ಈ ವೇಳೆ ರಾಜ್ಯ ಕಾರ್ಯದರ್ಶಿ ಹನುಮಂತರಾಜು, ಉಪಾಧ್ಯಕ್ಷ ಮಹೇಶ್, ಕಾನೂನು ಸಲಹೆಗಾರ ಭರತ್ ಕುಮಾರ್, ಸಂಘಟನಾ ಕಾರ್ಯದರ್ಶಿ ನವೀನ್ ಸಿ.ಆರ್, ಎಚ್.ಡಿ. ಕೋಟೆ ತಾಲೂಕು ಘಟಕದ ಅಧ್ಯಕ್ಷ ಎಸ್.ಟಿ. ಜವರೇಗೌಡ, ಉಪಾಧ್ಯಕ್ಷ ಮಂಜು, ಸಂಘಟನಾ ಕಾರ್ಯದರ್ಶಿ ಮಂಜೇಗೌಡ, ಗೌರವಾಧ್ಯಕ್ಷ ಶಿವಪ್ಪ ಶೆಟ್ಟಿ, ಸರಗೂರು ತಾಲೂಕು ಅಧ್ಯಕ್ಷ ವೈಕುಂಠನಾಯಕ, ಉಪಾಧ್ಯಕ್ಷ ಮಹದೇವನಾಯಕ ಉಪಸ್ಥಿತರಿದ್ದರು.

ಪಟೇಲ್ ಬಸವಣ್ಣ ನಿಧನ



ಸರಗೂರು: ಕೊತ್ತೆಗಾಲ ಗ್ರಾಮದ ಪಟೇಲ್ ಬಸವಣ್ಣ (50) ಶನಿವಾರ ಸಂಜೆ ಹೃದಯಾಘಾತದಿಂದ ನಿಧನರಾಗಿದ್ದಾರೆ. ಮೃತರು ಪತ್ನಿ ಸೇರಿದಂತೆ ಇಬ್ಬರು ಪುತ್ರಿಯರು ಅಪಾರ ಬಂಧುಬಳಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಭಾನುವಾರ ಮೃತರ ಜಮೀನಿನಲ್ಲಿ ನಡೆಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೃಷ್ಣಮೂರ್ತಿ



ಸರಗೂರು: ಪಟ್ಟಣದ 4ನೇ ವಾರ್ಡ್ ನಿವಾಸಿಯಾದ ಉಪನ್ಯಾಸಕ ಕೃಷ್ಣಮೂರ್ತಿ (56)ನಿಧನರಾಗಿದ್ದಾರೆ, ಇವರು ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದು, ಶನಿವಾರ ತಡರಾತ್ರಿ ನಿಧನರಾಗಿದ್ದಾರೆ. ಮೃತರು ಪತ್ನಿ, ಒಬ್ಬ ಪುತ್ರಿ, ಒಬ್ಬ ಪುತ್ರ ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಪಟ್ಟಣದ ಡಾ.ಅಂಬೇಡ್ಕರ್ ರುದ್ರಭೂಮಿಯಲ್ಲಿ ಶನಿವಾರ ನಡೆಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪ್ರಜಾಪ್ರಭುತ್ವದಲ್ಲಿ ಹೋರಾಟಗಳು ಅಹಿಂಸಾತ್ಮಕವಾಗಿರಬೇಕು...

● ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಮತ ● ನಿಡುಮಾಮಿಡಿ ಸ್ವಾಮೀಜಿ ಪೀಠಾರೋಹಣದ 33ನೇ ವರ್ಷಾಚರಣೆಗೆ ಚಾಲನೆ



ಬೆಂಗಳೂರು, ಡಿ. 30(ಕೆಎಂಶಿ)–ಮನುಷ್ಯತ್ವ ಅಂತಿಮ ಗುರಿಯಾಗಬೇಕು, ಅಲ್ಪಮಾನವರಾಗದೇ, ವಿಶ್ವಮಾನವರಾಗುವತ್ತ ಪ್ರಯತ್ನವಿರಬೇಕು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹೋರಾಟಗಳು ಅಹಿಂಸಾತ್ಮಕವಾಗಿರಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.

ನಿಡುಮಾಮಿಡಿ ಸ್ವಾಮೀಜಿ ಪೀಠಾರೋಹಣದ 33ನೇ ವರ್ಷಾಚರಣೆಗೆ ಚಾಲನೆ ನೀಡಿ ಮಾತನಾಡಿದ ಅವರು, ಸಂವಿಧಾನದ ಧ್ಯೇಯೋದ್ದೇಶಗಳನ್ನು ಜಾರಿಗೊಳಿಸುವುದು ಸರ್ಕಾರದ ಜವಾಬ್ದಾರಿ. ಸಂವಿಧಾನದ ಆಶಯಗಳನ್ನು ಈಡೇರಿಸಲು ದುರ್ಬಲ ವರ್ಗದವರಿಗೆ ಆರ್ಥಿಕ, ಸಾಮಾಜಿಕ ಶಕ್ತಿ ತುಂಬುವ ಕೆಲಸವನ್ನು ಸರ್ಕಾರ ಮಾಡುತ್ತಿದೆ ಎಂದರು. ಸಮಾಜದಲ್ಲಿನ ವೈರುಧ್ಯಗಳು, ಜಾತೀಯತೆ, ಅಸಮಾನತೆಗಳು ತೊಲಗಿದಾಗ ಮಾತ್ರ ಸಮಾಜ ಪರಿವರ್ತನೆಯಾಗಲು ಸಾಧ್ಯ, ಸಮಸಮಾಜ ನಿರ್ಮಾಣವಾಗಲು ಅಸಮಾನತೆ ತೊಲಗಲೇಬೇಕು.

ಮನುಷ್ಯನ ಸ್ವಾರ್ಥದಿಂದ ಸಮಾಜದಲ್ಲಿ ಅಸಮಾನತೆ ಉಂಟಾಗಿದೆ, ಆರ್ಥಿಕ ಹಾಗೂ ಸಾಮಾಜಿಕ ಅಸಮಾನತೆ ನೀಗಿಸದೇ ದೇಶಕ್ಕೆ ಸ್ವಾತಂತ್ರ್ಯ ದೊರೆತರೂ ಪ್ರಯೋಜನವಿಲ್ಲ ಎಂದು ಡಾ.ಅಂಬೇಡ್ಕರ್ ಪ್ರತಿಪಾದಿಸಿದ್ದರು.

ಹಿಂದುಳಿದವರಿಗೆ ಆರ್ಥಿಕ, ಸಾಮಾಜಿಕ ಸಮಾನತೆ ದೊರೆತಾಗ ಮಾತ್ರ ಸ್ವಾತಂತ್ರ್ಯ ಸಾರ್ಥಕವಾಗುತ್ತದೆ, ಈ ಅಂಶವನ್ನು ಗಮನದಲ್ಲಿರಿಸಿಕೊಂಡು ಕಾರ್ಯ ನಿರ್ವಹಿಸುವುದು ಎಲ್ಲರ ಜವಾಬ್ದಾರಿ. ನಿಡುಮಾಮಿಡಿ ಶ್ರೀಮಠವು ಯಾವುದೇ ಜಾತಿ, ಧರ್ಮ, ಸಂಸ್ಕೃತಿಗಳಿಗೆ ಸೀಮಿತವಾಗದೆ ಜಾತ್ಯತೀತ ಮಾನವ ಧರ್ಮ ಪೀಠ ಎನಿಸಿದೆ, ಈ ಗುರಿ ಈಡೇರಿಕೆಗೆ ಸರ್ಕಾರ ಎಲ್ಲ ಸಹಕಾರ ನೀಡಲಿದೆ ಎಂದರು.

ಅಲ್ಪಸಂಖ್ಯಾತರ ಬಡಾವಣೆ ಸುಧಾರಣೆಗೆ 11 ಸಾವಿರ ಕೋಟಿ; ವಿಪಕ್ಷ ನಾಯಕ ಅಶೋಕ್ ಆಕ್ಷೇಪ

ಬೆಂಗಳೂರು, ಡಿ. 30(ಕೆಎಂಶಿ)–ಅಲ್ಪಸಂಖ್ಯಾತರ ಬಡಾವಣೆಗಳ ಸುಧಾರಣೆಗೆ 11 ಸಾವಿರ ಕೋಟಿ ರೂ. ನೀಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೀಡಿರುವ ಹೇಳಿಕೆ, ಹಿಂದೂ–ಮುಸ್ಲಿಮರನ್ನು ಬೇರೆ ಮಾಡುವುದಾಗಿದೆ ಎಂದು ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್.ಅಶೋಕ್ ಇಂದಿಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರತಿ ರೈತರಿಗೆ 2 ಸಾವಿರ ರೂ. ನೀಡುವುದಾಗಿ ಹೇಳಿದ್ದರು. ಇದುವರೆಗೆ ಈ ಹಣ ನೀಡದವರು, 11 ಸಾವಿರ ಕೋಟಿ ರೂ.ಗಳನ್ನು ಅಲ್ಪಸಂಖ್ಯಾತರ ಬಡಾವಣೆಗೆ ಖರ್ಚು ಮಾಡುತ್ತೇವೆ ಎನ್ನುತ್ತಿದ್ದಾರೆ. ಮುಸ್ಲಿಮರ ಕಾಲೋನಿ ಬೇರೆ, ಹಿಂದೂಗಳ ಪ್ರದೇಶ ಬೇರೆ ಎಂದು ವರ್ಗೀಕರಣ ಮಾಡುವ ಮೂಲಕ ಸಂವಿಧಾನಕ್ಕೆ ಅಪಚಾರವೆಸಗಿದ್ದಾರೆ ಎಂದರು. ಕಾಂಗ್ರೆಸ್ ಸರ್ಕಾರ ಒಂದೆಡೆ ಅಲ್ಪಸಂಖ್ಯಾತರಿಗೆ ಕಾಣಿಕೆ ಮೇಲೆ ಕಾಣಿಕೆ ನೀಡುತ್ತಿದ್ದು, ಇನ್ನೊಂದೆಡೆ ಬರಗಾಲದಿಂದ ನೊಂದ ರೈತರಿಗೆ ನೇಣಿನ ಕುಣಿಕೆ ಹಾಕುತ್ತಿದೆ. ಕಳೆದ ಏಳು ತಿಂಗಳಲ್ಲಿ ಸಾಲ ತೀರಿಸಲಾಗದೆ 500ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.



ರಾಜ್ಯದಲ್ಲಿ ಅಭಿವೃದ್ಧಿಗೆ ಸಿಗುವುದೇ 50 ರಿಂದ 60 ಸಾವಿರ ಕೋಟಿ ರೂ., ಉಳಿದದ್ದು ಇತರೆ ವೆಚ್ಚಗಳಿಗೆ ಖರ್ಚಾಗುತ್ತದೆ, ಇದರಲ್ಲಿ 11 ಸಾವಿರ ಕೋಟಿ ರೂ.ಗಳನ್ನು ಅಲ್ಪಸಂಖ್ಯಾತರ ಪ್ರದೇಶಗಳಿಗೆ ನೀಡಿದ್ದೇನೆ ಎಂದಿದ್ದಾರೆ. ಹಿಂದೂಗಳ ಕಾಲೋನಿ ಎರಡನೇ ದರ್ಜೆಯದ್ದೇ. ಹಾಗಾದರೆ, ದಲಿತರಿರುವ ಕಾಲೋನಿಗಳ ಗತಿ ಏನು ಎಂದು ಪ್ರಶ್ನಿಸಿದ್ದಾರೆ. ಮುಖ್ಯಮಂತ್ರಿ ತುಘಲಕ್ ದರ್ಬಾರ್ ನಡೆಸುತ್ತಿದ್ದು, ತುಷ್ಟೀಕರಣ ಪ್ರವೃತ್ತಿ ಅವರಿಗೆ ಕರಗತವಾಗಿದೆ. ಟಿಪ್ಪು ಸಂಸ್ಕೃತಿಯನ್ನು ಹೇರುವ ಕೆಲಸ ಮಾಡುತ್ತಿದ್ದಾರೆ, ಅಭಿವೃದ್ಧಿ ಯೋಜನೆಯ ಒಂದೇ ಒಂದು ಅಡಿಗಲ್ಲು ಹಾಕಿಲ್ಲವೆಂದು ಕಾಂಗ್ರೆಸ್ ಶಾಸಕರು ದೂರುತ್ತಿದ್ದಾರೆ, ರೈತರ ತಲೆಯ ಮೇಲೆ ಸರ್ಕಾರ ಕಲ್ಲು ಹಾಕಿದೆ ಎಂದರು. ಶಿಕ್ಷಣ ಸಚಿವ ಮಧು ಬಂಗಾರಪ್ಪ ವಿರುದ್ಧ ಚೆಕ್ ಬೌನ್ಸ್ ಪ್ರಕರಣದಲ್ಲಿ ಕೋರ್ಟ್ ಆದೇಶ ಬಂದ ನಂತರವೂ ಸಚಿವರ ರಾಜೀನಾಮೆ ಪಡೆಯದೆ ಮುಖ್ಯಮಂತ್ರಿ ಸಮರ್ಥನೆ ಮಾಡಿಕೊಳ್ಳುತ್ತಿದ್ದಾರೆ. ಕೂಡಲೇ ಅವರ ರಾಜೀನಾಮೆ ಪಡೆಯಬೇಕು ಎಂದು ಆಗ್ರಹಿಸಿದರು.

ರಾಜಸ್ಥಾನದಲ್ಲಿ ಮೀನಾ, ರಾಥೋಡ್ ಸೇರಿ 12 ನೂತನ ಸಚಿವರು ಪ್ರಮಾಣ

ಜೈಪುರ: ರಾಜಸ್ಥಾನ ಮುಖ್ಯಮಂತ್ರಿ ಭಜನ್ ಲಾಲ್ ಶರ್ಮಾ ಅವರು ಶನಿವಾರ ತಮ್ಮ ಸಚಿವ ಸಂಪುಟ ವಿಸ್ತರಣೆ ಮಾಡಿದ್ದು, ಮಾಜಿ ಕೇಂದ್ರ ಸಚಿವ ರಾಜ್ಯವರ್ಧನ್ ಸಿಂಗ್ ರಾಥೋಡ್ ಮತ್ತು ಬಿಜೆಪಿಯ ಹಿರಿಯ ನಾಯಕ ಕಿರೋಡಿ ಲಾಲ್ ಮೀನಾ ಸೇರಿದಂತೆ 12 ಶಾಸಕರು ನೂತನ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು. ಇಂದು ರಾಜಭವನದಲ್ಲಿ ನಡೆದ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ 10 ಶಾಸಕರು ರಾಜ್ಯ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು. ರಾಜ್ಯಪಾಲ ಕಲ್ರಾಜ್ ಮಿಶ್ರಾ ಅವರು ನೂತನ ಸಚಿವರಿಗೆ ಪ್ರಮಾಣ ವಚನ ಬೋಧಿಸಿದರು. ಕಿರೋಡಿ ಲಾಲ್ ಮೀನಾ, ಮದನ್ ದಿಲಾವರ್, ರಾಜ್ಯವರ್ಧನ್ ಸಿಂಗ್ ರಾಥೋಡ್, ಗಜೇಂದ್ರ ಸಿಂಗ್ ಖಿಮ್ಸರ್, ಬಾಬುಲಾಲ್ ಖರಾಡಿ, ಜೋಗರಾಮ್ ಪಟೇಲ್, ಸುರೇಶ್ ಸಿಂಗ್ ರಾವತ್, ಅವಿನಾಶ್ ಗೆಹ್ಲೋಟ್, ಜೋರಾರಾಮ್ ಕುಮಾವತ್, ಹೇಮಂತ್ ಮೀನಾ, ಕನ್ಹಯ್ಯಾ ಲಾಲ್ ಚೌಧರಿ ಮತ್ತು ಸುಮಿತ್ ಗೋಡಾರ ಅವರು ಕ್ಯಾಬಿನೆಟ್ ದರ್ಜೆ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು.

ಅಮೇರಿಕಾದಲ್ಲಿ ಭಾರತೀಯ ಮೂಲದ ಶ್ರೀಮಂತ ಕುಟುಂಬದ ಸದಸ್ಯರ ಸಾವು!

ವಾಷಿಂಗ್ ಟನ್: ಅಮೇರಿಕಾದಲ್ಲಿ ಭಾರತೀಯ ಮೂಲದ ಶ್ರೀಮಂತ ಕುಟುಂಬದ ಎಲ್ಲಾ ಸದಸ್ಯರು ಸಾವನ್ನಪ್ಪಿದ್ದಾರೆ. ಯುಎಸ್‌ನ ಮೆಸಚೂಸೆಟ್ಸ್‌ನಲ್ಲಿ ಈ ಘಟನೆ ವರದಿಯಾಗಿದ್ದು, 5 ಮಿಲಿಯನ್ ಡಾಲರ್ ಮೌಲ್ಯದ ಮ್ಯಾನ್ಷನ್‌ನಲ್ಲಿ ಭಾರತೀಯ ಮೂಲದ ದಂಪತಿ ಹಾಗೂ ಅವರ ಮಗಳ ಶವ ಪತ್ತೆಯಾಗಿದೆ. ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ಮೂವರೂ ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದು ಮಾಧ್ಯಮಗಳ ವರದಿ ಮೂಲಕ ತಿಳಿದುಬಂದಿದೆ. ರಾಕೇಶ್ ಕಮಲ್ (57) ಅವರ ಪತ್ನಿ ಟೀನಾ (54) ಹಾಗೂ ಈ ದಂಪತಿಯ 18 ವರ್ಷದ ಅರಿಯಾನಾ ಮೃತ ವ್ಯಕ್ತಿಗಳಾಗಿದ್ದಾರೆ.

ಡೋವರ್ ಮೆಸಚೂಸೆಟ್ಸ್‌ನ ರಾಜಧಾನಿ ಬೋಸ್ಟನ್ ಡೌನ್‌ಟೌನ್‌ನಿಂದ ನೈಋತ್ಯಕ್ಕೆ 32 ಕಿಲೋಮೀಟರ್ ದೂರದಲ್ಲಿದೆ. ಟೀನಾ ಮತ್ತು ಅವರ ಪತಿ, ಈ ಹಿಂದೆ ಎಡುನೋವಾ ಎಂಬ ಈಗ ಸ್ಥಗಿತಗೊಂಡಿರುವ ಶಿಕ್ಷಣ ವ್ಯವಸ್ಥೆಗಳ ಕಂಪನಿಯನ್ನು ನಡೆಸುತ್ತಿದ್ದರು.

ಕೋವಿಡ್ ಪ್ರಕರಣಗಳ ಏರಿಕೆ: 743 ಕೇಸ್ ಪತ್ತೆ, 7 ಸಾವು

ನವದೆಹಲಿ: ದೇಶದಲ್ಲಿ ದಿನದಿಂದ ದಿನಕ್ಕೆ ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಿದ್ದು, 225 ದಿನಗಳ ಬಳಿಕ ಇದೇ ಮೊದಲ ಬಾರಿಗೆ 24 ಗಂಟೆಗಳ ಅವಧಿಯಲ್ಲಿ 743ಕ್ಕೂ ಕೊರೊನಾ ವೈರಸ್ ಸೋಂಕು ಪ್ರಕರಣಗಳು ಪತ್ತೆಯಾಗಿವೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಶನಿವಾರ ತಿಳಿಸಿದೆ.

ಈ ಮೂಲಕ ಈವರೆಗೆ 4,50,12,431 ಮಂದಿಗೆ ಕೋವಿಡ್ ತಗುಲಿದೆ. ಇದೇ ಅವಧಿಯಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 3,997ಕ್ಕೆ ಏರಿಕೆಯಾಗಿದೆ. ಕಳೆದ 24 ಗಂಟೆಗಳಲ್ಲಿ 7 ಮಂದಿ ಸಾವಿಗೀಡಾಗಿದ್ದು, ಈವರೆಗೆ ಮೃತಪಟ್ಟವರ ಒಟ್ಟು ಸಂಖ್ಯೆ 5,33,358ಕ್ಕೆ ಏರಿಕೆಯಾಗಿದೆ.

ಮೃತಪಟ್ಟಿರುವ 7 ಮಂದಿಯ ಪೈಕಿ ಕೇರಳದಲ್ಲಿ ಮೂರು, ಕರ್ನಾಟಕ ಎರಡು ಮತ್ತು ಛತ್ತೀಸ್‌ಗಢ ಮತ್ತು ತಮಿಳುನಾಡಿನಿಂದ ತಲಾ ಒಬ್ಬರು ಸಾವನ್ನಪ್ಪಿದ್ದಾರೆ ಎಂದು ಸಚಿವಾಲಯ ಮಾಹಿತಿ ನೀಡಿದೆ. ರಾಷ್ಟ್ರೀಯ ಕೋವಿಡ್–19 ಚೇತರಿಕೆ ದರ 98.81ರಷ್ಟಿದ್ದು, ಈವರೆಗೆ 4,44,75,076 ಮಂದಿ ಕೋವಿಡ್‌ನಿಂದ ಗುಣಮುಖರಾಗಿದ್ದಾರೆ. ಸಚಿವಾಲಯದ ವೆಬ್‌ಸೈಟ್‌ನಲ್ಲಿ ನೀಡಿರುವ ಮಾಹಿತಿ ಪ್ರಕಾರ, ದೇಶದಾದ್ಯಂತ ನಡೆಯುತ್ತಿರುವ ಲಸಿಕಾ ಅಭಿಯಾನದ ಅಡಿಯಲ್ಲಿ 220.67 ಕೋಟಿಗೂ ಅಧಿಕ ಮಂದಿಗೆ ಲಸಿಕೆಗಳನ್ನು ವಿತರಿಸಲಾಗಿದೆ ಎಂದು ತಿಳಿದುಬಂದಿದೆ.

PUBLIC NOTICE

Notice is hereby given that SRI I.P. MALLOKARADHYA, Proprietor M/S ARADHYA CONCRETE PRODUCTS is desirous to sell the under mentioned property to my client and any person or persons claiming any interest on the under mentioned property or any part thereof, is hereby required to communicate the same to me with documentary evidence at my office, situated at DOOR No. 2765/1A D13/A1, "KEYANS", 5th MAIN ROAD, V.V. PURAM (V.V. MOHALLA), MYSORE - 570 002, within 10 (Ten) days from the date of this publication, as otherwise the said sale will be completed without any reference or regard to any such purported claim or interest, which shall be deemed to have been waived for all intents and purposes.

SCHEDULE PROPERTY

Plot No. 301 and 302 in Hebbal Industrial Area, situated in Survey Numbers 110, 112, and 113 of Hebbal Village, Kasaba Hobli, Mysore Taluk, Mysore District, admeasuring 19,508 Square Meters or thereabouts and bounded on North by Plot No. 303, South by Civic amenities and Green Belt, East by Hebbal Tank and Green Belt and on West by KIADB Road.

Sd/- Dhirendra Kumar R. Mehta,
Advocate,
KEY-ANS LAW SOLUTIONS
Date: 30.12.2023
Place: Mysore

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಜೆ.ಎಲ್.ಬಿ ರಸ್ತೆ, ಮೈಸೂರು – 570005,
ದೂರವಾಣಿ/ಫ್ಯಾಕ್ಸ್: 0821–2420624
ಸಂಖ್ಯೆ: ಮೈನಪ್ರಾ/ಅಅ/ಪಿಬಿ/ಟಿಎನ್/10/2023–24 ದಿನಾಂಕ:28.12.2023

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000 ರ ನಿಯಮದಂತೆ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮದನ್ವಯ ಕೆಪಿಪಿಪಿ ಪೋರ್ಟಲ್ ಮುಖಾಂತರ **ರೂ.7.50 ರಿಂದ 25.00** ಲಕ್ಷಗಳ ಅಂದಾಜು ಮೊತ್ತದ ಒಟ್ಟು **05 ಸಂಖ್ಯೆ** ಕಾಮಗಾರಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. **ಕ್ರಮ ಸಂಖ್ಯೆ 01 ರಿಂದ 05** ರವರೆಗಿನ ಕಾಮಗಾರಿಗಳಿಗೆ ಕೆಪಿಪಿಪಿ ಪೋರ್ಟಲ್‌ನಲ್ಲಿ **ದಿನಾಂಕ: 30.12.2023** ರಿಂದ ಪಡೆಯಬಹುದಾಗಿದ್ದು, ಟೆಂಡರ್ ಸಲ್ಲಿಸಲು **ದಿನಾಂಕ: 08.01.2024** ರ ಸಂಜೆ 4.00 ಗಂಟೆಯವರೆಗೆ ಸಮಯವನ್ನು ನಿಗಧಿಪಡಿಸಿದ್ದು, ತಾಂತ್ರಿಕ ಮತ್ತು ಆರ್ಥಿಕ ಬಿಡ್‌ನ್ನು ಕ್ರಮವಾಗಿ **ದಿನಾಂಕ: 09.01.2024** ರ ಸಂಜೆ 4.30 ರ ನಂತರ ತೆರೆಯಲಾಗುವುದು.

ಅರ್ಹ ಸಮಾಲೋಚಕರು, ನೋಂದಾಯಿತ ಸಂಸ್ಥೆ ಮತ್ತು ಸಿವಿಲ್ ಗುತ್ತಿಗೆದಾರರು ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **http://KPPP.karnataka.gov.in** ಮುಖಾಂತರ ನಿಯಮಾವಳಿಯಂತೆ ಟೆಂಡರ್ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ದೂರವಾಣಿ ಸಂಖ್ಯೆ **0821–2420624** ರಿಂದ ಹಾಗೂ ಪ್ರಾಧಿಕಾರದ ವೆಬ್‌ಸೈಟ್ **www.mudamysore.gov.in** ನಲ್ಲಿ ಪ್ರಕಟಣೆಯ ಮಾಹಿತಿಯನ್ನು ಪಡೆಯಬಹುದು.

ಟಿಪ್ಪಣಿ: ಟೆಂಡರ್ ಸಲ್ಲಿಸುವ ದಿನಾಂಕಗಳು ಬದಲಾಣೆ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಇರುವ ದಿನಾಂಕಗಳನ್ನೇ ಪರಿಗಣಿಸುವುದು. ಮತ್ತೆ ದಿನ ಪತ್ರಿಕೆಗಳಲ್ಲಿ ಪ್ರಕಟಿಸುವುದಿಲ್ಲ.

ಸಹಿ/– ಅಧೀಕ್ಷಕ ಅಭಿಯಂತರರು,
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.

ಸಾರ್ವಜನಿಕ ಪ್ರಕಟಣೆ

ಈ ಸಾರ್ವಜನಿಕ ಪ್ರಕಟಣೆಯ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರರಾದೆಯಲ್ಲಿ ವಾಸವಾಗಿರುವ ಮೈಸೂರು ನಗರ, ಕುವೆಂಪುನಗರ, ಆದಿಚುಂಚನಗಿರಿ ರಸ್ತೆ, ಜೆಸಿಎಸ್‌ಟಿ, ಯುಎಸ್‌ಎ ರೆಸಿಡೆನ್ಸಿ, ಎಂ ಬ್ಲಾಕ್, ನಂ.38 ರಲ್ಲಿ ವಾಸವಾಗಿರುವ ಶ್ರೀ ಸಿ.ವೈ.ಶಿವೇಗೌಡರವರ ಧರ್ಮಪತ್ನಿಯಾದ ಸುಮಾರು 47 ವರ್ಷ ವಯಸ್ಸಿನ ಶ್ರೀಮತಿ ವಿ.ಉಮಾರಾಣಿರವರಿಗೆ ಮೈಸೂರು ನಗರ, ಟಿ.ಕೆ.ಲೇಔಟ್, 4 ನೇ ಹಂತ, 4 ನೇ ಮೇನ್, 13 ನೇ ಅಡ್ಡರಸ್ತೆ, ಹೊಯ್ಸಳ ಎಂಬ ನಾಮಾಂಕಿತದ ಮನೆ ನಂ.268 ರಲ್ಲಿ ವಾಸವಾಗಿರುವ ಲೇಟ್||ಹೆಚ್.ವಿ.ನಾರಾಯಣರಾವ್‌ರವರ ಮಗನಾದ ಸುಮಾರು 60 ವರ್ಷ ವಯಸ್ಸಿನ ಶ್ರೀ ಹೆಚ್.ಎನ್.ರಂಗನಾಥ್‌ರವರು ಷೆಡ್ಯೂಲ್‌ನಲ್ಲಿ ತೋರಿಸಿರುವ ಸ್ವತ್ತನ್ನು ಮಾರಾಟ ಮಾಡಲು ಕ್ರಯದಕರಾರು ಮಾಡಿದ್ದು, ಸದರಿಕರಾರಿನ ನಿರ್ದಿಷ್ಟಕಾರ್ಯಕ್ಷಮತೆಗಾಗಿ ನಮ್ಮ ಕಕ್ಷಿದಾರರು ಶ್ರೀ ಹೆಚ್.ಎನ್.ರಂಗನಾಥ್‌ರವರ ವಿರುದ್ಧ ಮೈಸೂರಿನ ಗೌರವಾನ್ವಿತ ಐದನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿದ್ದು, ಸದರಿ ದಾವೆಯು ಅಸಲು ದಾವೆ ಸಂಖ್ಯೆ:1508/2023 ಎಂದು ನೋಂದಾಣಿಯಾಗಿದ್ದು, ಸದರಿ ದಾವೆಯಲ್ಲಿ ಘನ ನ್ಯಾಯಾಲಯವು ಷೆಡ್ಯೂಲ್ ಸ್ವತ್ತನ್ನು ಪರಬಾರೆ ಮಾಡದಂತೆ ತಾತ್ಕಾಲಿಕ ನಿರ್ಬಂಧಾಕಾಜ್ಞೆಯ ಆದೇಶವನ್ನು ಮಾಡಿರುತ್ತದೆ, ಆದುದರಿಂದ ಒಂದು ವೇಳೆ ಷೆಡ್ಯೂಲ್ ಸ್ವತ್ತನ್ನು ಯಾವುದೇ ವ್ಯಕ್ತಿಯು ಖರೀದಿಸಿದ್ದಲ್ಲಿ ಅಂತಹ ಪರಭಾರೆಯು ಅಥವಾ ಹಸ್ತಾಂತರವು ಕಾನೂನಿನ ಅಡಿಯಲ್ಲಿ ಊರ್ಜಿತವಾಗುವುದಿಲ್ಲ. ಅದುದರಿಂದ ಸಾರ್ವಜನಿಕರಲ್ಲಿ ಈ ಸಾರ್ವಜನಿಕ ಪ್ರಕಟಣೆಯ ಮೂಲಕ ತಿಳಿಯಪಡಿಸುವುದೇನೆಂದರೆ, ಷೆಡ್ಯೂಲ್ ಸ್ವತ್ತುಗಳನ್ನು ಯಾರಾದರೂ ಕ್ರಯ–ವಿಕ್ರಯ ಮಾಡಿಕೊಂಡಲ್ಲಿ ಅಂತಹ ಕ್ರಯ– ವಿಕ್ರಯವು ಕಾನೂನಿನಡಿಯಲ್ಲಿ ಅನೂರ್ಜಿತವಾಗಿರುವುದರಿಂದ ಅಂತಹ ಕ್ರಯ–ವಿಕ್ರಯಗಳು ನಮ್ಮ ಕಕ್ಷಿದಾರರಿಗೆ ಬಾಧ್ಯಪಡಿಸುವುದಿಲ್ಲ ಎಂದು ನಮ್ಮ ಕಕ್ಷಿದಾರರು ತಿಳಿಯಪಡಿಸುತ್ತಾರೆ.

ಷೆಡ್ಯೂಲ್ ಸ್ವತ್ತು

ಮೈಸೂರು ನಗರ, ಚಾಮರಾಜ ಮೊಹಲ್ಲಾ, ಎಸ್.ಡಬ್ಲ್ಯೂ.ಟಿ.ಕೊಪ್ಪಲ್ (ಟಿ.ಕೆ.ಬಡಾವಣೆ) 4 ನೇ ಹಂತದಲ್ಲಿರುವ ನಿವೇಶನ ಸಂಖ್ಯೆ.422 ರಲ್ಲಿ ಕಟ್ಟಿರುವ ಮನೆ ಸಂಖ್ಯೆ.422 ಕ್ಕೆ ಚಕ್ಕುಬಂದಿ: ಪೂರ್ವಕ್ಕೆ: ನಿವೇಶನ ಸಂಖ್ಯೆ:409, ಪಶ್ಚಿಮಕ್ಕೆ:ರಸ್ತೆ, ಉತ್ತರಕ್ಕೆ:ನಿವೇಶನ ಸಂಖ್ಯೆ:423, ದಕ್ಷಿಣಕ್ಕೆ: ನಿವೇಶನ ಸಂಖ್ಯೆ:421. ಈ ಮಧ್ಯೆ ಇರುವ ಪೂರ್ವ ಪಶ್ಚಿಮ 59.60 ಅಡಿ, ದಕ್ಷಿಣೋತ್ತರ 40.00 ಅಡಿಗಳುಳ್ಳ ನಿವೇಶನ ಮತ್ತು ಇದರಲ್ಲಿ ಕಟ್ಟಿರುವ ಆರ್.ಸಿ.ಸಿ ಛಾವಣಿ ಹೊಂದಿರುವ ಮನೆ, ನೆಲಕ್ಕೆ ಮೊಸಾಯಿಕ್ ಹಾಸನ್ನು ಹೊಂದಿದ್ದು, ವಿದ್ಯುತ್, ನೀರು ಹಾಗೂ ಸ್ಯಾನಿಟರಿ ಸೌಲಭ್ಯಗಳನ್ನೊಳಗೊಂಡ ಪೂರ್ತಾ ಮನೆ.

ವಕೀಲರು: ಕೆ.ಮಧುಕರ್, ನಂ.13/1, 1 ನೇ ಮಹಡಿ,
8 ನೇ ಮೇನ್, 5 ನೇ ಕ್ರಾಸ್, ಸರಸ್ವತಿಪುರಂ, ಮೈಸೂರು.
ಸ್ಥಳ : ಮೈಸೂರು, ದಿನಾಂಕ: 29.12.2023

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

MRC EYE HOSPITAL

(MRC CHARITABLE TRUST)
H-1, Vinayamarga, Siddharthanagar, Mysore-11
Phone : 94806 57223 / 0821-2472102

EXPRESSION OF INTEREST

Expression of Interest Invited to run a DIAGNOSTIC LABORATORY CENTRE AT THE MRC EYE HOSPITAL, so as to reach the Administrator of the MRC Eye Hospital by 5.00 PM on or before 06 th January 2024. For more details including the Terms and Conditions please contact the MRC Eye Hospital Office.

Secretary & CEO
MRC Charitable Trust

MYSORE RACE CLUB CHARITABLE TRUST

P.B.NO.11, Race Course Road, Mysore-570010
Tel No.2521675 | Email:secretary@mysoreraceclub.com

REQUIRES

For Mysore Race Club (MRC) Eye Hospital
OPHTHALMOLOGISTS (Full Time / Part Time)

Preference will be given to doctors possessing MS/DNB/DOMS qualifications and surgical expertise in SICS and Phaco Emulsification. Freshly graduated candidates may also be considered. Additionally, candidates are expected to have graduated from a reputable institution. Candidates who are interested may submit their detailed resume along with their experience and salary expectations to **administrator@mrceyehospital.in** within a period of 07 days.

Secretary & CEO
MRC Charitable Trust

ಪ್ರಕಟಣೆಯ ಕೃಪೆಗಾಗಿ

ಶ್ರೀ ಛಾಯಾದೇವಿ ವಿದ್ಯಾನಿಕೇತನ ಟ್ರಸ್ಟ್ (ರಿ)

ಶ್ರೀ ಮಹಾವೀರ್ ಶಿಕ್ಷಣ ಮಹಾವಿದ್ಯಾಲಯ (ಬಿ.ಎಡ್.), ಹುಣಸೂರಿನಲ್ಲಿ ಪ್ರಾಂಶುಪಾಲರು ಮತ್ತು ಉಪನ್ಯಾಸಕರ ಹುದ್ದೆಗೆ ಬೇಕಾಗಿದ್ದಾರೆ.
ದೂರವಾಣಿ: 9113995407 / 9844377694

ಕ್ರ. ಸಂ.	ಹುದ್ದೆ	ವಿದ್ಯಾರ್ಹತೆ
01	ಪ್ರಾಂಶುಪಾಲರು–01	ಎಂ.ಎ./ಎಂ.ಎಸ್ಸಿ, ಎಂ.ಎಡ್. ಶೇ. 55 ಅಂಕಗಳು, ಜೊತೆಗೆ ಪಿ.ಹೆಚ್.ಡಿ ಮತ್ತು 10 ವರ್ಷಗಳ ಸೇವಾನುಭವ.
02	ಉಪನ್ಯಾಸಕರು–20	ಎಂ.ಎ./ಎಂ.ಎಸ್ಸಿ, ಎಂ.ಎಡ್, SLET / NET ಸೇವಾನುಭವದವರಿಗೆ ಆದ್ಯತೆ (ಉಪನ್ಯಾಸಕರು ಕನ್ನಡ–(1), ಇಂಗ್ಲೀಷ್–(1), ಇತಿಹಾಸ (1) ಭೂಗೋಳಶಾಸ್ತ್ರ–(1), ಭೌತಶಾಸ್ತ್ರ–(1), ಗಣಿತ–(1), ಜೀವಶಾಸ್ತ್ರ–(1) ಮತ್ತು ರಸಾಯನ ಶಾಸ್ತ್ರ–(1), ಶಿಕ್ಷಣಶಾಸ್ತ್ರ–(2), ವಾಣಿಜ್ಯಶಾಸ್ತ್ರ–(1)
03	ದೈಹಿಕ ಶಿಕ್ಷಣ ನಿರ್ದೇಶಕರು–01	ಬಿ.ಎ/ಎಂ.ಎ./ ಬಿ.ಪಿ.ಎಡ್, ಎಂ.ಪಿ.ಎಡ್. ಸೇವಾನುಭವದವರಿಗೆ ಆದ್ಯತೆ.
04	ಗ್ರಂಥಪಾಲಕರು–01	ಎಂ.ಎ. / ಎಂ.ಎಲ್.ಐ.ಎಸ್ಸಿ ಬಿ.ಇಡಿ ಸೇವಾನುಭವದವರಿಗೆ ಆದ್ಯತೆ.

ವಿ.ಸೂ:– ಅರ್ಹ ಅಭ್ಯರ್ಥಿಗಳು ವಿದ್ಯಾರ್ಹತೆ, ಸೇವಾನುಭವಗಳನ್ನು ಒಳಗೊಂಡ ಮೂಲ ದಾಖಲಾತಿಗಳೊಂದಿಗೆ ಪ್ರಕಟಿಸಿದ 07 ದಿನದೊಳಗೆ ಕಾಲೇಜಿನ ವಿಳಾಸಕ್ಕೆ ಅಥವಾ ಇಮೇಲ್: **scvt8055@gmail.com** ಗೆ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

ಸಪ್ತರ್ಷಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ

48, 2 ನೇ ಮುಖ್ಯರಸ್ತೆ, 18ನೇ ಅಡ್ಡರಸ್ತೆ, ಜಯನಗರ, ಮೈಸೂರು – 570 014

ಮಾನ್ಯ ಸಹಕಾರಿ ಬಂಧುಗಳೇ,

ಮುಂದಿನ 5 ವರ್ಷಗಳ ಆಡಳಿತ ಮಂಡಳಿ ಚುನಾವಣೆಗೆ ನಿರ್ದೇಶಕ ಸ್ಥಾನಕ್ಕೆ ಸ್ಪರ್ಧಿಸುತ್ತಿರುವ ಮತ್ತು ಸಹಕಾರಿಯ ಏಳಿಗೆಗೆ ಸತತ ಪರಿಶ್ರಮ ಪಡುತ್ತಿರುವ ಈ ಕೆಳಕಂಡ ಅಭ್ಯರ್ಥಿಗಳಾದ ನಮಗೆ ತಮ್ಮ ಅಮೂಲ್ಯ ಮತ ನೀಡಿ ಜಯಶೀಲರನ್ನಾಗಿಸಬೇಕೆಂದು ತಮ್ಮಲ್ಲಿ ಕಳಕಳಿಯಿಂದ ವಿನಂತಿಸುತ್ತೇವೆ.

ಸಾಮಾನ್ಯ ವರ್ಗ 9 ಮಹಿಳಾ ಮೀಸಲು 2, ಪರಿಶಿಷ್ಟ ಜಾತಿ 1

ಕ್ರಮ ಸಂಖ್ಯೆ	ಅಭ್ಯರ್ಥಿ	ಚಿಹ್ನೆ
2	ಕೃಷ್ಣವೇಣಿ ಎಂ.ಜಿ. ಬಿ.ಎ. ಸಂಗೀತ ವಿದ್ವತ್ (ಮಹಿಳಾ ಮೀಸಲು) ಸಂಸ್ಥಾಪಕ ನಿರ್ದೇಶಕರು, ಮಾಜಿ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರು ಮೊ. 9845128185	ಸ್ಕೂಟರ್
6	ಗುರುರಾಜ್ ಎಂ.ಎಸ್. (ಸಾಮಾನ್ಯ ವರ್ಗ) ಹಾಲಿ ಖಜಾಂಚಿ, ಅಧ್ಯಕ್ಷರು, ಶ್ರೀನಿವಾಸ ಕಲ್ಯಾಣ ಸೇವಾ ಸಮಿತಿ ಅಧ್ಯಕ್ಷರು, ಆರ್ಯ ಸೇವಾ ಟ್ರಸ್ಟ್ ಮೊ. 9448307048	ದ್ರಾಕ್ಷಿಗೊಂಚಲು
7	ಚಂದ್ರಶೇಖರ್ ಎಂ.ಎಸ್. ಬಿ.ಎಂ.ಇ. (ಸಾಮಾನ್ಯ ವರ್ಗ) ಸಂಸ್ಥಾಪಕ ನಿರ್ದೇಶಕರು, ಮಾಜಿ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರು ಮೊ. 7348883110	ಗೋಡೆ ಗಡಿಯಾರ
9	ನಾಗಚಂದ್ರ ಎನ್. ಎಂ.ಎ. ಬಿ.ಇಡಿ,ಡಿ.ಇಡಿ,ಡಿ.ಇಟಿ. (ಸಾಮಾನ್ಯ ವರ್ಗ) ಹಾಲಿ ಅಧ್ಯಕ್ಷರು, ಸಾಹಿತಿ–ರಂಗಕರ್ಮಿ ಮಾಜಿ ಸದಸ್ಯರು, ಕರ್ನಾಟಕ ನಾಟಕ ಅಕಾಡೆಮಿ ಮೊ. 9632841700	ಪೆನ್ನು
11	ಬಸವಣ್ಣ ಬಿ.ಕಾಂ., ಎಲ್‌ಎಲ್‌.ಬಿ. (ಸಾಮಾನ್ಯ ವರ್ಗ) ಹಾಲಿ ಉಪಾಧ್ಯಕ್ಷರು, ಅಧ್ಯಕ್ಷರು, ದಾರಿಪುರ ಹಾಲು ಉತ್ಪಾದಕರ ಸಹಕಾರ ಸಂಘ ಮೊ. 9663805369	ಉಂಗುರ
16	ರಾಜ್‌ಕುಮಾರ್ ಎಸ್. (ಸಾಮಾನ್ಯ ವರ್ಗ) ಹಾಲಿ ನಿರ್ದೇಶಕರು, ಕಾರ್ಯಕಾರಿ ಸಮಿತಿ ಸದಸ್ಯರು, ಮೈಸೂರು ನಗರ ಬಿಜೆಪಿ ಮಾಜಿ ನಿರ್ದೇಶಕರು, ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘ ಮೊ: 8050298139	ಸೂರ್ಯ
17	ರಂಗನಾಥನ್ ಎ.ಎಸ್. (ಸಾಮಾನ್ಯ ವರ್ಗ) ಹಾಲಿ ನಿರ್ದೇಶಕರು, ನಿವೃತ್ತ ಎಸ್.ಬಿ.ಐ. ನೌಕರರು ಮಾಜಿ ಉಪಾಧ್ಯಕ್ಷರು, ಎಂ.ಕೆ.ಬಿ.ಎಸ್. ಮೊ. 9481319303	ಆಟೋರಿಕ್ಷಾ
18	ಶ್ಯಾಮಲ ಎಸ್. ಬಿ.ಎಸ್ಸಿ (ಮಹಿಳಾ ಮೀಸಲು) ಮಾಜಿ ಅಧ್ಯಕ್ಷರು, ಹಾಲಿ ನಿರ್ದೇಶಕರು ಮೊ. 9880142506	ಕೊಳಲು
20	ಶೇಷಾದ್ರಿ ಟಿ.ಎಸ್. ಬಿ.ಎಸ್ಸಿ.,ಬಿ.ಇಡಿ.,ಎಂ.ಎ.(ಅರ್ಥಶಾಸ್ತ್ರ) (ಸಾಮಾನ್ಯ ವರ್ಗ) ನಿವೃತ್ತ ಉಪನ್ಯಾಸಕರು, ಮಾಜಿ ಅಧ್ಯಕ್ಷರು, ಹಾಲಿ ನಿರ್ದೇಶಕರು ಮೊ. 9449065235	ಸಿಲಿಂಡರ್
21	ಶೇಷಾದ್ರಿ ಬಿ.ಕೆ. ಬಿ.ಎಸ್ಸಿ (ಸಾಮಾನ್ಯ ವರ್ಗ) ಹಾಲಿ ನಿರ್ದೇಶಕರು ನಿವೃತ್ತ ಲೆಕ್ಕಪರಿಶೋಧನ ಅಧಿಕಾರಿ ಕರ್ನಾಟಕ ರಾಜ್ಯ ಲೆಕ್ಕಪತ್ರ ಇಲಾಖೆ ಮೊ. 9880142506	ಸೇಬು
23	ಸುಬ್ಬಣ್ಣ ಹೆಚ್.ವಿ. (ಸಾಮಾನ್ಯ ವರ್ಗ) ಹಾಲಿ ನಿರ್ದೇಶಕರು, ಜಂಟಿ ಕಾರ್ಯದರ್ಶಿ, ಆದರ್ಶ ಸೇವಾ ಸಂಘ ಮೊ.: 9538465609	ದೀಪ
24	ಹನುಮಂತಯ್ಯ ಎಂ. ಬಿ.ಎ. (ಪರಿಶಿಷ್ಟಜಾತಿ) ನಿವೃತ್ತ ಸಹಾಯಕ ನಿಯಂತ್ರಕರು, ಕಾನೂನು ಮಾಪನ ಶಾಸ್ತ್ರ ಇಲಾಖೆ ಮೊ.: 9880709983	ತಕ್ಕಡಿ

ಚುನಾವಣಾ ದಿನಾಂಕ: 31–12–2023ನೇ ಭಾನುವಾರ
ಸಮಯ: ಬೆಳಗ್ಗೆ 9.00 ರಿಂದ ಸಂಜೆ 4.00 ರವರೆಗೆ

ಸ್ಥಳ : ಶ್ರೀ ಕಾವೇರಿ ವಿದ್ಯಾ ಸಂಸ್ಥೆ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಮೈಸೂರು

ಅವಿರೋಧವಾಗಿ ಆಯ್ಕೆಯಾದ ಮುತ್ತುರಾಜ್, ಜಿ.ಕೀರ್ತಿಪ್ರಕಾಶ್ (ಒಬಿಸಿ), ಎಸ್. ಲಕ್ಷ್ಮೀದೇವಿ (ಪ.ಪಂ.) ಆದ ನಾವು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ಈ ಮೇಲ್ಕಂಡ ಅಭ್ಯರ್ಥಿಗಳಿಗೆ ತಮ್ಮ ಅಮೂಲ್ಯ ಮತ ನೀಡಿ ಜಯಶೀಲರನ್ನಾಗಿಸಬೇಕೆಂದು ತಮ್ಮಲ್ಲಿ ವಿನಂತಿಸುತ್ತೇವೆ.

[redacted]

ಮತದಾನ ಮಾಡಲು ಸಪ್ತರ್ಷಿಯ ಗುರುತಿನ ಚೀಟಿ ಕಡ್ಡಾಯ. 12ಕ್ಕಿಂತ ಹೆಚ್ಚು ಮತಗಳನ್ನು ಚಲಾಯಿಸಿದರೆ ಅಸಿಂಧುವಾಗುತ್ತದೆ. ದಯವಿಟ್ಟು ಮತಗಟ್ಟೆಗೆ ಬಂದು ತಮ್ಮ ಪವಿತ್ರವಾದ ಹಕ್ಕನ್ನು ಚಲಾಯಿಸಲು ವಿನಂತಿಸಿಕೊಳ್ಳುತ್ತೇವೆ.